ಜೂನ್ 2017 ಸಂಚಿಕೆ – 11 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................................................................. 2

ಭಾರತದ ಯುವಜನತೆ; ಹೊರ ಹೊಮ್ಮುತ್ತಿರುವ ಶಕ್ತಿ ............ 3
*** ಎ. ಕೆ. ದುಬೆ**

ಉದ್ಯೋಗ ಸೃಷ್ಟಿ : ಸವಾಲು ಮತ್ತು ಪರಿಹಾರೋಪಾಯ ...... 8
*** ಅಲಕಾ ಎನ್. ಶರ್ಮಾ ಮತ್ತು ಬಲವಂತ್ ಸಿಂಗ್ ಮೆಹತಾ**

ಯುವಜನರು – ಪರಿವರ್ತನೆಯ ಹರಿಕಾರರು ..................... 12
*** ಸುನೀತಾ ಸಂಘಿ**

ಉದ್ಯೋಗದಾತರ ಸೃಷ್ಟಿ ..................................................... 18
*** ಸೌರಭ್ ಸನ್ಯಾಲ್ ಮತ್ತು ರಂಜೀತ್ ಮೆಹತಾ**

ತನು–ಮನಗಳ ಸಾಮರಸ್ಯಕ್ಕಾಗಿ ಯೋಗ ............................. 23
*** ಡಾ. ಈಶ್ವರ ಎನ್. ಆಚಾರ್ಯ ಮತ್ತು ಡಾ. ರಾಜೀವ್ ರಸ್ತೋಗಿ**

ದೇಹ – ಆತ್ಮ – ಸಾಕ್ಷಾತ್ಕಾರ .............................................. 27
*** ಈಶ್ವರ ವಿ. ಬಸವರಡ್ಡಿ**

ಕರ್ನಾಟಕದ ಯುವಜನ ಸಂಖ್ಯೆಯ ಚಿತ್ರಣ .......................... 30
*** ಡಾ. ಸಿ.ಎಂ. ಲಕ್ಷ್ಮಣ**

ನೆಹರೂ ಯುವ ಕೇಂದ್ರ: ಸಬಲೀಕರಣದ ಆಶಾಕಿರಣ ........... 34
*** ಎಸ್. ಸಿದ್ದರಾಮಪ್ಪ**

ಕಲಬುರಗಿಯಲ್ಲಿ ಕೊನರಿದ "ಕೂಸು" ................................. 37
*** ಹೆಪ್ಸಿಬಾ ರಾಣಿ ಕೋರ್ಲಪಟಿ**

ನಮ್ಮ ಬೆಳೆ – ನಮ್ಮ ಬೆಲೆ ................................................... 40
*** ಮನೋಜ್ ರಾಜನ್**

ಮನ್ ಕೀ ಬಾತ್ ............................................................... 47
*** ಕೃಪೆ; ಆಕಾಶವಾಣಿ, ಬೆಂಗಳೂರು**

ನಿಮಗಿದು ತಿಳಿದಿದೆಯೇ? ................................................... 51

ವಾರ್ತಾ ವಿಶೇಷ ............................................................... 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**


*Log on to*
**http://publicationsdivision.nic.in/,**
*in collaboration with* **bharatkosh.gov.in**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಯುವ ಜನತೆ: ಭವಿತವ್ಯದ ಭರವಸೆ




ಯುವ ಜನತೆ ಆಯಾ ದೇಶದ ಭವ್ಯ ಭವಿತವ್ಯ. ಅಭಿವೃದ್ಧಿ ಹೊಂದಿದ ಜಗತ್ತಿನ ಬಹುತೇಕ ದೇಶಗಳಲ್ಲಿ ವಯೋವೃದ್ಧರೇ ಹೆಚ್ಚುತ್ತಿರುವಾಗ ಭಾರತ 2020ರ ವೇಳೆಗೆ ವಿಶ್ವದಲ್ಲೆ ಅತಿ 'ಯುವ' ದೇಶವಾಗಿ ಹೊರಹೊಮ್ಮುತ್ತಲಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. 40 ಭಾಗ ಯುವಶಕ್ತಿಯಾಗಿರಲಿದ್ದು, ಇದು ಕ್ರಿಯಾಶೀಲ, ಲವಲವಿಕೆಯ, ಪ್ರಚ್ಛನ್ನ ವಲಯವಾಗಿದೆ ಮತ್ತು ದೇಶದ ಅತಿ ಮೌಲ್ಯಯುತ ಮಾನವ ಸಂಪನ್ಮೂಲವಾಗಿದೆ. ಭಾರತದ ಈ "ಯುವಶಕ್ತಿ" ವಿಶ್ವದ ಅರ್ಥಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರಿಗೂ ಆಸಕ್ತಿಯ ವಿಷಯವಾಗಿದೆ. ದೇಶದ ಭವಿಷ್ಯದ ದೃಷ್ಟಿಯಿಂದ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನತೆ ಪಾತ್ರ ಮಹತ್ತರವಾಗಿದೆ. ಅವರ ಉತ್ಸಾಹ, ಶಕ್ತಿಯ ಚಿಲುಮೆ ಒಳಗೊಂಡ ರಚನಾತ್ಮಕ ಸಾಮರ್ಥ್ಯ, ದೇಶವನ್ನು ಯಾವುದೇ ಎತ್ತರಕ್ಕೆ ಕೊಂಡೊಯ್ಯಬಲ್ಲದು.

ಇಂಜಿನಿಯರಾಗಿ, ವೈದ್ಯರಾಗಿ, ನ್ಯಾಯವಾದಿಗಳಾಗಿ, ಬ್ಯಾಂಕರ್‌ಗಳಾಗಿ, ಉದ್ದಿಮೆದಾರರಾಗಿ, ಕ್ರೀಡಾಪಟುಗಳಾಗಿ – ಹೀಗೆ ವಿವಿಧ ರೂಪಗಳಲ್ಲಿ ಯುವ ಜನತೆ ದೇಶಕ್ಕೆ ನೇತೃತ್ವ ಕಲ್ಪಿಸುವ ಸಾಮರ್ಥ್ಯ, ಅವಕಾಶ ಹೊಂದಿದೆ.

ದೇಶದ ಅಭಿವೃದ್ಧಿಗೆ ಕೊಡುಗೆ ದೊರಕಿಸಿಕೊಳ್ಳುವಂತೆ ಈ ಸಂಪನ್ಮೂಲಕ್ಕೆ ಸೂಕ್ತವಾದ ಮಾರ್ಗದರ್ಶನ ನೀಡಿ, ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ ಹುಟ್ಟಿದ ಮಗು ಆರೋಗ್ಯಕರ ವಾತಾವರಣದಲ್ಲಿ ಬೆಳೆದು ಉತ್ತಮ ಶಿಕ್ಷಣ ಪಡೆಯುವ ಪರಿಸರ ನಿರ್ಮಿಸಬೇಕಾಗಿದೆ. 2009ರ ಶಿಕ್ಷಣದ ಹಕ್ಕು, ಈ ನಿಟ್ಟಿನಲ್ಲಿ ಉತ್ತಮ ಕ್ರಮವಾಗಿದೆ. ಸರ್ವಶಿಕ್ಷಣ ಅಭಿಯಾನ, ಇ–ಪಾಠಶಾಲಾ, ಉಡಾನ್ ಮೊದಲಾದವು ಎಲ್ಲ ಮಟ್ಟಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವ ಕಾರ್ಯಕ್ರಮಗಳಾಗಿವೆ. ಗುಡ್ಡಗಾಡು, ಅತಿದೂರದ ಜನವಸತಿ ಪ್ರದೇಶಗಳ ಮಕ್ಕಳಿಗೆ ಶಿಕ್ಷಣ ಒದಗಿಸುವಲ್ಲಿ ದೂರಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತಿದೆ. ಗ್ಯಾನ್, ಸ್ವಯಂ ಮತ್ತು ರಾಷ್ಟ್ರೀಯ ಅಂಕೀಕೃತ ಗ್ರಂಥಾಲಯಗಳಂತಹ ತಂತ್ರಜ್ಞಾನ ಆಧರಿತ ಕ್ರಮಗಳು ದೂರಶಿಕ್ಷಣದ ಹರವು ಹೆಚ್ಚಿಸಿವೆ.

ಶಿಕ್ಷಿತ ಯುವ ಜನತೆಯನ್ನು ಆಯಾ ವೃತ್ತಿ ನಿರ್ದಿಷ್ಟ ಕೌಶಲ್ಯಗಳಲ್ಲಿ ಸನ್ನದ್ಧರಾಗಿಸಬೇಕಿದೆ. ಇಂದಿನ ಸ್ಪರ್ಧಾತ್ಮಕ, ತಂತ್ರಜ್ಞಾನಯುತ ಯುಗದಲ್ಲಿ ಉದ್ಯೋಗ ಗಳಿಸಲು ಸಾಮಾನ್ಯ ಶಾಲಾ/ಕಾಲೇಜು ಶಿಕ್ಷಣವಷ್ಟೇ ಸಾಕಾಗದು. ಯುವಜನರನ್ನು ತಂತ್ರಜ್ಞಾನ ಆಧರಿತ ಕೌಶಲ್ಯ ಸಂಪನ್ನರಾಗಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಆರಂಭಿಸಿದ ಸ್ಕಿಲ್ ಇಂಡಿಯಾ ಮಿಷನ್, ಉದ್ಯೋಗ ಮಾರುಕಟ್ಟೆಗೆ ಅಗತ್ಯವಾದ ಶ್ರಮ ಶಕ್ತಿಯನ್ನು ರೂಪಿಸುವಲ್ಲಿ ನೆರವಾಗುತ್ತಿದೆ. 2022ರ ವೇಳೆಗೆ 40 ಕೋಟಿಗೂ ಅಧಿಕ ಜನರನ್ನು ಅವರಾಯ್ಕೆಯ ವಲಯದಲ್ಲಿ ಕೌಶಲ್ಯ ಪೂರ್ಣರಾಗಿಸುವ ಗುರಿ ಹೊಂದಲಾಗಿದೆ. ಈ ಮಾದರಿಯಲ್ಲಿ ದೂರಶಿಕ್ಷಣದ ಸೌಲಭ್ಯವೂ ಇದೆ.

ಇವೆಲ್ಲ ಸಶಕ್ತೀಕರಣಗಳ ಮುಖ್ಯ ಉದ್ದೇಶ ಯುವ ಜನತೆಗೆ ಲಾಭಯುತ ಉದ್ಯೋಗ ದೊರಕಬೇಕೆಂಬುದೇ ಆಗಿದೆ. ಉದ್ಯೋಗ ಹೊಂದಿರದ ಯುವಶಕ್ತಿ, ಆರ್ಥಿಕತೆಗೆ ಹೊರೆ. ಅಷ್ಟೇ ಅಲ್ಲ ಸಮಾಜದ ಸಾಮರಸ್ಯದ ದೃಷ್ಟಿಯಿಂದಲೂ ಒಳ್ಳೆಯದಲ್ಲ. ಈ ದಿಸೆಯಲ್ಲಿ ಯುವ ಜನತೆಯನ್ನು ಉದ್ಯೋಗಗಳಲ್ಲಿ ತೊಡಗಿಸಲು ಸರ್ಕಾರ ಸ್ಟಾರ್ಟ್‌ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ ಕಾರ್ಯಕ್ರಮ ರೂಪಿಸಿದೆ. ಮುದ್ರಾ, ಸೇತು, ಏಮ್ (ಅಟಲ್ ಆವಿಷ್ಕಾರ ಮಿಷನ್) ಯೋಜನೆಗಳು ಆವಿಷ್ಕಾರದ ಸಂಸ್ಕೃತಿ ಮತ್ತು ಉದ್ಯಮಶೀಲತೆ ಬೆಂಬಲಿಸುವ ಕ್ರಮಗಳಾಗಿವೆ.

ಯುವ ಜನತೆ ರಾಷ್ಟ್ರ ನಿರ್ಮಾಣದ ಆಧಾರ ಸ್ತಂಭ. ದೇಶದ ಭವಿಷ್ಯ, ಭವಿತವ್ಯ ನಿರೂಪಿಸುವ, ನಿರ್ಧರಿಸುವ ಶಕ್ತಿ ಅವರಲ್ಲಿದೆ. ಯಾವುದೇ ದೇಶ ತನ್ನ ಭವ್ಯ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳಲು ಈ ವಿಸ್ಮಯಕಾರಿ ಶಕ್ತಿಯನ್ನು ಬಳಸಬೇಕು. ಫ್ರಾಂಕ್ಲಿನ್ ರೂಸ್‌ವೆಲ್ಟ್ ಹೇಳಿದಂತೆ "ನಮ್ಮ ಯುವ ಜನತೆಗಾಗಿ ಎಲ್ಲ ಕಾಲದಲ್ಲಿಯೂ ನಾವೇ ಭವಿಷ್ಯವನ್ನು ನಿರೂಪಿಸಲಾಗದು; ಆದರೆ, ಭವಿಷ್ಯತ್ತಿಗಾಗಿ ನಮ್ಮ ಯುವ ಜನತೆಯನ್ನು ನಾವೇ ನಿರೂಪಿಸಬಹುದು. ❑

# ಭಾರತದ ಯುವಜನತೆ : ಹೊರ ಹೊಮ್ಮುತ್ತಿರುವ ಶಕ್ತಿ

* ಎ. ಕೆ. ದುಬೆ



"ಸತತ ವಿಸ್ತೃತಗೊಳ್ಳುತ್ತಿರುವ ಯುವಜನತೆಯ ಸಕಾರಾತ್ಮಕ ಅಭಿವೃದ್ಧಿಯ ಪ್ರಭಾವಯುತ ಚಲನಶೀಲತೆಯ ಗಮನವನ್ನು ಅವರ ಸಾಮರ್ಥ್ಯ ಮತ್ತು ಆಸಕ್ತಿಗಳ ಮೇಲೆ ಹರಿಸಬೇಕೇ ಹೊರತು, ಕುಂದು ಕೊರತೆಗಳನ್ನು ನೀಗಿಸುವ ಕಡೆಗಲ್ಲ. ಅಲ್ಲದೆ, ನಮ್ಮ ಕ್ರಮ ಸಮಸ್ಯೆಯಾಧರಿತ ವಿಧಾನದಿಂದ ಪರಿಹಾರ ಆಧರಿತ ವಿಧಾನದತ್ತ ಪರಿವರ್ತನೆಯಾಗಬೇಕು."

'ಯೌವ್ವನ' ಪದವನ್ನು ಯುನೆಸ್ಕೊ ಹೀಗೆ ವ್ಯಾಖ್ಯಾನಿಸುತ್ತದೆ: "ಬಾಲ್ಯದ ಮೇಲಿನ ಅವಲಂಬನೆಯಿಂದ, ಹದಿಹರೆಯದ ಸ್ವಾತಂತ್ರ್ಯದತ್ತ ಪರಿವರ್ತನೆಯ ಅವಧಿ ಮತ್ತು ಸಮುದಾಯದ ಸದಸ್ಯರಾಗಿ ನಮ್ಮ ಸ್ವಾತಂತ್ರ್ಯದ ಬಗೆಗಿನ ತಿಳಿವಳಿಕೆ ವ್ಯಕ್ತವಾಗುವ ಹಂತ. ನಿಶ್ಚಿತ ವಯೋವರ್ಗಕ್ಕಿಂತ ಭಿನ್ನವಾಗಿ ಯುವಕರು ಚಲನಶೀಲ ವರ್ಗಕ್ಕೆ ಸೇರಿದವರು."

2016-17ರ ಯುವಜನ ಮತ್ತು ಕ್ರೀಡಾ ಸಚಿವಾಲಯ (ಯುವಜನ ವ್ಯವಹಾರಗಳ ಇಲಾಖೆ) ವಾರ್ಷಿಕ ವರದಿಯ ಪ್ರಕಾರ, ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ಯುವಜನತೆಯು ಅತ್ಯಂತ ಉತ್ಸಾಹಿ ಕಾರ್ಯಪಡೆಯಾಗಿರುತ್ತದೆ. ಜನಸಂಖ್ಯೆಯಲ್ಲಿ ಶೇ.65%ರಷ್ಟು ಭಾಗವನ್ನು "35 ಕ್ಕಿಂತಲೂ ಕಡಿಮೆ" ವಯೋಮಾನದ ಜನತೆಯಾಗಿ ಹೊಂದುವ ಮೂಲಕ ಭಾರತ ವಿಶ್ವದಲ್ಲೇ ಅತ್ಯಂತ ಯುವ ದೇಶವಾಗಿದೆ. ಭಾರತ ಅತಿ ಹೆಚ್ಚು ಯುವಕರನ್ನು ಹೊಂದಿರುವ ಅತಿದೊಡ್ಡ ದೇಶವೂ ಹೌದು. ಸಚಿವಾಲಯದ 2016-17ನೇ ಸಾಲಿನ ವಾರ್ಷಿಕ ವರದಿಯ ಪ್ರಕಾರ, 2020ರ ವೇಳೆಗೆ, ಭಾರತದ ವಯೋಮಾನವು 28 ವರ್ಷಗಳಾಗಿರಲಿದ್ದು, ಚೀನಾ ಮತ್ತು ಇತರ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ (38 ವರ್ಷ) ಹೋಲಿಸಿದರೆ, ಭಾರತ ಅತ್ಯಂತ ತರುಣ ದೇಶವಾಗಲಿದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. 27.5ರಷ್ಟಿರುವ 15ರಿಂದ 29 ವರ್ಷ ವಯೋಮಾನದ ವರ್ಗವು, ಭಾರತಕ್ಕೆ ಸಶಕ್ತ ಜನಸಂಖ್ಯೆ ವಿಚಾರದಲ್ಲಿ ಅತಿ ಹೆಚ್ಚು ಅನುಕೂಲ ಒದಗಿಸಿದೆ.

ಈ ಜನಸಂಖ್ಯಾಧರಿತ ಲಾಭವನ್ನು ಪಡೆಯಲು, ಯುವಜನರನ್ನು ಲಾಭದಾಯಕ ಒಳಸುರಿವು ಮತ್ತು ಹೊಸಹರಿವು ಪರಿವೃತ್ತಕ್ಕೆ ಒಳಪಡಿಸುವುದು ಅತ್ಯಗತ್ಯವಾಗಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಸಂಭವನೀಯ ಶಕ್ತಿಯಾಗಿರುವ ಯುವಜನತೆಯನ್ನು, ತಕ್ಕ ರೀತಿಯಲ್ಲಿ ನೀತಿಗಳಿಗೆ ಪೂರ್ವಾಭಿಮುಖಗೊಳಿಸುವ ಮತ್ತು ಅವರಿಗೆ ತಕ್ಕ ಬೆಂಬಲ ನೀಡುವ ಅಗತ್ಯವಿದೆ. ಯುವಜನತೆಯು ದೇಶದ ವ್ಯವಸ್ಥೆಯ ಉಪ-ಉತ್ಪನ್ನಗಳನ್ನು ಪರೀಕ್ಷಿಸುವ ಸಿದ್ಧ ಪ್ರಯೋಗಾಲಯವಲ್ಲ. ಬದಲಿಗೆ, ಯುವಜನತೆಯು ಪ್ರಸ್ತುತವೆನಿಸುವ ಸಮಕಾಲೀನ ಕೌಶಲ್ಯಗಳನ್ನು ಆಧರಿಸಿದ ಹೊಸ ಅವಕಾಶಗಳ ಸೃಷ್ಟಿಗೆ ಬಳಕೆಯಾಗಬೇಕಾದ ಪರಿವರ್ತನೀಯ ಶಕ್ತಿಯಾಗಿದೆ.

ಮೈಕೆಲ್ ಗ್ರೀನ್ ತಮ್ಮ 'ಸಾಮಾಜಿಕ ಬದಲಾವಣೆಯ ಕ್ರಿಯಾಶೀಲ ಕತೃಗಳಾಗಿ ಯುವಜನತೆ' ಎಂಬ ಪುಸ್ತಕದಲ್ಲಿ, ಹೀಗೆ ಹೇಳುತ್ತಾರೆ: "ಸತತ ವಿಸ್ತೃತಗೊಳ್ಳುತ್ತಿರುವ ಯುವಜನತೆಯ ಸಕಾರಾತ್ಮಕ ಅಭಿವೃದ್ಧಿಯ ಪ್ರಭಾವಯುತ ಚಲನಶೀಲತೆಯ ಗಮನವನ್ನು ಅವರ ಸಾಮರ್ಥ್ಯ ಮತ್ತು ಆಸಕ್ತಿಗಳ ಮೇಲೆ ಹರಿಸಬೇಕೇ ಹೊರತು, ಕುಂದು ಕೊರತೆಗಳನ್ನು ನೀಗಿಸುವ ಕಡೆಗಲ್ಲ. ಅಲ್ಲದೆ, ನಮ್ಮ ಕ್ರಮ ಸಮಸ್ಯೆಯಾಧರಿತ ವಿಧಾನದಿಂದ ಪರಿಹಾರ ಆಧರಿತ ವಿಧಾನದತ್ತ ಪರಿವರ್ತನೆಯಾಗಬೇಕು."

* ಕಾರ್ಯದರ್ಶಿ, ಯುವಜನ ವ್ಯವಹಾರ, ಭಾರತ ಸರ್ಕಾರ. E-mail : secy-ya@nic.in

ಸಾಮಾಜಿಕ, ರಾಜಕೀಯ ಅಥವಾ ನಾಗರಿಕ ಚಳವಳಿಗಳ ಶ್ರೇಣಿಗಳೊಂದಿಗೆ, ಯುವಜನರು ಚಟುವಟಿಕೆಗಳ ಕೇಂದ್ರಬಿಂದುವಾಗಿದ್ದಾರೆ. "ಎಲ್‌ಜಿಬಿಟಿಕ್ಯೂ" ಚಳವಳಿಯಿಂದ ಹಿಡಿದು, 'ಮಹಿಳೆಯರಿಗೆ ಸಮಾನ ಹಕ್ಕಿನ'ವರೆಗೂ ಮತ್ತು ಪರಿಸರ ಸಂಬಂಧಿತ ಕಳಕಳಿಗಳಿಂದ ಹಿಡಿದು ಮಾನವ ಹಕ್ಕುಗಳವರೆಗೂ – ಯುವಜನತೆಯು ಚಟುವಟಿಕೆಗಳ ಕೇಂದ್ರಬಿಂದುವಾಗಿದ್ದಾರೆ, ಆ ಮೂಲಕ ಸಾಮಾಜಿಕ ಜೀವನದಲ್ಲಿ ನಾನಾ ಕಾರ್ಯಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಸದಾ ಕಾರ್ಯಸಾಧ್ಯ ಒತ್ತಡದ ತಂಡದಂತೆ ಕೆಲಸ ಮಾಡುತ್ತಿದ್ದಾರೆ. ಅವರ ವಿಸ್ತೃತ ಆಸಕ್ತಿಗಳು ಮತ್ತು ಕಾಳಜಿಗಳನ್ನು ಹೊರಹಾಕಲು ಹೊಸ ಮಾಧ್ಯಮ ಸಾಧನಗಳನ್ನು ಸತತವಾಗಿ ಮತ್ತು ವಿಸ್ತೃತವಾಗಿ ಬಳಸಿಕೊಳ್ಳುತ್ತಿದ್ದಾರೆ. ಆ ಮೂಲಕ ಮಾಧ್ಯಮ / ಸಾಮಾಜಿಕ ಜಾಲತಾಣ ಚರ್ಚೆಗೆ ವೇದಿಕೆ ಒದಗಿಸಿ, ಜನಪ್ರಿಯ ಅಭಿಮತವನ್ನು ಪ್ರಚಾರ ಮಾಡಲು ನೆರವಾಗುತ್ತಿದ್ದಾರೆ.

ಈ ಹೊಸ ಮಾಧ್ಯಮ ಸಾಧನಗಳು ಹೊಸ ಆಲೋಚನೆಗಳನ್ನು ರೂಪಿಸಲು ಮಾತ್ರವಲ್ಲದೆ, ಆಲೋಚನೆಗಳ ಸಂಯೋಜನೆ ಮತ್ತು ಸಂವಹನಕ್ಕೆ ನೆರವಾಗುತ್ತಿವೆ, ಇದರಿಂದ ಅಂತಿಮವಾಗಿ ಸಾಮೂಹಿಕ ಅಂಗೀಕಾರವನ್ನು ಪ್ರಮಾಣೀಕರಿಸಲು ಸಹಾಯವಾಗುತ್ತಿದೆ.ಸದಾ ಬದಲಾಗುತ್ತಿರುವ ಸಾಮಾಜಿಕ ತತ್ವಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ ಯುವಜನತೆಗೆ ಇರುವ ಕಾರಣದಿಂದಲೇ ಅವರನ್ನು ಅರ್ಥಪೂರ್ಣ ಆರ್ಥಿಕ/ಸಾಮಾಜಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಇರಬೇಕೆಂದು ಪ್ರತಿಪಾದಿಸಲಾಗುತ್ತದೆ.

ಯುವಜನತೆ, ಎರಡು ತಲೆಮಾರುಗಳ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಬಹುದು. ಇದೊಂದು ತರುಣ ಪಡೆಯಾಗಿದ್ದು, ಅದಕ್ಕೆ ಸೂಕ್ತ ರೀತಿಯಲ್ಲಿ ವಿವರಿಸಿದರೆ, ತನ್ನ ಪ್ರಗತಿ ಮತ್ತು ಅಭಿವೃದ್ಧಿಯನ್ನು ಸುಗಮಗೊಳಿಸಲು ಅಗತ್ಯವಾದ ನಮ್ಯತೆಯನ್ನು ತರಬಲ್ಲದು. ಸೈದ್ಧಾಂತಿಕ ನಿಷ್ಠುರತೆ ಮತ್ತು ವಿವೇಚನಾರಹಿತವಾಗಿ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ– ಈ ತೀವ್ರತೆಗಳು ದೀರ್ಘಕಾಲೀನವಾಗಿ ದೇಶದ ಮೇಲೆ ಯಾವುದೇ ರೀತಿಯ ಸಕಾರಾತ್ಮಕ



ಪರಿಣಾಮ ಬೀರಲಾರವು. ಕೇವಲ ನಿರಂಕುಶತ್ವ ಅಥವಾ ಸ್ವಯಮಾಧಿಕಾರ ಒಂದೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾರದು ಎಂಬುದನ್ನು ಈಗಿನ ಯುವಜನತೆ ಅರ್ಥಮಾಡಿಕೊಳ್ಳುತ್ತಾರೆ. ಸಮಗ್ರ ಕಾರ್ಯಸಾಧ್ಯ ಪಡೆಯಾಗಿ ಹೊರಹೊಮ್ಮಬಹುದಾದ ಘಟಕಗಳನ್ನು ಹತ್ತಿರಕ್ಕೆ ತಂದು ಹೆಣೆಯಬೇಕಿದೆ. ಮೂಲಭೂತವಾಗಿ ಯುವಜನರು ಹೊಸ ಸಾಮಾಜಿಕ ಚಿಂತನೆ, ಆರ್ಥಿಕ ಅಭಿವೃದ್ಧಿ ಮತ್ತು ರಾಜಕೀಯ ಚಟುವಟಿಕೆಯ ವೇಗವರ್ಧಕಗಳಾಗಿದ್ದಾರೆ.

ಇಂದಿನ ಯುವಜನತೆಯು ಅತ್ಯುತ್ತಮ ಅನುಭವವನ್ನು ಪಡೆಯುವ, ಮತ್ತು ಪರೀಕ್ಷೆಗೆ ಒಳಪಡಿಸುವ ಹಾಗೂ ಅದನ್ನು ಅರ್ಥಪೂರ್ಣ ಉದ್ದೇಶಕ್ಕಾಗಿ ಸೂಕ್ತ ಪ್ರಮಾಣದಲ್ಲಿ, ಬಳಸುವ ಸ್ಥಿತಿಯಲ್ಲಿದ್ದಾರೆ.

ತರ್ಕ, ವಾದ ಮತ್ತು ಸಂಶೋಧನೆಗಳು ಕಠಿಣ ಸಾಮಾಜಿಕ ವ್ಯವಸ್ಥೆಯ ಗೋಡೆಯನ್ನು ಒಡೆಯಬಲ್ಲ ಶಕ್ತಿಗಳಾಗಿದ್ದು, ಇವುಗಳನ್ನು ಯುವಜನತೆ ಬಳಸುತ್ತಿದೆ. ಪರಸ್ಪರ ಅಂತರ–ಭೋಜನ ಮತ್ತು ಅಂತರ–ಸಮುದಾಯ ವಿವಾಹದ ವಿಚಾರಗಳಲ್ಲಿ ಈಗಿನ ಯುವಜನತೆ ಮೊದಲಿನಷ್ಟು ಅನಮ್ಯವಾಗಿಲ್ಲ. ಯಾವುದೇ ಜಾತಿ, ವರ್ಗ ಮತ್ತು ವರ್ಣ ಅಥವಾ ಲಿಂಗದ ಭೇದವಿಲ್ಲದೆ, ಅವರು ಸಹ ಮಾನವರ ಕುರಿತಾದ ಅಪಮಾನಕಾರಿ ಮತ್ತು ಸಂವೇದನಾರಹಿತ ನಡವಳಿಕೆಗಳನ್ನು ಪ್ರಶ್ನಿಸುತ್ತಿದ್ದಾರೆ. ಇದು ದೊಡ್ಡ ಮಟ್ಟದಲ್ಲಿ ಇಲ್ಲವಾದರೂ, ಸರಿಯಾದ ದಿಶೆಯಲ್ಲಿ ಸಣ್ಣ ಹೆಜ್ಜೆಯನ್ನು ದೃಢವಾಗಿ ಮುಂದಿರಿಸಲಾಗಿದೆ.

ಮೂಲವನ್ನು ಕಂಡು ಹಿಡಿಯಲು ಯುವಜನತೆಗೆ ನೆರವಾಗುವ ಇರುವ ಅತ್ಯಂತ ಮಹತ್ವದ ಅಂಶವೆಂದರೆ, ಅದು ತಂತ್ರಜ್ಞಾನದ ಬಳಕೆ. ನಗದು ರಹಿತ ಆರ್ಥಿಕತೆ, ಡಿಜಿಟಲ್ ಇಂಡಿಯಾ ಇತ್ಯಾದಿ ಪರಿಕಲ್ಪನೆಗಳು ಮತ್ತು ಕ್ರಮಗಳ ಮೂಲಕ ಡಿಜಿಟಲೀಕರಣ ಪ್ರಯತ್ನಗಳ ಬಗ್ಗೆ ಅರಿವು ಮೂಡಿಸುವ ಸರ್ಕಾರದ ಪ್ರಯತ್ನದಿಂದಾಗಿ ಆರ್ಥಿಕತೆಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ತಂತ್ರಜ್ಞಾನವು ಪರಿಣಾಮಕಾರಿ ಆಯ್ಕೆಯಾಗಿ ಹೊರಹೊಮ್ಮಿದೆ. ನಾವು ದೈನಂದಿನ ಜೀವನದಲ್ಲಿ ತಿಳಿದಿರುವಂತೆ ಮತ್ತು ಬಳಸುವಂತೆ, ತಂತ್ರಜ್ಞಾನವು ಪ್ರಗತಿಯ ಸಕಾರಾತ್ಮಕ ಅಂಶವಾಗಿದೆ. ತಂತ್ರಜ್ಞಾನವು ಮನುಕುಲಕ್ಕೆ ಅಸಾಧ್ಯವೆನಿಸಿದ್ದನ್ನೂ ಮಾಡಬಲ್ಲ ಸಾಮರ್ಥ್ಯ ಒದಗಿಸಿದೆ ಮತ್ತು ನಾವು ಪ್ರತಿನಿತ್ಯ ಹೊಸ ಮೈಲುಗಲ್ಲು ಸಾಧಿಸಲು ಯತ್ನಿಸುತ್ತಿದ್ದೇವೆ. ತಂತ್ರಜ್ಞಾನವನ್ನು ಜನಜೀವನದ ಸುಧಾರಣೆಗಾಗಿಯೂ ಬಳಸಲಾಗುತ್ತಿದೆ–ಅದರಲ್ಲೂ ಅಭಿವೃದ್ಧಿಶೀಲ ದೇಶಗಳಲ್ಲಿ ಇದು ಹೆಚ್ಚಾಗಿ ನಡೆಯುತ್ತಿದೆ.

ಡಿಜಿಟಲ್ ಇಂಡಿಯಾ ಅಭಿಯಾನವು ವಿಶ್ವದತ್ತ ಮತ್ತಷ್ಟು ಸಂಘಟಿತವಾಗಿ ಎದ್ದು ನಿಲ್ಲಲು ಯುವಜನತೆಗೆ ಬಲ ನೀಡಿದೆ. ಇದು ತ್ವರಿತ ಸಂವಹನ, ತ್ವರಿತ ಕಲಿಕೆಗೆ ದಾರಿ ಮಾಡುವುದಲ್ಲದೆ, ಭೌಗೋಳಿಕವಾಗಿ ದೂರ ದೂರ ಇರುವ ಎರಡು ಸ್ಥಳಗಳನ್ನು ಒಂದೇ ವೇದಿಕೆಯಲ್ಲಿ ಬೆಸೆಯುತ್ತದೆ. ಇದು ಒಂದೇ ಆಲೋಚನೆ ಇರುವವರ ತಂಡದಂತೆ ಕೆಲಸ ಮಾಡುತ್ತದೆ ಮತ್ತು ಸಾಧ್ಯವಿರುವ ಪರಿಹಾರ ಮತ್ತು ಫಲಿತಾಂಶಗಳನ್ನು ಒದಗಿಸುತ್ತದೆ.

ಒಂದು ಗುಂಡಿಯ ಸ್ಪರ್ಶದೊಂದಿಗೆ, ನಾವು ಆಲೋಚನೆಗಳನ್ನು ಹಂಚಿ–ಕೊಳ್ಳಬಹುದು, ಆಲೋಚನೆ ಮತ್ತು ಕ್ರಿಯೆಗಳನ್ನು ಬೇರೆಯವರೊಂದಿಗೆ ಚರ್ಚಿಸಿ, ಸಂಯೋಜಿಸಬಹುದು. ತಂತ್ರಜ್ಞಾನವು ಇಂದು ನಮ್ಮ ಕಣ್ಣಿನ ದೃಷ್ಟಿಯನ್ನೂ ಮೀರಿದ್ದಾಗಿದೆ. ಒಬ್ಬ ವಿದ್ಯಾರ್ಥಿಯು ಅಧ್ಯಯನ ಸಾಮಗ್ರಿಯ ಮಹಾಪೂರವನ್ನೇ ಪಡೆಯಬಹುದು ಮತ್ತು ನಿರ್ದಿಷ್ಟ ವಿಷಯದಲ್ಲಿ ಪರಿಣತಿ ಹೊಂದಿರುವ ಅಧ್ಯಯನ ಕೇಂದ್ರಕ್ಕೆ ಅರ್ಜಿ ಸಲ್ಲಿಸಬಹುದು. ತಂತ್ರಜ್ಞಾನವು ಸಮಾನ ಅವಕಾಶಗಳನ್ನು ಸೃಷ್ಟಿಸಿದೆ; ಕನಿಷ್ಠ ಲಭ್ಯತೆ ವಿಚಾರದಲ್ಲಾದರೂ ಇದು ನಿಜವಾಗಿದೆ. ಈ ವಿಚಾರದಲ್ಲೂ ಯಶಸ್ಸಿನ ಕೀರ್ತಿ ಯುವಜನತೆಗೆ ಸೇರಬೇಕು, ಏಕೆಂದರೆ, ಹೊಸ ತಾಂತ್ರಿಕ ಆಯ್ಕೆಗಳನ್ನು ಅವರು ಕಲಿತು ಅಳವಡಿಸಿಕೊಳ್ಳುತ್ತಿದ್ದಾರೆ.

ಅಪಾಯವನ್ನು ಎದುರಿಸುವ ಉತ್ಸಾಹ ಮತ್ತು ಸ್ಟಾರ್ಟ್ ಅಪ್‌ಗಳ ಏಳ್ಗೆಯು

ಯುವಜನತೆ ಮತ್ತು ತಂತ್ರಜ್ಞಾನದ ಅತ್ಯುತ್ತಮ ಸಾಧನೆಯಾಗಿದೆ.ನಿರ್ದಿಷ್ಟ ಕೌಶಲ್ಯಗಳ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಹೆಚ್ಚು ಹೆಚ್ಚು ಕಾರ್ಯಯೋಜನೆಗಳನ್ನು ಕೈಗೊಳ್ಳುವುದರೊಂದಿಗೆ, ಉದ್ದಿಮೆಗಳನ್ನು ಸ್ಥಾಪಿಸುವ ಮತ್ತು ಸೇವೆಗಳನ್ನು ಒದಗಿಸುವ ವಿಚಾರದಲ್ಲಿ ಶ್ರೀಮಂತರ ಆಧಿಪತ್ಯಕ್ಕೆ ತೆರೆ ಬಿದ್ದಿದೆ. ಕೇವಲ ಯುವಕರ ಕೆಚ್ಚು ಮತ್ತು ತಂತ್ರಜ್ಞಾನದ ಸಮ್ಮಿಲನದಿಂದಾಗಿ ಔದ್ಯಮಿಕತೆಯು ಜಾಗತಿಕವಾಗಿ ಎಲ್ಲರಿಗೂ ಲಭ್ಯವಾಗುವಂತಾಗಿದೆ.

ಸರ್ಕಾರವು, ಯುವಜನ ಮತ್ತು ಕ್ರೀಡಾ ಸಚಿವಾಲಯದ ಮೂಲಕ, ಭಾರತೀಯ ಯುವಜನತೆಯ ಲಾಭದಾಯಕ ಅಭಿವೃದ್ಧಿ ಮತ್ತು ಪ್ರಗತಿಗೆ ಅಗತ್ಯವಾದ ಅಂಶಗಳನ್ನು ಸತತವಾಗಿ ಪರಿಶೀಲಿಸುತ್ತಿದೆ.ತನ್ನ ಸಾಮಾನ್ಯ ವಿಮರ್ಶೆಗಳ ಜೊತೆಗೆ, ಸಚಿವಾಲಯವು ಯುವಜನತೆಗೆ ಸಂಬಂಧಿಸಿದ ಶಿಬಿರಗಳು, ತರಬೇತಿ, ಜೀವನಶೈಲಿ/ನಾಯಕತ್ವ ಕೌಶಲ್ಯಗಳ ಅಭಿವೃದ್ಧಿಗೆ ಹೊಸ ಉಪಕ್ರಮಗಳು/ಯೋಜನೆಗಳನ್ನು ರೂಪಿಸುತ್ತಿದೆ.

2016–17ನೇ ಸಾಲಿನ ವಾರ್ಷಿಕ ವರದಿಯ ಪ್ರಕಾರ, 'ರಾಷ್ಟ್ರೀಯ ಯುವಜನ ನೀತಿ–2014' ಇಡೀ ದೇಶದ ಯುವಕರ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ಅವರ ಸಂಪೂರ್ಣ ಸಾಮರ್ಥ್ಯದ ಸದ್ಬಳಕೆ ಮೂಲಕ ಉತ್ಪಾದಕ ರೀತಿಯಲ್ಲಿ ಕೊಡುಗೆ ನೀಡಲು ಅವರನ್ನು ಸಜ್ಜುಗೊಳಿಸುವಲ್ಲಿ ತನ್ನ ಬದ್ಧತೆಯನ್ನು ಪುನರುಚ್ಚರಿಸುತ್ತದೆ. "ರಾಷ್ಟ್ರೀಯ ಯುವಜನ ನೀತಿ–2014, ಭಾರತೀಯ ಯುವಜನತೆ ಕುರಿತಾಗಿ ಸಮಗ್ರ ದೃಷ್ಟಿಯನ್ನು ಪ್ರಸ್ತಾಪಿಸಿದ್ದು, ದೇಶದ ಜನರನ್ನು ತಮ್ಮ ಸಂಪೂರ್ಣ ಶಕ್ತಿ ಸಾಮರ್ಥ್ಯ ಬಳಕೆಗೆ ಅಣಿಗೊಳಿಸುವುದು ಮತ್ತು ಆ ಮೂಲಕ ವಿಶ್ವದಲ್ಲಿ ಭಾರತಕ್ಕೆ ಸೂಕ್ತ ಸ್ಥಾನಮಾನ ದೊರಕಿಸುವುದು ಇದರ ಉದ್ದೇಶವಾಗಿದೆ."

### 'ರಾಷ್ಟ್ರೀಯ ಯುವಜನ ನೀತಿ–2014'ಯ ಉದ್ದೇಶಗಳು

(i) ಭಾರತದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಬಲ್ಲ ಉತ್ಪಾದಕ ಕಾರ್ಯಪಡೆಯನ್ನು ರಚಿಸುವುದು.



**ಇದರ ಆದ್ಯತಾ ವಿಷಯಗಳೆಂದರೆ:**

- ಶಿಕ್ಷಣ
- ಉದ್ಯಮಶೀಲತೆ
- ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ

(ii) ಮುಂದಿನ ತಲೆಮಾರಿನ ಉಸ್ತುವಾರಿ ನೋಡಿಕೊಳ್ಳಬಲ್ಲ, ಬಲಿಷ್ಠ, ಆರೋಗ್ಯವಂತ ಪೀಳಿಗೆಯನ್ನು ಈ ಮೂಲಕ ಸೃಷ್ಟಿಸುವುದು.

- ಆರೋಗ್ಯ – ಆರೋಗ್ಯವಂತ ಜೀವನಶೈಲಿ
- ಕ್ರೀಡೆ

(iii) ಸಾಮಾಜಿಕ ಮೌಲ್ಯಗಳನ್ನು ಬಿತ್ತುವುದು ಮತ್ತು ತರ್ಕಬದ್ಧ ಒಡೆತನವನ್ನು ಸೃಷ್ಟಿಸಲು ಸಮುದಾಯ ಸೇವೆಯನ್ನು ಉತ್ತೇಜಿಸುವುದು. ಇದರ ಕಾರ್ಯಸಾಧನಗಳೆಂದರೆ:

- ಸಾಮಾಜಿಕ ಮೌಲ್ಯಗಳ ಉತ್ತೇಜನ
- ಸಮುದಾಯ ಚಟುವಟಿಕೆಗಳು

(iv) ಸರ್ಕಾರದ ಎಲ್ಲಾ ಕೇಂದ್ರಗಳಲ್ಲೂ ನಾಗರಿಕ ಚಟುವಟಿಕೆಯಲ್ಲಿ ಯುವಜನತೆ ಪಾಲ್ಗೊಳ್ಳುವಿಕೆಗೆ ಅನುವುಮಾಡಿಕೊಡುವುದು. ಇವುಗಳ ಮೂಲಕ:

- ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಳ್ಳುವಿಕೆ
- ಯುವಜನತೆ ಸಕ್ರಿಯತೆ ಸಾಧನೆ

(v) ಸಂಕಷ್ಟದಲ್ಲಿರುವ ಯುವಕರಿಗೆ ನೆರವು ನೀಡುವುದು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಹಾಗೂ ಅಪ್ರಧಾನ ಸ್ಥಿತಿಯಲ್ಲಿರುವ ಎಲ್ಲಾ ಯುವಕರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು. ಇಲ್ಲಿ ಸರ್ವರ ಒಳಗೊಳ್ಳುವಿಕೆ ಮತ್ತು ಸಾಮಾಜಿಕ ನ್ಯಾಯಕ್ಕೆ ಮೊದಲ ಆದ್ಯತೆ.

ಪ್ರಸ್ತುತ ಸರ್ಕಾರವು ಯುವಜನರ ಸಮಗ್ರ ಅಭಿವೃದ್ಧಿಗಾಗಿ ನೆರವಾಗಲು ಮತ್ತು ಇದರಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಉದಾಹರಣೆಗೆ, ಯುವಜನರನ್ನು ದೇಶ ಕಟ್ಟುವ ಚಟುವಟಿಕೆಗಳಲ್ಲಿ ತೊಡಗಿಸಲು ನೆಹರೂ ಯುವ ಕೇಂದ್ರ ಸಂಘಟನೆಗೆ ನಿರ್ದೇಶನ ನೀಡಲಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯು (ಎನ್‌ಎಸ್‌ಎಸ್) ಸಾಮಾಜಿಕ ಸ್ವಯಂ ಸೇವೆಯ ಮೂಲಕ ಯುವಜನತೆಯಲ್ಲಿ ನೈತಿಕ ಮತ್ತು ಮಾನವೀಯ ಗುಣಗಳನ್ನು ಬೆಳೆಸುತ್ತದೆ. 'ಯುವಜನ ಮತ್ತು ಹದಿಹರೆಯದವರ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮ' ಎಂಬ ಯೋಜನೆಯೂ ಇದೆ. ಯುವ ಜನತೆಯನ್ನು ಉತ್ತೇಜಿಸಲು ರಾಷ್ಟ್ರೀಯ ಯುವ ಹಬ್ಬಗಳು ಮತ್ತು ಪ್ರಶಸ್ತಿ ನೀಡಿಕೆಯಲ್ಲಿ ಇದು ತೊಡಗಿದೆ.

2011ರ ಜನಗಣತಿ ಪ್ರಕಾರ, ಭಾರತದ ಜನಸಂಖ್ಯೆಯ ಶೇ.41ರಷ್ಟು 20 ವರ್ಷಕ್ಕಿಂತ ಕೆಳಗಿನ ವಯೋಮಾನದ್ದಾಗಿದೆ. ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಈ ವಯೋಮಾನವು ಅತ್ಯಂತ ಮಹತ್ವದ್ದಾಗಿದ್ದು, ಸೂಕ್ತ ಸಲಹೆ, ಮಾರ್ಗದರ್ಶನ ಮತ್ತು ನಿರ್ದೇಶನ ಒದಗಿಸುವುದರ ಮೇಲೆ ಈ ವಯೋಮಾನದ ಭವಿಷ್ಯ ನಿಂತಿದೆ. ದುರದೃಷ್ಟಕರ ವಿಷಯವೆಂದರೆ, ಇಂದಿನ ಯುವಜನತೆಯು ತ್ವರಿತ ನಗರೀಕರಣದ ದುಷ್ಪರಿಣಾಮಗಳಿಗೆ ಒಳಗಾಗುತ್ತಿದ್ದು, ಜೀವನ ನಿರ್ವಹಣೆಗೂ ಅಪರಾಧ ಕೃತ್ಯಗಳತ್ತ ಸೆಳೆಯಲ್ಪಡುತ್ತಿದ್ದಾರೆ.ಲಭ್ಯತೆ ಮತ್ತು ಸಂಪರ್ಕಶೀಲತೆ ನಡುವಿನ ಅಂತರವೇ ಈ ನಕಾರಾತ್ಮಕ ಪರಿಣಾಮಕ್ಕೆ ಮುಖ್ಯ ಕಾರಣವಾಗಿದೆ. ಇದಕ್ಕೆ ಸರ್ಕಾರ ಹಲವು ಯೋಜನೆಗಳು, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ– ಅವುಗಳನ್ನು ಪಡೆಯುವ ಹಾದಿ ಅಷ್ಟು ಸುಲಭವಾಗಿಲ್ಲ. 'ಆರ್ಥಿಕ ಮಿತಿಗಳು' ಅಥವಾ 'ಸಾಮಾಜಿಕ ರಚನೆ'ಯು ಈ ಯೋಜನೆಗಳನ್ನು ಪಡೆಯುವಲ್ಲಿ ಪ್ರಮುಖ ಅಡ್ಡಗೋಡೆಗಳಾಗಿವೆ. ವಿಸ್ತೃತ ಶೈಕ್ಷಣಿಕ ಮಟ್ಟದಲ್ಲಿ ಯುವಜನತೆಯ ಸಮಸ್ಯೆಗಳು




ಮತ್ತು ಅದನ್ನು ಎದುರಿಸುವ ಕಾರ್ಯತಂತ್ರದ ಬಗ್ಗೆ ಅರಿವಿಲ್ಲದಿರುವುದು ವೈಫಲ್ಯಕ್ಕೆ ಮುಖ್ಯ ಕಾರಣವಾಗಿದೆ. ಶೈಕ್ಷಣಿಕ ರಂಗವು, ಪೂರ್ಣ ಮಟ್ಟದಲ್ಲಿ ಸಂವೇದನಾಶೀಲವಾಗಿಲ್ಲ, **'ಹೆಚ್ಚುತ್ತಿರುವ ಯುವಕರ ಗುರುತಿಸುವಿಕೆ ಸಮಸ್ಯೆ'**, ಯುವಜನತೆಯ ಸಾಮರ್ಥ್ಯ ಮತ್ತು ಶಿಕ್ಷಣ ನೀಡಿಕೆಯಲ್ಲಿ ಅಂತರ ಶಾಸ್ತ್ರೀಯ ವಿಧಾನದ ಅಳವಡಿಕೆಯೊಂದರಿಂದಲೇ ದೊರೆಯಬಹುದಾದ ಹಲವು ಪ್ರಯೋಜನಗಳನ್ನು ಶಿಕ್ಷಣ ರಂಗ ಗುರುತಿಸಿಲ್ಲ. ಹೊಸ ಆಲೋಚನೆಗಳೊಂದಿಗೆ ಕಾರ್ಯ ನಿರತವಾಗಿರುವ ಯುವಜನತೆಯನ್ನು ಗುರುತಿಸುವ, ಅವರನ್ನು ಅಂಗೀಕರಿಸುವ ಮತ್ತು ಅವರ ಕೆಲಸಗಳಿಗೆ ತಕ್ಕ ಮನ್ನಣೆ ನೀಡಬೇಕಾದ ತುರ್ತು ಅಗತ್ಯವಿದೆ. ಈ ಗುರುತಿಸುವಿಕೆಯು, ನಿರೀಕ್ಷೆಗಳಿಂದ ಕೂಡಿದ ಯುವಜನರ ಕಠಿಣ ಮತ್ತು ಅನಮ್ಯ ಮನೋರೂಢಿಗಳಿಗೆ ವಿಭಿನ್ನವಾಗಿರಬೇಕಿದೆ. ಮಾತುಕತೆ ಮತ್ತು ಇತರ ಕ್ರಮಗಳ ಮೂಲಕ ಯುವಜನತೆಯ ಪಾಲಿಗೆ ಮಹತ್ವಪೂರ್ಣ ಎನಿಸಿರುವ ಅಂಶಗಳನ್ನು ರೂಪಿಸುವುದು ಅಗತ್ಯವಾಗಿದೆ. ಅಪಾರ ಪ್ರಶಂಸೆಗೆ ಒಳಪಟ್ಟಿರುವ ಮತ್ತು ವಿಸ್ತೃತವಾಗಿ ಜಾರಿಗೊಳಿಸಲಾಗುತ್ತಿರುವ 'ಎನ್‌ಎಸ್‌ಎಸ್' ಹೊರತಾಗಿ, ಬಹುರೂಪಿ ಪರಿಹಾರಗಳನ್ನೊಳಗೊಂಡ ಹಲವು ವಿಶೇಷ ಯೋಜನೆಗಳನ್ನು ನೆಹರೂ ಯುವ ಕೇಂದ್ರ ಸಂಘಟನೆ ಮೂಲಕ ರೂಪಿಸಲಾಗಿದೆ.

ಸಚಿವಾಲಯದ 2016–17ನೇ ವಾರ್ಷಿಕ ವರದಿ ಪ್ರಕಾರ, 'ರಾಷ್ಟ್ರೀಯ ಯುವ ನೀತಿ–2014'ರ ಯಶಸ್ವಿ ಅನುಷ್ಠಾನಕ್ಕಾಗಿ, ಅದನ್ನು ಆದ್ಯತಾ ವಲಯಗಳಲ್ಲಿ ಕಾರ್ಯಗತಗೊಳಿಸುವುದಲ್ಲದೆ; ಕೆಲವು ಸಲಹೆಗಳ ಪಟ್ಟಿಯನ್ನು ನೀಡಲಾಗಿದೆ. ಅವುಗಳಿಗೆ ಪುಷ್ಟಿ ನೀಡಲು ಮುಂದಿನ ಕ್ರಮಗಳ ಅಗತ್ಯವನ್ನು ಗುರುತಿಸಲಾಗಿದೆ:–

- ವ್ಯವಸ್ಥೆಯ ಸಾಮರ್ಥ್ಯ ಹೆಚ್ಚಿಸುವುದು ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಳ
- ಹೆಚ್ಚು ಹೆಚ್ಚು ಯುವಜನರನ್ನು ತಲುಪುವ ಮತ್ತು ಜಾಗೃತಿ ಮೂಡಿಸುವ ಗುರಿ ಹೊಂದುವುದು– ವ್ಯವಸ್ಥೆಯ ವಿವಿಧ ಸ್ತರಗಳ ನಡುವೆ ಸಂಪರ್ಕ ಕೊಂಡಿ ಏರ್ಪಡಿಸುವುದಲ್ಲದೆ, ಉದ್ಯೋಗ ಮತ್ತು ಕೌಶಲ ಅಭಿವೃದ್ಧಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಸಂಪರ್ಕ ಹೆಚ್ಚಿಸುವುದು.
- ವಾಣಿಜ್ಯೋದ್ಯಮದಲ್ಲಿ ಅಗತ್ಯಕ್ಕೆ ತಕ್ಕನಾದ ಯೋಜನೆಗಳನ್ನು ರೂಪಿಸುವುದು
- ಆರೋಗ್ಯ ಕ್ಷೇತ್ರದಲ್ಲಿ ಸೇವೆಗಳ ತಲುಪಿಸುವಿಕೆಯನ್ನು ಹೆಚ್ಚಿಸುವುದು

'ಆರ್‌ವೈಎಸ್‌ಕೆ', ಪ್ರಸ್ತುತ ವಿಂಗಡಿತವಾಗಿ ಅಲ್ಲದೆ, ಪರಸ್ಪರ ಅಂತರಶಾಖೀಯ ವಿಧಾನದ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಮತ್ತಷ್ಟು ಸಮಗ್ರ ಮತ್ತು ಸರ್ವಾಂಗೀಣ ಅಭಿವೃದ್ಧಿಯ ಗುರಿಯನ್ನು ಹೊಂದಲಾಗಿದೆ.

**ಸರ್ಕಾರದ ಕೆಲವೊಂದು ಪ್ರಮುಖ ಉಪಕ್ರಮಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ:–**

**1. ಕೌಶಲ್ಯ ವೃದ್ಧಿ ತರಬೇತಿ ಕಾರ್ಯಕ್ರಮ (ಎಸ್‌ಯುಟಿಪಿ):** ನುರಿತ ತಜ್ಞರ ಮೂಲಕ ಯುವಜನತೆಯ ವೃತ್ತಿಪರ ತರಬೇತಿ ಕೌಶಲ್ಯಗಳನ್ನು ಸುಧಾರಿಸುವ ಮತ್ತು ಆ ಮೂಲಕ ಹೆಚ್ಚುವರಿ ಆದಾಯ ಗಳಿಕೆ ಮತ್ತು ಆತ್ಮವಿಶ್ವಾಸ ವೃದ್ಧಿಸುವ ಗುರಿಯನ್ನು ಇದು ಹೊಂದಿದೆ.

**2. ಜಾನಪದ, ಸಾಂಸ್ಕೃತಿಕ ಮತ್ತು ಯುವ ಕೃತಿಯ ಉತ್ತೇಜನ:** ಹೊಸ ತಲೆಮಾರಿನ ಯುವಕರು ಪಾಶ್ಚಾತ್ಯದ ಬಗ್ಗೆ ವ್ಯಾಮೋಹ ಹೊಂದಿರುವ ಹಿನ್ನೆಲೆಯಲ್ಲಿ, ಈ ಕಾರ್ಯಕ್ರಮವು, ಗ್ರಾಮೀಣ ಯುವಜನತೆಗೆ ತಮ್ಮ ಸಾಂಸ್ಕೃತಿ ಮತ್ತು ಪ್ರತಿಭೆಯನ್ನು ಉತ್ತೇಜಿಸಲು ಹಾಗೂ ಪ್ರದರ್ಶಿಸಲು ಅಗತ್ಯ ನೆರವನ್ನು ಒದಗಿಸುತ್ತದೆ.

**3. ಮಹಾತ್ಮಾ ಗಾಂಧಿ ಯುವ ಸ್ವಚ್ಛ ಅಭಿಯಾನ್ ಮತ್ತು ಶ್ರಮದಾನ ಕಾರ್ಯಕ್ರಮ:** ಸ್ವಚ್ಛತಾ ಅಭಿಯಾನ ಮತ್ತು ಜಲ ಸಂರಕ್ಷಣೆ




ಅಭಿಯಾನಗಳಲ್ಲಿ ಯುವಜನರನ್ನು ಜಾಗೃತಗೊಳಿಸಿ ಅವರನ್ನು ತೊಡಗಿಸುವ ಗುರಿಯನ್ನು ಇದು ಹೊಂದಿದೆ.

ಸರ್ಕಾರ ಕೈಗೊಂಡ ಕೆಲವೊಂದು ಒಳಗೊಳ್ಳುವಿಕೆ ಕಾರ್ಯಕ್ರಮಗಳು, ಸರ್ಕಾರದ ಉತ್ತಮ ಉದ್ದೇಶವನ್ನು ಎತ್ತಿ ಹಿಡಿದಿವೆ. ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಸರ್ವರನ್ನೂ ಒಳಗೊಂಡ ಪ್ರಗತಿಗೆ ಸರ್ಕಾರ ಒತ್ತು ನೀಡುತ್ತಿರುವುದನ್ನು ಇವು ಸೂಚಿಸುತ್ತವೆ.

**(4) ಹದಿಹರೆಯದವರಿಗಾಗಿ ಜೀವನ ಕೌಶಲ್ಯ ತರಬೇತಿ (ಹದಿಹರೆಯದವರ ಸಬಲೀಕರಣ):** ಇದೊಂದು ಮಹತ್ವದ ಉಪಕ್ರಮವಾಗಿದ್ದು, ಯುವಜನತೆಯ ಮಾನಸಿಕ ಹಾದಿತಪ್ಪುವಿಕೆಯನ್ನು ಇದು ತಪ್ಪಿಸುತ್ತದೆ. ಒತ್ತಡವನ್ನು ನಿಭಾಯಿಸುವ ಮತ್ತು ಉತ್ತಮ ಜೀವನದ ಆಯ್ಕೆಗಳನ್ನು ಮಾಡಲು ನೆರವಾಗುವಂತೆ ಯುವಕರಿಗೆ ಅಗತ್ಯ ತರಬೇತಿಯನ್ನು ಇದು ಒದಗಿಸುತ್ತದೆ. ಸಂತಾನೋತ್ಪತ್ತಿ ಲೈಂಗಿಕ ಆರೋಗ್ಯ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಹದಿಹರೆಯದವರ ಸಂವೇದನೆಯನ್ನು ಹೆಚ್ಚಿಸಿ, ಅವರಲ್ಲಿ ಜಾಗೃತಿ ಮೂಡಿಸುವುದು ಸಹ ಈ ಯೋಜನೆಯ ಗುರಿಯಾಗಿದೆ. ಸಮಸ್ಯೆಯ ಪರಿಹಾರಕ್ಕಾಗಿಯುವಕರ ಸಾಮರ್ಥ್ಯವನ್ನು ಒಟ್ಟುಗೂಡಿಸುವ ಮೂಲಕ ಒಮ್ಮತ ಮೂಡಿಸುವ ಗುರಿಯನ್ನೂ ಇದರ ಮೂಲಕ ಹೊಂದಲಾಗಿದೆ.

ಭೌಗೋಳಿಕ ಮತ್ತು ಸಾಮಾಜಿಕ ತಡೆಗೋಡೆಗಳ ನಡುವೆ ಸಂಪರ್ಕ – ಇಲ್ಲಿ ಪ್ರಮುಖವಾಗಿ ಎರಡು ಯೋಜನೆಗಳನ್ನು ಒತ್ತಿ ಹೇಳಬಹುದು.

(i) **ಬುಡಕಟ್ಟು ಯುವಕರ ವಿನಿಮಯ ಕಾರ್ಯಕ್ರಮ (ಟಿವೈಇಪಿ):** ಎಡಪಂಥೀಯ ತೀವ್ರವಾದದಿಂದ ಪ್ರಭಾವಿತವಾಗಿರುವ ಬುಡಕಟ್ಟು

ಪ್ರದೇಶಗಳಿಂದ ಸಮರ್ಥ ಯುವಕರನ್ನು ಆರಿಸಿ, ಅವರನ್ನು ದೇಶದ ಇತರ ಭಾಗಗಳಲ್ಲಿ ಪ್ರವಾಸ ಮಾಡಿಸುವುದು ಇದರ ಉದ್ದೇಶ. ಇದು ಅವರಲ್ಲಿ ಸ್ಥಳೀಯ ಸೈದ್ಧಾಂತಿಕ ಪ್ರಭಾವವನ್ನು ಕಡಿಮೆ ಮಾಡಿ, ತಮ್ಮ ಮನಸ್ಥಿತಿಯನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸಿಕೊಳ್ಳಲು ನೆರವಾಗುತ್ತದೆ. ದೇಶದ ಇತರ ಭಾಗಗಳಲ್ಲಿ ಅಭಿವೃದ್ಧಿ, ಮೂಲಸೌಕರ್ಯ ಪ್ರಗತಿ ಮತ್ತು ಕೌಶಲ ಅಭಿವೃದ್ಧಿಯ ವಿಸ್ಮಯವನ್ನು ನೋಡಿದ ಯುವಜನರು ತಮ್ಮ ಸ್ಥಳೀಯ ಬುಡಕಟ್ಟು ಪ್ರದೇಶದ ಪಟ್ಟಣಗಳಲ್ಲಿ ತಮ್ಮ ಕಲಿಕಾ ಅನುಭವವನ್ನು ಅನುಷ್ಠಾನಕ್ಕೆ ತರುವ ಅವಕಾಶವನ್ನೂ 'ಟಿವೈಇಪಿ' ಒದಗಿಸುತ್ತದೆ.

**(ii) ಈಶಾನ್ಯ ಯುವಜನ ವಿನಿಮಯ ಕಾರ್ಯಕ್ರಮ** : ಯುವಜನ ವ್ಯವಹಾರ ಸಚಿವಾಲಯ ಮತ್ತು ಗೃಹ ಸಚಿವಾಲಯದ ಸಹಯೋಗದೊಂದಿಗೆ ನೆಹರೂ ಯುವ ಕೇಂದ್ರ ಸಂಘಟನೆ ಅಡಿಯಲ್ಲಿ, ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದು ಈಶಾನ್ಯ ಭಾಗದ ಯುವಜನರು ಮತ್ತು ಮಹಾರಾಷ್ಟ್ರದ ಯುವಜನರ ಸಂಯೋಜನೆ ಮೂಲಕ, ಅವರಲ್ಲಿ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಹಾಗೂ ಸಾಂಸ್ಕೃತಿಕವಾಗಿ ವೈವಿಧ್ಯಮಯ ಜೀವನದ ಬಗ್ಗೆ ಪರಸ್ಪರ ಅರಿವು ಮೂಡಿಸಿಕೊಳ್ಳಲು ನೆರವಾಗುತ್ತದೆ.

ತಮಿಳುನಾಡಿನ ಶ್ರೀ ಪೆರಂಬದೂರ್-ನಲ್ಲಿ ಯುವಜನ ಮತ್ತು ಕ್ರೀಡಾ




ಸಚಿವಾಲಯದ ವತಿಯಿಂದ "ರಾಷ್ಟ್ರೀಯ ಮಹತ್ವದ ಸಂಸ್ಥೆ"ಯನ್ನು ಸ್ಥಾಪಿಸಲಾಗಿದ್ದು, ಇದೊಂದು ಮೈಲುಗಲ್ಲಾಗಿದೆ.

2012ರ ಕಾಯ್ದೆ ಅನುಷ್ಠಾನದೊಂದಿಗೆ ರಾಜೀವ್ ಗಾಂಧಿ ರಾಷ್ಟ್ರೀಯ ಯುವಜನ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ."ಯುವಜನ ಅಭಿವೃದ್ಧಿ ಕ್ಷೇತ್ರದಲ್ಲಿ, ಶೈಕ್ಷಣಿಕ ಉತ್ಕೃಷ್ಟತೆಗಾಗಿ ಜಾಗತಿಕವಾಗಿ ಶ್ರಮಿಸುವುದು," ಇದರ ಉದ್ದೇಶವಾಗಿದೆ.

ಇದು ಹಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಮುಖ್ಯವಾಗಿ ಸಲಹಾ ಮನಶಾಸ್ತ್ರದಲ್ಲಿ ವಿಜ್ಞಾನ ಸ್ನಾತಕೋತ್ತರ ಪದವಿ (ಎಂ.ಎಸ್‌ಸಿ), ಸಾಮಾಜಿಕ ಸಂಶೋಧನೆ ಮತ್ತು ವಾಣಿಜ್ಯೋದ್ಯಮದಲ್ಲಿ ಕಲಾ ಸ್ನಾತಕೋತ್ತರ ಪದವಿ (ಎಂ.ಎ), ಲಿಂಗ ಅಧ್ಯಯನದಲ್ಲಿ ಎಂ.ಎ., ಅಭಿವೃದ್ಧಿ ನೀತಿ ಮತ್ತು ಅನುಷ್ಠಾನದಲ್ಲಿ ಸ್ನಾತಕೋತ್ತರ ಪದವಿ ಇತ್ಯಾದಿಗಳನ್ನು ಒದಗಿಸುತ್ತದೆ. ಯುವಜನ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಂತರ-ಶಾಸ್ತ್ರೀಯ ಮಾದರಿಯಲ್ಲಿ ಡಾಕ್ಟರೇಟ್ ಡಿಗ್ರಿ ಅಧ್ಯಯನಕ್ಕೂ ಇದು ಅವಕಾಶ ಒದಗಿಸುತ್ತದೆ.

ಆರ್ಥಿಕವಾಗಿ ಸಾಧುವಾದ, ಸಾಮಾಜಿಕವಾಗಿ ವಿಶ್ವಾಸಾರ್ಹ ಮತ್ತು ಸುಲಭ ಲಭ್ಯತೆಯನ್ನು ಕಾಯ್ದುಕೊಳ್ಳಲು, ಸರ್ಕಾರ ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಹಲವು ನಗರಗಳಲ್ಲಿ ಯುವಕರಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಿದೆ. ಸುಲಭ ಲಭ್ಯ ವಸತಿ ಸೌಕರ್ಯ ಒದಗಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಸಾಂಸ್ಕೃತಿಕ ವೈವಿಧ್ಯದ ಅನುಭವವನ್ನು ಯುವಜನತೆಗೆ ಒದಗಿಸುವುದು ಮತ್ತು ಅವರ ನಡುವೆ ಪರಸ್ಪರ ಒಡನಾಟಕ್ಕೆ ಅವಕಾಶ ಕಲ್ಪಿಸುವುದು ಇದರ ಉದ್ದೇಶ.

ಸರ್ಕಾರ ವಿವಿಧ ಮೂಲಗಳ ಮೂಲಕ ಪ್ರತಿಯೊಬ್ಬ ಯುವಕರಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಹೊರತರಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಇದರಿಂದ ವ್ಯಕ್ತಿತ್ವ ವಿಕಸನ ಮಾತ್ರವಲ್ಲದೆ, ರಾಷ್ಟ್ರೀಯ, ಜಾಗತಿಕ ಮಟ್ಟದಲ್ಲಿ ಪ್ರಬಲ ದನಿಯನ್ನು ಬೆಳೆಸಲು ನೆರವಾಗುತ್ತದೆ. ಹೆಚ್ಚು ಸಂವೇದನಾಶೀಲ, ಪ್ರಜ್ಞಾವಂತ ಮತ್ತು ಸಮರಸಭರಿತ ಜಗತ್ತಿನಲ್ಲಿ ಪರಿವರ್ತನೆಯ ಹಾದಿಯಲ್ಲಿರುವ ಯುವಕರೇ ಮುಂದಾಳುಗಳಾಗಿದ್ದಾರೆ.

ಯುವಜನತೆ ಮತ್ತು ಅದರ ಅಪರಿಮಿತ ಉತ್ಸಾಹದ ಬಗ್ಗೆ ಇಂದಿಗೂ ಪ್ರಜ್ವಲವಾಗಿರುವ ಮತ್ತು ನೈಜವಾಗಿರುವ ಸ್ವಾಮಿ ವಿವೇಕಾನಂದರ ಕರೆ ಇಲ್ಲಿ ಉಲ್ಲೇಖಾರ್ಹ – "ಏಳಿ! ಎದ್ದೇಳಿ! ಗುರಿ ಮುಟ್ಟುವವರೆಗೂ ವಿಶ್ರಾಂತರಾಗದಿರಿ". ❑


# ಯೋಜನಾ

## ಜುಲೈ 2017 ಸಂಚಿಕೆಯ ವಿಷಯ

# ಸಾಮಾಜಿಕ ಭದ್ರತೆ

# ಉದ್ಯೋಗ ಸೃಷ್ಟಿ : ಸವಾಲು ಮತ್ತು ಪರಿಹಾರೋಪಾಯ

* ಅಲಕಾ ಎನ್. ಶರ್ಮಾ
** ಬಲವಂತ್ ಸಿಂಗ್ ಮೆಹತಾ



ಭಾರತದ ಕೇಂದ್ರ ಮತ್ತು ಪೂರ್ವದ ದೊಡ್ಡ ಭಾಗಗಳಲ್ಲಿ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯು ಪಶ್ಚಿಮ ಮತ್ತು ದಕ್ಷಿಣ ಭಾರತದಷ್ಟು ಆಗಿಲ್ಲ. ಇಂತಹ ಪ್ರಾದೇಶಿಕ ಅಸಮಾನತೆ ಸರಿಪಡಿಸಬೇಕಾಗಿದೆ. ಇದರಿಂದ ಸ್ಥಳೀಯ ಯುವಜನತೆ ಅದೇ ಪ್ರದೇಶದಲ್ಲಿ ಉದ್ಯೋಗ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಭಾರತವು ಜಗತ್ತಿನಲ್ಲಿಯೇ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶ. ಜಗತ್ತಿನ ಐವರಲ್ಲಿ ಒಬ್ಬರು ಭಾರತದಲ್ಲಿದ್ದಾರೆ. ಕಾರ್ಮಿಕ ಮಾರುಕಟ್ಟೆಯನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಭಾರತೀಯ ಯುವಜನತೆ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಹೆಚ್ಚು ಕೊಡುಗೆ ನೀಡಬಲ್ಲದು. ಭಾರತದ ಅರ್ಧಕ್ಕಿಂತ ಹೆಚ್ಚು (ಶೇಕಡಾ 60.3) ಜನಸಂಖ್ಯೆ ಕೆಲಸ ಮಾಡುವ ವಯಸ್ಸಿನ ವರ್ಗವಾದ 15 ರಿಂದ 59ರೊಳಗೆ ಇದೆ (2011ರ ಜನಗಣತಿ ಪ್ರಕಾರ). 2001–2011ರ ಮಧ್ಯೆ ಭಾರತದಲ್ಲಿ ಯುವ ಜನಸಂಖ್ಯೆಯು ವಾರ್ಷಿಕವಾಗಿ ಒಟ್ಟೂ ಜನಸಂಖ್ಯೆ ಅಭಿವೃದ್ಧಿ ದರ (ಶೇ. 1.6)ಕ್ಕೆ ಹೋಲಿಸಿದರೆ ಅತ್ಯಂತ ಹೆಚ್ಚು ದರದಲ್ಲಿ (ಶೇ.2) ಅಭಿವೃದ್ಧಿಗೊಂಡಿದೆ. ಪರಿಣಾಮವಾಗಿ ಭಾರತವು ಪ್ರತಿ ವರ್ಷ 10 ದಶಲಕ್ಷ ಯುವಜನತೆಯನ್ನು ಕಾರ್ಮಿಕ ಮಾರುಕಟ್ಟೆಗೆ ಒದಗಿಸುತ್ತಿದೆ. ಭಾರತದಲ್ಲಿ ಯುವಜನತೆಯ ಹೆಚ್ಚಳವು ಉತ್ತರ ಮತ್ತು ಪೂರ್ವದಲ್ಲಿರುವ ಹಿಂದುಳಿದ ರಾಜ್ಯಗಳಲ್ಲಿ ಹೆಚ್ಚು ಕಂಡುಬಂದಿದೆ. ಏನೇ ಆದರೂ, ಕಾರ್ಮಿಕ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಯುವ ಜನಸಂಖ್ಯೆಗೆ ಪೂರೈಸುವಷ್ಟು ಉದ್ಯೋಗಗಳು ಪ್ರತಿ ವರ್ಷ ಸೃಷ್ಟಿಯಾಗುತ್ತಿಲ್ಲ. ಈ ಸಮಸ್ಯೆ ನಿವಾರಿಸಲು ಭಾರತ ಸರ್ಕಾರವು ಹಲವು ಉದ್ಯೋಗ ಸೃಷ್ಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳೆಂದರೆ ಪ್ರಧಾನಮಂತ್ರಿ ಉದ್ಯೋಗ ಉತ್ಪಾದನೆ ಕಾರ್ಯಕ್ರಮ (ಪಿಎಂಇಜಿಪಿ), ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ (ಎಸ್‌ಜಿಎಸ್‌ವೈ), ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ), ಮೇಕ್ ಇನ್ ಇಂಡಿಯಾ ಹಾಗೂ ಸ್ಕಿಲ್ ಇಂಡಿಯಾ. ಈ ಲೇಖನ ದೇಶದಲ್ಲಿರುವ ಯುವಜನತೆಗೆ ಉದ್ಯೋಗ ಪೂರೈಸುವ ಸವಾಲಿನ ಆಯಾಮವನ್ನು ದರ್ಶಿಸುತ್ತದೆ ಹಾಗೂ ಸರ್ಕಾರವು ತೆಗೆದುಕೊಳ್ಳುತ್ತಿರುವ ಕ್ರಮಗಳ ಕುರಿತು ಅವಲೋಕನವನ್ನು ನೀಡುತ್ತದೆ. ಈ ಲೇಖನದಲ್ಲಿ ಉಪಯೋಗಿಸಿರುವ ದತ್ತಾಂಶವನ್ನು 2015–16ರಲ್ಲಿ ಭಾರತ ಸರ್ಕಾರದ ಕಾರ್ಮಿಕ ಕಾರ್ಯಾಲಯವು ಕೈಗೊಂಡಿರುವ ಐದನೇ ವಾರ್ಷಿಕ ಉದ್ಯೋಗ ಸಮೀಕ್ಷೆಯಿಂದ ಪಡೆಯಲಾಗಿದೆ. ಸಾಮಾನ್ಯವಾಗಿ ಯುವ ಜನಸಂಖ್ಯೆಯು 15–29 ವರ್ಷ ವಯಸ್ಸಿನವರನ್ನು ಒಳಗೊಂಡಿರುತ್ತದೆ. ಈ ಲೇಖನದಲ್ಲಿ 18–29 ವರ್ಷ ವಯಸ್ಸಿನವರನ್ನು ಪರಿಗಣಿಸಲಾಗಿದೆ. ಏಕೆಂದರೆ 15 – 17 ವರ್ಷ ವಯಸ್ಸಿನ ವ್ಯಕ್ತಿಗಳು ಕಾರ್ಮಿಕ ಮಾರುಕಟ್ಟೆಯಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ಉದ್ಯೋಗದ ಸವಾಲು ಹೆಚ್ಚಿನ ಪ್ರಮಾಣದಲ್ಲಿ 18–29 ವರ್ಷ ವಯಸ್ಸಿನವರಿಗೆ ಸಂಬಂಧಪಟ್ಟಿದೆ.

### ಕೆಲಸಗಾರರ ಭಾಗವಹಿಸುವಿಕೆ ದರ

ಒಟ್ಟೂ ಜನಸಂಖ್ಯೆಯಲ್ಲಿರುವ ಕೆಲಸಗಾರರು/ಉದ್ಯೋಗಿಗಳ ಪ್ರಮಾಣವನ್ನು ಕೆಲಸಗಾರರ ಭಾಗವಹಿಸುವಿಕೆ ದರ (ಡಬ್ಲ್ಯೂಪಿಆರ್) ಸೂಚಿಸುತ್ತದೆ. 2015–16ರಲ್ಲಿ ಯುವಜನತೆಯ ಡಬ್ಲ್ಯೂಪಿಆರ್ 39.2 ಇತ್ತು. ಈ ಸಮಯದಲ್ಲಿ 30 ವರ್ಷಗಳು ಮತ್ತು ಹೆಚ್ಚು ವಯಸ್ಸಾದ (ಪಟ್ಟಿ 1) ವ್ಯಕ್ತಿಗಳ ಡಬ್ಲ್ಯೂಪಿಆರ್ 57.3 ಇತ್ತು.

* ನಿರ್ದೇಶಕರು. ** ಫೆಲೋ, ಮಾನವ ಅಭಿವೃದ್ಧಿ ಸಂಸ್ಥೆ, ನವದೆಹಲಿ. E-mail : * alakh.sharma@ihdindia.org ** balwant.mehta@ihdindia.org



ಗ್ರಾಮೀಣ ಪ್ರದೇಶಗಳಲ್ಲಿನ ಡಬ್ಲ್ಯೂಪಿಆರ್ ನಗರ ಪ್ರದೇಶಗಳಿಗಿಂತ ಅತ್ಯಂತ ಹೆಚ್ಚಿದೆ ಎಂಬುದನ್ನು ಪಟ್ಟಿ 1ರ ಮೂಲಕ ಅರಿಯಬಹುದು. ಹೆಚ್ಚಿನದಾಗಿ, 18–29 ವರ್ಷದ ಯುವತಿಯರಿಗೆ ಹೋಲಿಸಿದರೆ ಯುವಕರ ಡಬ್ಲ್ಯೂಪಿಆರ್ 3.5ರಷ್ಟು ಹೆಚ್ಚಾಗಿದೆ.

### ಕೈಗಾರಿಕಾ ಹಂಚಿಕೆ

ಕೆಲಸಗಾರರ ಕೈಗಾರಿಕಾ ಹಂಚಿಕೆಯು ತೋರಿಸುವುದೇನೆಂದರೆ 18–29 ವಯಸ್ಸಿನ ವರ್ಗದಲ್ಲಿನ ಬಹುಸಂಖ್ಯಾತ ಜನರು ಕೃಷಿ ಹಾಗೂ ಸಂಬಂಧಿತ ಚಟುವಟಿಕೆ (ಶೇ. 38.1) ವ್ಯಾಪಾರ, ಹೋಟೆಲ್ ಮತ್ತು ರೆಸ್ಟೋರೆಂಟ್ (ಶೇ.19.4), ನಿರ್ಮಾಣ (ಶೇ.15.1), ಉತ್ಪಾದನೆ (ಶೇ.13.1) ಹಾಗೂ ಇತರ ಸೇವೆಗಳಲ್ಲಿ ಉದ್ಯೋಗಿಗಳಾಗಿದ್ದಾರೆ. 30 ವರ್ಷಗಳಿಗಿಂತ ಹೆಚ್ಚು ವಯಸ್ಸಿನವರ ಗುಂಪಿನೊಂದಿಗೆ ಹೋಲಿಸಿದರೆ ಕೃಷಿಯೇತರ ವಲಯಗಳಾದ ನಿರ್ಮಾಣ, ಉತ್ಪಾದನೆ ಹಾಗೂ ವ್ಯಾಪಾರ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವ ಜನತೆ ಸೇರುತ್ತಿದ್ದಾರೆ. ಈ ಬದಲಾವಣೆ ಆಗಲು ಮುಖ್ಯ ಕಾರಣವೆಂದರೆ ಕೃಷಿ ಕ್ಷೇತ್ರವು ಹೆಚ್ಚಿನ ಕಾರ್ಮಿಕರಿಗೆ ಅವಕಾಶ ನೀಡುತ್ತಿಲ್ಲ ಹಾಗೂ ಉತ್ತಮ ಶಿಕ್ಷಣ ಹೊಂದಿರುವ ಯುವ ಪ್ರವೇಶದಾರರಿಗೆ ಲಾಭದಾಯಕ ಉದ್ಯೋಗಗಳನ್ನು ನೀಡುತ್ತಿಲ್ಲ.

### ನಿರುದ್ಯೋಗ ದರ

ನಿರುದ್ಯೋಗ ದರವು ಕೆಲಸಕ್ಕೆ ಲಭ್ಯವಿರುವ ಆದರೆ ಕೆಲಸ ಸಿಗದ ಮತ್ತು ಈಗಲೂ ಕೆಲಸ ಹುಡುಕುತ್ತಿರುವ ವ್ಯಕ್ತಿಗಳ ಪ್ರಮಾಣಕ್ಕೆ ಸಂಬಂಧಿಸಿದೆ. 18–29 ವರ್ಷಗಳಿಗೆ ಸಂಬಂಧಿಸಿದ ನಿರುದ್ಯೋಗ ದರವು 2015–16ರಲ್ಲಿ ಶೇ.13.2 ಇತ್ತು (ಪಟ್ಟಿ 3). ಇದು 30+ ವರ್ಷದವರ ನಿರುದ್ಯೋಗ ದರಕ್ಕಿಂತ 8 ಪಟ್ಟು ಹೆಚ್ಚಾಗಿದೆ

**ಪಟ್ಟಿ 1 : ವಯಸ್ಸಿನ ಗುಂಪಿನಂತೆ ಉದ್ಯೋಗ ಭಾಗವಹಿಸುವಿಕೆ ದರ (ಯುಪಿಎಸ್), 2015–16**

| ವಲಯ | 15–17 ವರ್ಷಗಳು | | | 18–29 ವರ್ಷಗಳು | | | 30+ ವರ್ಷಗಳು | | |
|---|---|---|---|---|---|---|---|---|---|
| | ಪು | ಮ | ವ್ಯ | ಪು | ಮ | ವ್ಯ | ಪು | ಮ | ವ್ಯ |
| ಗ್ರಾಮೀಣ | 11.1 | 4.3 | 8.0 | 63.1 | 19.1 | 42.3 | 89.0 | 29.8 | 60.1 |
| ನಗರ | 4.0 | 1.4 | 2.8 | 48.6 | 11.8 | 30.7 | 82.6 | 16.7 | 50.4 |
| ಒಟ್ಟು | 9.3 | 3.6 | 6.7 | 59.3 | 17.1 | 39.2 | 87.1 | 26.0 | 57.3 |

ಮೂಲ: ಕಾರ್ಮಿಕ ಕಾರ್ಯಾಲಯ, ಯುವಜನತೆ ಉದ್ಯೋಗ ಮತ್ತು ನಿರುದ್ಯೋಗ ಸನ್ನಿವೇಶದ ಮೇಲಿನವರದಿ ಸಂಪುಟ II, 2015–26, ಭಾರತ ಸರ್ಕಾರ

ಟಿಪ್ಪಣಿ: ಯುಪಿಎಸ್ – ಸಾಮಾನ್ಯ ಪ್ರಧಾನ ಸ್ಥಿತಿ; ಪು ಪುರುಷ, ಮ ಮಹಿಳೆ, ವ್ಯ ವ್ಯಕ್ತಿಗಳು

18–29 ವರ್ಷದೊಳಗಿನ ಸುಮಾರು ಐವರಲ್ಲಿ ಇಬ್ಬರು ಕೆಲಸಗಾರರು ಸ್ವ ಉದ್ಯೋಗಿಗಳು, ಇದಕ್ಕೆ ವಿರುದ್ಧವಾಗಿ 30ಕ್ಕಿಂತ ಹೆಚ್ಚು ವಯಸ್ಸಿನ ಅರ್ಧದಷ್ಟು ಕೆಲಸಗಾರರು ಸ್ವ ಉದ್ಯೋಗಿಗಳು (ಪಟ್ಟಿ 2). ಹೆಚ್ಚು ಹೆಚ್ಚು ಯುವಕರು ಕಾರ್ಮಿಕ ಮಾರುಕಟ್ಟೆಯನ್ನು ಸಾಮಾನ್ಯ ಹಾಗೂ ಸಾಂದರ್ಭಿಕ ವೇತನಕ್ಕಾಗಿ ಸೇರುತ್ತಿದ್ದಾರೆಂಬುದನ್ನು ಪಟ್ಟಿ 2 ಮೂಲಕ ನಿರ್ಣಯಿಸಬಹುದು. ಈ ಪ್ರವೃತ್ತಿಯು ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ಕಂಡುಬರುತ್ತಿವೆ.

**ಪಟ್ಟಿ 2 : ಕಾರ್ಮಿಕರ ಚಟುವಟಿಕೆ ಆಧರಿಸಿ ವಿಭಿನ್ನ ವಯಸ್ಸಿನ ಗುಂಪುಗಳ ಹಂಚಿಕೆ (ಯುಪಿಎಸ್), 2015–16**

| | 15–17 ವರ್ಷಗಳು | | | 18–29 ವರ್ಷಗಳು | | | 30 ವರ್ಷಗಳು & ಹೆಚ್ಚು | | |
|---|---|---|---|---|---|---|---|---|---|
| | ಗ್ರಾ | ನ | ಗ್ರಾ+ನ | ಗ್ರಾ | ನ | ಗ್ರಾ+ನ | ಗ್ರಾ | ನ | ಗ್ರಾ+ನ |
| ಸ್ವ ಉದ್ಯೋಗಿ | 40.8 | 30.9 | 39.7 | 40.5 | 33.3 | 39.0 | 51.2 | 43.4 | 49.2 |
| ವೇತನ/ ಸಂಬಳದ ಉದ್ಯೋಗಿ | 5.1 | 18.9 | 6.5 | 14.1 | 37.6 | 19.0 | 10.5 | 33.8 | 16.5 |
| ಒಪ್ಪಂದ ಕೆಲಸಗಾರ | 3.6 | 7.7 | 4.0 | 4.6 | 8.4 | 5.4 | 2.4 | 4.9 | 3.0 |
| ಸಾಂದರ್ಭಿಕ ಕೆಲಸಗಾರ | 50.6 | 42.6 | 49.7 | 40.8 | 20.7 | 36.6 | 35.9 | 17.9 | 31.0 |
| ಒಟ್ಟೂ | 100 | 100 | 100 | 100 | 100 | 100 | 100 | 100 | 100 |

ಮೂಲ: ಕಾರ್ಮಿಕ ಕಾರ್ಯಾಲಯ, ಯುವ ಉದ್ಯೋಗ ಮತ್ತು ನಿರುದ್ಯೋಗ ಪರಿಸ್ಥಿತಿ ಮೇಲಿನ ವರದಿ, ಸಂಪುಟ II, 2015–16, ಭಾರತ ಸರ್ಕಾರ

ಟಿಪ್ಪಣಿ: ಗ್ರಾ– ಗ್ರಾಮೀಣ, ನ– ನಗರ

(ಶೇ.1.6). ಯುವಜನತೆಯ ವರ್ಗದಲ್ಲಿನ ಯುವತಿಯರಲ್ಲಿ ನಿರುದ್ಯೋಗ ದರವು ಶೇ. 20.0 ಇದ್ದು, ಇದು ಯುವಕರಿಗಿಂತ ಹೆಚ್ಚು ಕಡಿಮೆ ಎರಡು ಪಟ್ಟು ಹೆಚ್ಚಾಗಿದೆ (ಶೇ. 11.3). ಪುರುಷರಿಗೆ ಹೋಲಿಸಿದರೆ ಮಹಿಳೆಯರಲ್ಲಿ ನಿರುದ್ಯೋಗ ಪ್ರಮಾಣವು ಗ್ರಾಮೀಣ ಪ್ರಮಾಣಕ್ಕಿಂತ ನಗರ ಪ್ರದೇಶದಲ್ಲಿ ಅತಿ ಹೆಚ್ಚಾಗಿದೆ. ನಗರ ಪ್ರದೇಶದಲ್ಲಿನ ಯುವತಿಯರಲ್ಲಿ ನಿರುದ್ಯೋಗ ದರವು ಶೇ. 28 ರಷ್ಟಿದೆ. (ಯುವಕರಲ್ಲಿ ಇದು ಶೇ. 11.5 ರಷ್ಟಿದೆ). ಏನೇ ಆದರೂ ಗಮನಿಸಬೇಕಾದ ಸಂಗತಿಯೆಂದರೆ 15–17 ವರ್ಷಗಳ ಸಣ್ಣ ಪ್ರಮಾಣದ ಯುವಜನತೆ ಉದ್ಯೋಗ ಬಯಸುತ್ತಿದ್ದಾರೆಂಬುದನ್ನು ಗಮನಿಸಬೇಕಾದದ್ದು ಪ್ರಮುಖವಾಗುತ್ತದೆ. ಈ ವಯಸ್ಸಿನ ಗುಂಪಿನವರಲ್ಲಿ ನಿರುದ್ಯೋಗವು 18–29 ವರ್ಷದವರಷ್ಟೇ ಇದೆ. ಈ ಪರಿಸ್ಥಿತಿಯು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪುರುಷರು ಹಾಗೂ ಮಹಿಳೆಯರಲ್ಲಿ ಒಂದೇ ರೀತಿಯಿದೆ. ಪದವಿ ಪೂರ್ವ ಮಟ್ಟದಲ್ಲಿ ಪ್ರಮಾಣಪತ್ರ ತರಬೇತಿ ಪಡೆದಿರುವ ಅಥವಾ ಪದವಿ ಮಟ್ಟದಲ್ಲಿ

| ಪಟ್ಟಿ 3 : ಕಾರ್ಮಿಕರ ಚಟುವಟಿಕೆಯಂತೆ ವಿಭಿನ್ನ ವಯಸ್ಸಿನ ಗುಂಪುಗಳ ವಿತರಣೆ (ಯುಪಿಎಸ್), 2015–16 | | | |
|---|---|---|---|
| ಕೈಗಾರಿಕೆ | 15–17 ವರ್ಷಗಳು | 18–29 ವರ್ಷಗಳು | 30+ ವರ್ಷಗಳು |
| ಕೃಷಿ & ಸಂಬಂಧಿತ | 53.4 | 38.1 | 47.2 |
| ಗಣಿ ಮತ್ತು ಕ್ವಾರಿ | 1.9 | 0.9 | 1.1 |
| ಉತ್ಪಾದನೆ | 14.5 | 13.2 | 9.6 |
| ವಿದ್ಯುತ್, ಗ್ಯಾಸ್ ಮತ್ತು ನೀರು ಪೂರೈಕೆ | 0.2 | 0.6 | 0.6 |
| ನಿರ್ಮಾಣ | 14.8 | 15.1 | 10.0 |
| ವ್ಯಾಪಾರ, ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳು | 12.2 | 19.4 | 17.5 |
| ಸಾರಿಗೆ, ಸಂಗ್ರಹ ಮತ್ತು ಸಂವಹನ | 1.1 | 3.7 | 3.9 |
| ಹಣಕಾಸು, ವಿಮೆ, ರಿಯಲ್ ಎಸ್ಟೇಟ್ ಮತ್ತು ಉದ್ಯಮ ಸೇವೆಗಳು | 1.4 | 8.3 | 9.2 |
| ಸಮುದಾಯ, ಸಾಮಾಜಿಕ ಮತ್ತು ವೈಯಕ್ತಿಕ ಸೇವೆಗಳು | 0.6 | 0.7 | 0.8 |
| ಒಟ್ಟೂ | 100.0 | 100.0 | 100.0 |
| ಮೂಲ: ಯುವ ಉದ್ಯೋಗ ಮತ್ತು ನಿರುದ್ಯೋಗ ಪರಿಸ್ಥಿತಿ ಮೇಲಿನ ವರದಿ, ಸಂಪುಟ II, 2015–16 | | | |

ಡಿಪ್ಲೊಮಾ ಹೊಂದಿರುವ ಯುವಜನತೆಯ ನಿರುದ್ಯೋಗ ಪ್ರಮಾಣವು (ಪಟ್ಟಿ 4) ಯುವಜನತೆಯಲ್ಲಿ ಶೇ.23ರಷ್ಟಿದೆ. ಇದು ಪದವಿ ಡಿಗ್ರಿ ಹಾಗೂ ಅದಕ್ಕಿಂತ ಹೆಚ್ಚಿನದನ್ನು ಪೂರೈಸಿರುವವರಲ್ಲಿ ಈ ಪ್ರಮಾಣವು ಸುಮಾರು ಶೇ.35ರಷ್ಟಿದೆ. ಶಿಕ್ಷಿತ ಯುವಕರಿಗೆ ಹೋಲಿಸಿದರೆ ಯುವತಿಯರ ನಿರುದ್ಯೋಗ ಪ್ರಮಾಣವು ಅತ್ಯಂತ ಹೆಚ್ಚಾಗಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ. ತರಬೇತಿ ಪೂರ್ಣಗೊಳಿಸಿದ ಅಥವಾ ಡಿಪ್ಲೊಮಾ ಪದವಿಗಳನ್ನು ಪದವಿ ಪೂರ್ವ ಮತ್ತು ಪದವಿ ಮಟ್ಟದಲ್ಲಿ ಹೊಂದಿದ 18–29 ವರ್ಷಗಳ ಶಿಕ್ಷಿತ ಮಹಿಳೆಯರಲ್ಲಿ ಮೂವರಲ್ಲಿ ಒಬ್ಬರಿಗಿಂತ ಹೆಚ್ಚಿನವರು ನಿರುದ್ಯೋಗಿಗಳಾಗಿದ್ದಾರೆ. ಇನ್ನಷ್ಟು ಕಾರಣಗಳೆಂದರೆ, ಮಹಿಳೆಯರಿಗೆ ಸೂಕ್ತವಾಗುವ ಉದ್ಯೋಗಗಳನ್ನು ಸೃಷ್ಟಿಸಲಾಗುತ್ತಿಲ್ಲ ಅಥವಾ ಮಹಿಳೆಯರಿಗೆ ಉದ್ಯೋಗ ಹೊಂದಲು ಅನುಕೂಲ ಕಲ್ಪಿಸುವಂತಹ ಸಾರಿಗೆ, ಶಿಶುಪಾಲನೆ ಕೇಂದ್ರ ಮುಂತಾದ ಸೂಕ್ತ ಮೂಲಸೌಕರ್ಯಗಳ ಕೊರತೆಯಿದೆ. ಒಟ್ಟಿನಲ್ಲಿ ಭಾರತವು ತನ್ನ ಯುವಜನತೆಗೆ ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸುವುದು ಸಾಧ್ಯವಾಗುತ್ತಿಲ್ಲ. ನಗರ ಪ್ರದೇಶದ ಯುವತಿಯರಲ್ಲಿ ಈ ಪ್ರಮಾಣ ನಿರ್ದಿಷ್ಟವಾಗಿ ಹೆಚ್ಚಾಗಿದೆ.

| ಪಟ್ಟಿ 4 : ವಯಸ್ಸಿನ ಗುಂಪಿನಂತೆ ನಿರುದ್ಯೋಗ ದರ (ಯುಪಿಎಸ್), 2015–16 | | | | | | | | | |
|---|---|---|---|---|---|---|---|---|---|
| ವಲಯ | 15–17 ವರ್ಷಗಳು | | | 18–29 ವರ್ಷಗಳು | | | 30+ ವರ್ಷಗಳು | | |
| | ಪು | ಮ | ವ್ಯ | ಪು | ಮ | ವ್ಯ | ಪು | ಮ | ವ್ಯ |
| ಗ್ರಾಮೀಣ | 18.4 | 22.8 | 19.5 | 11.2 | 17.9 | 12.7 | 0.9 | 3.7 | 1.6 |
| ನಗರ | 22.1 | 21.4 | 22.0 | 11.5 | 27.9 | 15.1 | 0.7 | 5.3 | 1.5 |
| ಒಟ್ಟೂ | 18.8 | 22.7 | 19.8 | 11.3 | 20.0 | 13.2 | 0.9 | 4.0 | 1.6 |
| ಮೂಲ: ಕಾರ್ಮಿಕ ಕಾರ್ಯಾಲಯ, ಯುವಜನತೆಯ ಉದ್ಯೋಗ ಮತ್ತು ನಿರುದ್ಯೋಗ ಪರಿಸ್ಥಿತಿ ಮೇಲಿನ ವರದಿ, | | | | | | | | | |
| ಸಂಪುಟ II, 2015–16, ಭಾರತ ಸರ್ಕಾರ | | | | | | | | | |

**ಸರ್ಕಾರದ ಈಚೆಗಿನ ಕ್ರಮಗಳು**

ಸರ್ಕಾರವು ಉದ್ಯೋಗಾವಕಾಶ ಹೆಚ್ಚಿಸಲು, ಸ್ವ ಉದ್ಯೋಗ ಕೈಗೊಳ್ಳಲು ಈ ಮೊದಲೂ ಹಲವು ಯೋಜನೆಗಳನ್ನು ಯುವಜನತೆಗಾಗಿ ಜಾರಿಗೆ ತಂದಿತ್ತು. ಆದರೆ, ಪರಿಣಾಮವು ತೃಪ್ತಿದಾಯಕವಾಗಿರಲಿಲ್ಲ. ಆದ್ದರಿಂದ, ಯುವಜನತೆಯಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹೊಸ ಯೋಜನೆಗಳನ್ನು ಆರಂಭಿಸಲಾಗಿದೆ. ಈ ಯೋಜನೆಗಳ ಮುಖ್ಯ ಅಂಶವನ್ನು ಮುಂದೆ ನೀಡಲಾಗಿದೆ.

**ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಸ್ಟ್ಯಾಂಡಪ್ ಇಂಡಿಯಾ :** ತೆರಿಗೆ ವಿನಾಯಿತಿಗಳು ಮತ್ತು 10,000 ಕೋಟಿ ರೂ. ಭಾರೀ ನಿಧಿಯನ್ನು ಸ್ಟಾರ್ಟ್ ಅಪ್‌ಗೆ ಮೀಸಲಿಡುವ ಮೂಲಕ ಔದ್ಯಮಿಕತೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಸ್ಟಾರ್ಟ ಅಪ್ ಇಂಡಿಯಾ ಮತ್ತು ಸ್ಟ್ಯಾಂಡಪ್ ಇಂಡಿಯಾ ಯೋಜನೆಯನ್ನು 2016ರ ಜನವರಿಯಲ್ಲಿ ಆರಂಭಿಸಿದೆ. ಸರ್ಕಾರವು ಉದ್ಯಮ ನಡೆಸುವುದನ್ನು ಸುಲಭಗೊಳಿಸುವ ನಿಟ್ಟಿನಲ್ಲಿ ಸ್ಟಾರ್ಟ ಅಪ್‌ಗಳಿಗೆ ಪೂರಕ ವಾತಾವರಣ ನಿರ್ಮಿಸಲು ನೊಂದಣಿಯಲ್ಲಿ ಉದಾರವಾದಿ ವಿಧಾನ, ಕಾನೂನಾತ್ಮಕ ಪ್ರಕ್ರಿಯೆಗಳು, ನಿಯಂತ್ರಣ, ತೆರಿಗೆ ವಿನಾಯಿತಿ ಮುಂತಾದ ಕ್ರಮಗಳನ್ನು ಕೈಗೊಂಡಿದೆ.

ಭಾರತವು 2016ರ ಡಿಸೆಂಬರ್‌ನಲ್ಲಿ 4,700 ಸ್ಟಾರ್ಟಪ್‌ಗಳನ್ನು ಹೊಂದಿತ್ತು. ಏನೇ ಆದರೂ, ಈ ಯೋಜನೆಗಳು ಅಗತ್ಯ ಪರಿಣಾಮ ನೀಡಲು ಸಾಧ್ಯವಾಗದೇ, 200ಕ್ಕೂ ಹೆಚ್ಚು ಸ್ಟಾರ್ಟಪ್‌ಗಳು ವರ್ಷ ಕಳೆಯುವುದರೊಳಗೆ ಮುಚ್ಚಿದವು. ಆದರೂ ಇದೊಂದು ಸಾಮಾನ್ಯ ಬೆಳವಣಿಗೆ ಎಂಬ ವಾದಿಸಲಾಗಿದೆ ಹಾಗೂ ಅತ್ಯಂತ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಶೇ.20ಕ್ಕಿಂತ ಹೆಚ್ಚು ಸ್ಟಾರ್ಟಪ್‌ಗಳು ಉಳಿಯುವುದು ಕಷ್ಟಕರವಾಗಿದೆ (ಭಾರತ ಸ್ಟಾರ್ಟಪ್ ಮೇಲ್ನೋಟ ವರದಿ, 2017). ಆದ್ದರಿಂದ ಗುಣಲಕ್ಷಣ ದರಕ್ಕಾಗಿ ಹೆಚ್ಚು ಗಮನ ನೀಡುವ ಅಗತ್ಯವಿದೆ. ಸ್ಟಾಂಡಪ್ ಇಂಡಿಯಾ

**ಪಟ್ಟಿ 5 : ಶಿಕ್ಷಣ ಮಟ್ಟ ಮತ್ತು ವಯಸ್ಸಿನ ಗುಂಪಿನಂತೆ ನಿರುದ್ಯೋಗ ಪ್ರಮಾಣ (ಯುಪಿಎಸ್), 2015–16**

| ಶಿಕ್ಷಣ | 18–29 ವರ್ಷಗಳು | | | 30+ ವರ್ಷಗಳು | | |
|---|---|---|---|---|---|---|
| | ಪು | ಮ | ವ್ಯ | ಪು | ಮ | ವ್ಯ |
| ಶಿಕ್ಷಿತರಲ್ಲ | 4.0 | 6.2 | 4.9 | 0.6 | 3.0 | 2.2 |
| ಪ್ರಾಥಮಿಕಕ್ಕಿಂತ ಕಡಿಮೆ | 4.8 | 5.8 | 5.1 | 0.6 | 1.9 | 1.6 |
| ಪ್ರಾಥಮಿಕ | 5.5 | 8.0 | 6.2 | 0.6 | 2.3 | 1.0 |
| ಮಾಧ್ಯಮಿಕ/ಸೆಕೆಂಡರಿ/ಉನ್ನತ | 9.2 | 17.1 | 10.4 | 0.7 | 4.8 | 1.6 |
| ಪದವಿ ಪೂರ್ವ ಮಟ್ಟದಲ್ಲಿ ಪ್ರಮಾಣಪತ್ರ ತರಬೇತಿ | 21.3 | 31.3 | 23.5 | 0.6 | 11.2 | 2.4 |
| ಪದವಿ ಮಟ್ಟದಲ್ಲಿ ಡಿಪ್ಲೊಮಾ | 20.9 | 33.1 | 23.0 | 1.0 | 7.6 | 1.4 |
| ಪದವಿ & ಹೆಚ್ಚಿನ | 29.7 | 47.7 | 34.8 | 2.3 | 13.5 | 6.2 |
| ಒಟ್ಟೂ | 11.3 | 20.0 | 13.2 | 0.9 | 4.0 | 1.6 |

ಮೂಲ: ಕಾರ್ಮಿಕ ಕಾರ್ಯಾಲಯ, ಯುವಜನತೆಯ ಉದ್ಯೋಗ ಮತ್ತು ನಿರುದ್ಯೋಗ ಪರಿಸ್ಥಿತಿ ಮೇಲಿನ ವರದಿ,

ಸಂಪುಟ II, 2015–16, ಭಾರತ ಸರ್ಕಾರ

ಯೋಜನೆಯನ್ನು ಕೂಡ 2016ರ ಜನವರಿಯಲ್ಲಿ ಜಾರಿಗೆ ತರಲಾಗಿದೆ.

ಪರಿಶಿಷ್ಟ ಜಾತಿಗಳು (ಎಸ್‌ಸಿಗಳು), ಬುಡಕಟ್ಟು ಜನಾಂಗಗಳು (ಎಸ್‌ಟಿಗಳು) ಹಾಗೂ ಮಹಿಳೆಯರಂತಹ ಅವಕಾಶ ವಂಚಿತ ಗುಂಪುಗಳಲ್ಲಿ ಔದ್ಯಮೀಕರಣವನ್ನು ಪ್ರೋತ್ಸಾಹಿಸುವ ಗುರಿ ಹೊಂದಿತ್ತು. 2016ರ ಡಿಸೆಂಬರ್‌ನಲ್ಲಿ ಸ್ಟಾಂಡಪ್ ಇಂಡಿಯಾ ಯೋಜನೆ ಅಡಿ 15341 ಸಾಲಗಳು ಮಂಜೂರಾಗಿವೆ. ಇದರಲ್ಲಿ 2055 ಮಹಿಳೆಯರಿಗೆ, 2568 ಎಸ್‌ಸಿ ಹಾಗೂ 718 ಎಸ್‌ಟಿಯವರು ಒಳಗೊಂಡಿದ್ದಾರೆ (ಹಣಕಾಸು ಸಚಿವಾಲಯ, ಭಾ.ಸ. 2017).

**ಪ್ರಧಾನ ಮಂತ್ರಿ ಮುದ್ರಾ ಯೋಜನಾ (ಪಿಎಂಎಂವೈ)** : ಸರ್ಕಾರವು ಪ್ರಧಾನ ಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ) ಅನ್ನು ಕೂಡ 2015ರ ಏಪ್ರಿಲ್‌ನಲ್ಲಿ ಜಾರಿಗೆ ತಂದಿದೆ. ಸೂಕ್ಷ್ಮ / ಸಣ್ಣ ವ್ಯಾಪಾರ ಘಟಕಗಳಿಗೆ ಸಾಂಸ್ಥಿಕ ಹಣಕಾಸು ಒದಗಿಸುವುದು ಇದರ ಉದ್ದೇಶವಾಗಿದೆ. ಪಿಎಂಎಂವೈ ಅಡಿ ಮೂರು ರೀತಿಯ ಸಾಲಗಳನ್ನು ಮಂಜೂರು ಮಾಡಬಹುದು. ಇದು ಶಿಶು (50,000 ರೂ.), ಕಿಶೋರ (50,000 ರೂ.ನಿಂದ 5,00,000 ರೂ.) ಹಾಗೂ ತರುಣ (5,00,000 ರೂ.ನಿಂದ 10,00,000 ರೂ.) ಗಳ ಬೆಳವಣಿಗೆ/ ಅಭಿವೃದ್ಧಿ ಹಾಗೂ ನಿಧಿ ಅಗತ್ಯಗಳನ್ನು ನಿರ್ದಿಷ್ಟಪಡಿಸುತ್ತದೆ. ಪಿಎಂಎಂವೈ ಕಾರ್ಯಕ್ರಮದಡಿ ಹಂಚಿಕೆಯಾದ ಒಟ್ಟೂ ಮೊತ್ತವು 1.25 ಲಕ್ಷ ಕೋಟಿ ರೂ.ಗಳನ್ನು 2016ರ ಮಾರ್ಚ್‌ತಿಂಗಳಲ್ಲಿ ದಾಟಿದೆ. 32.7 ದಶಲಕ್ಷ ಜನ ಸಾಲ ಪಡೆದಿದ್ದು, 30.3 ದಶಲಕ್ಷ ಸಾಲಗಾರರು ಶಿಶು ವರ್ಗದಲ್ಲಿ ಬರುತ್ತಾರೆ.

**ಸ್ಟಾರ್ಟಪ್ ಗ್ರಾಮ ಔದ್ಯಮಿಕ ಕಾರ್ಯಕ್ರಮ (ಎಸ್‌ವಿಇಪಿ)** : ಗ್ರಾಮೀಣ ಪ್ರದೇಶಗಳಲ್ಲಿ ಔದ್ಯಮಿಕತೆಯನ್ನು ಪ್ರೋತ್ಸಾಹಿಸಲು, ಸರ್ಕಾರವು ಸ್ಟಾರ್ಟಪ್ ಗ್ರಾಮ ಔದ್ಯೋಗಿಕ ಕಾರ್ಯಕ್ರಮ (ಎಸ್‌ವಿಇಪಿ) ಜಾರಿಗೆ ತರಲು ಯೋಜಿಸುತ್ತಿದೆ.

2015–2019 ರಲ್ಲಿ 24 ರಾಜ್ಯಗಳಾದ್ಯಂತ 125 ಬ್ಲಾಕ್‌ಗಳಲ್ಲಿನ 1.82 ಲಕ್ಷ ಗ್ರಾಮೀಣ ಉದ್ಯಮಗಳನ್ನು ಸೃಷ್ಟಿಸುವುದು ಹಾಗೂ ಶಕ್ತಿಯುತಗೊಳಿಸಲು ಎಸ್‌ವಿಇಪಿ ಬೆಂಬಲ ನೀಡಲಿದೆ ಎಂದು ನಿರೀಕ್ಷಿಸಲಾಗಿದೆ. ಇದರಿಂದ ಸುಮಾರು 3.78 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ ಎಂದು



ನಿರೀಕ್ಷಿಸಲಾಗಿದೆ. ಈ ಕಾರ್ಯಕ್ರಮವನ್ನು ಸರಿಯಾಗಿ ಜಾರಿಗೊಳಿಸಿದಲ್ಲಿ ಗ್ರಾಮದಲ್ಲಿ ಹೆಚ್ಚುತ್ತಿರುವ ಯುವಜನತೆಗೆ ಔದ್ಯಮಿಕ ಅವಕಾಶಗಳನ್ನು ಕಲ್ಪಿಸಬಲ್ಲದು.

**ಸಮಾರೋಪ** : ಒಟ್ಟೂ ಜನಸಂಖ್ಯೆಯಲ್ಲಿ ಯುವಜನತೆ ಪ್ರಮಾಣವು ಹೆಚ್ಚಾಗುತ್ತಿರುವ ಕಾರಣ ಜನಸಂಖ್ಯಾ ಪರಿವರ್ತನೆಯ ಹಂತದ ಮೂಲಕ ಭಾರತ ಸಾಗುತ್ತಿದೆ. ಹೆಚ್ಚುತ್ತಿರುವ ಯುವಜನತೆಗೆ ಉತ್ತಮ ಶಿಕ್ಷಣ ಮತ್ತು ಸೂಕ್ತ ಉದ್ಯೋಗಗಳ ಸ್ಥಿರ ನಿರ್ಮಾಣವು ಅತ್ಯಗತ್ಯ. ಈ ವಿಶ್ಲೇಷಣೆಯು ತೋರಿಸುವುದೇಂದರೆ, ವಿಶೇಷವಾಗಿ ಶಿಕ್ಷಿತ ಯುವಜನತೆಗೆ ಸವಾಲು ಅತ್ಯಂತ ದೊಡ್ಡದಾಗಿದೆ. ಒಂದು ಬದಿಯಲ್ಲಿ ಭಾರತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಜಗತ್ತಿನಲ್ಲಿಯೇ ಅತ್ಯಂತ ಕಡಿಮೆ ಇದ್ದು, ಮತ್ತೊಂದು ಬದಿಯಲ್ಲಿ ಕಾರ್ಮಿಕ ಶಕ್ತಿಗೆ ಸೇರ್ಪಡೆಯಾಗುತ್ತಿರುವ ಯುವತಿಯರಲ್ಲಿ ನಿರುದ್ಯೋಗ ದರವೂ ಹೆಚ್ಚಾಗಿದೆ. ಸರ್ಕಾರದ ನಡೆ ಅಗತ್ಯ ದಿಕ್ಕಿನಲ್ಲಿಯೇ ಇದೆ. ಏನೇ ಆದರೂ, ಇನ್ನೂ ಸಾಕಷ್ಟು ಮಾಡಬೇಕಾಗಿದೆ. ಉದ್ಯೋಗ ಸೃಷ್ಟಿ ಭಾರೀ ಪ್ರಮಾಣದ ಮತ್ತು ಇತರ ಆರ್ಥಿಕ ನೀತಿಗಳ ಭಾಗವಾಗಬೇಕಿದೆ. ಭಾರತೀಯ ಆರ್ಥಿಕತೆಯು ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿಸಿಲ್ಲ ಮತ್ತು ಉದ್ಯೋಗ ಸೃಷ್ಟಿ ಪ್ರಕ್ರಿಯೆಯನ್ನು ಹೆಚ್ಚಿಸಿಲ್ಲ. ವಿಭಿನ್ನ ಸಚಿವಾಲಯಗಳು ತಮ್ಮ ಕಾರ್ಯಕ್ರಮಗಳು ಹಾಗೂ ನೀತಿಗಳಲ್ಲಿ ಉದ್ಯೋಗ ಸೃಷ್ಟಿಯನ್ನು ಸೇರಿಸಿಕೊಳ್ಳಬೇಕಾಗಿದೆ. ಭಾರತದ ಕೇಂದ್ರ ಮತ್ತು ಪೂರ್ವದ ದೊಡ್ಡ ಭಾಗಗಳಲ್ಲಿ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯು ಪಶ್ಚಿಮ ಮತ್ತು ದಕ್ಷಿಣ ಭಾರತದಷ್ಟು ಆಗಿಲ್ಲ. ಇಂತಹ ಪ್ರಾದೇಶಿಕ ಅಸಮಾನತೆ ಸರಿಪಡಿಸಬೇಕಾಗಿದೆ. ಇದರಿಂದ ಸ್ಥಳೀಯ ಯುವಜನತೆ ಅದೇ ಪ್ರದೇಶದಲ್ಲಿ ಉದ್ಯೋಗ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೇ, ಇದಕ್ಕಾಗಿ ಸೂಕ್ತ ನೀತಿಗಳು ಮತ್ತು ಕಾರ್ಯಕ್ರಮಗಳು ಅಗತ್ಯವಾಗಿವೆ. ❑

# ಯುವಜನರು – ಪರಿವರ್ತನೆಯ ಹರಿಕಾರರು

* ಸುನೀತಾ ಸಂಘಿ




ತರಬೇತಿಗಳ ಅವಶ್ಯಕತೆಯಿರುವ ಕೆಲಸಗಾರರನ್ನು ಗುರುತಿಸುವುದೊಂದು ಸವಾಲು. ಕೌಶಲ್ಯ ತರಬೇತಿಯ ವಿಶ್ಲೇಷಣೆ, ಈ ತರಬೇತಿಗೆ ಅವಶ್ಯಕವಾದ ವಸ್ತು, ವಿಷಯಗಳ ಅಭಿವೃದ್ಧಿ ಮತ್ತು ಸೂಕ್ತ ರೀತಿಯಲ್ಲಿ ತರಬೇತಿ ವ್ಯವಸ್ಥೆ ಮಾಡುವುದು ಅತ್ಯಗತ್ಯ. ಅದೇ ರೀತಿ ಈ ತರಬೇತಿಗಳ ಕಟುವಿಶ್ಲೇಷಣೆ ವಿಮರ್ಶೆಗಳು ಕೂಡ ಆಗಬೇಕು.

**"ಕೌಶಲ್ಯ ಅಭಿವೃದ್ಧಿಯು ಉತ್ತಮ ಭಾರತ ನಿರ್ಮಾಣಕ್ಕೆ ಸಹಕಾರಿ. ಭಾರತವನ್ನು ಅಭಿವೃದ್ಧಿಯತ್ತ ನಡೆಸಬೇಕೆಂದರೆ ಕೌಶಲ್ಯ ಅಭಿವೃದ್ಧಿಯು ನಮ್ಮ ಗುರಿಯಾಗಿರಬೇಕು" ಪ್ರಧಾನ ಮಂತ್ರಿ – 15ನೇ ಆಗಸ್ಟ್ 2014.**

ಭಾರತದ ಜನಸಂಖ್ಯೆಯು ಪರಿವರ್ತನೆಯ ಹಂತದಲ್ಲಿದ್ದು ಇದರಲ್ಲಿ 65% ಮಂದಿ 15–59 ವಯೋಮಾನದವರಾಗಿದ್ದು ಕೆಲಸ ಮಾಡುವ ಸಾಮರ್ಥ್ಯ, ಅರ್ಹತೆ ಹೊಂದಿದ್ದಾರೆ. ಇದೊಂದು ಅನನ್ಯ ಅವಕಾಶ. ವಿಶ್ವದಾದ್ಯಂತ ಅಗತ್ಯವಿರುವವರಿಗೆ ಮಾನವ ಸಂಪನ್ಮೂಲವನ್ನು ಒದಗಿಸಲು ಭಾರತವು ಉತ್ತಮಗುಣಮಟ್ಟದ ಕೌಶಲ್ಯಗಾರರ ರಾಜಧಾನಿಯಾಗಬಹುದಾಗಿದೆ.

2014ರ ರಾಷ್ಟ್ರೀಯ ಯುವ ನೀತಿಯ ಪ್ರಕಾರ 15 –29 ವಯೋಮಾನದವರು ಯುವಜನಸಂಖ್ಯೆ. ಇದು ವಿವಿಧ ಅಗತ್ಯಗಳು, ಮಹತ್ವಾಕಾಂಕ್ಷೆ, ಅವಶ್ಯಕತೆಗಳನ್ನು ಹೊಂದಿರುವ ವೈವಿಧ್ಯಮಯವಾದ ಗುಂಪು. 2011ರ ಜನಗಣತಿಯ ಪ್ರಕಾರ ದೇಶದ ಒಟ್ಟು ವರಮಾನಕ್ಕೆ 28%ರಷ್ಟು ಯುವಸಮೂಹವು 34%ರಷ್ಟು ಕೊಡುಗೆಯನ್ನು ನೀಡುತ್ತಿದೆ. ದುಡಿಯುವ ಶಕ್ತಿಯನ್ನು ಹೆಚ್ಚಿಸುವುದರ ಮೂಲಕ ಇದನ್ನು ಇನ್ನೂ ಹೆಚ್ಚಿಸಬಹುದಾಗಿದೆ. ಇವತ್ತಿನ ಅಗತ್ಯವೆಂದರೆ ಕೌಶಲ್ಯಯುತ ಮಾನವಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಭಾರತವನ್ನು ಅಂತಹ ದುಡಿಯುವ ಕೈಗಳನ್ನು ಒದಗಿಸುವ ದೇಶಗಳ ನಾಯಕನನ್ನಾಗಿಸುವುದು.

ಭಾರತದಲ್ಲಿನ ಜನಸಂಖ್ಯಾ ವೈವಿಧ್ಯವು ಎಲ್ಲ ಪ್ರದೇಶಗಳಲ್ಲೂ ಒಂದೇ ತೆರನಾಗಿಲ್ಲ. ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಒಂದು ತೆರನಾಗಿದ್ದರೆ ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ ಮತ್ತು ಬಿಹಾರಗಳಲ್ಲಿ ಬೇರೆ ರೀತಿಯಿದೆ. ಪಶ್ಚಿಮ ಬಂಗಾಳದಂತಹ ರಾಜ್ಯಗಳ ರೀತಿಯು ಚೀನಾ, ಕೊರಿಯಾಗಳಿಗೆ ಹತ್ತಿರವಾಗಿದ್ದು, ಇಲ್ಲಿ ಕೆಲಸಮಾಡುವ ವಯೋಮಾನದ ಜನಸಂಖ್ಯೆಯಲ್ಲಿ ದಿಢೀರ್ ಏರಿಕೆ, ಇಳಿಕೆಗಳು ಕಂಡುಬರುತ್ತವೆ. ಅದೇ ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ ದುಡಿಯುವ ವರ್ಗದ ಜನಸಂಖ್ಯೆಯು ಹೆಚ್ಚಾಗಿಯೇ ಇರುತ್ತದೆ. ಹಾಗಾಗಿ ಜನಸಂಖ್ಯೆಯಾಧರಿತವಾಗಿ ನೋಡಿದಲ್ಲಿ ಭಾರತದಲ್ಲಿ ಎರಡು ಭಾಗಗಳಿವೆ. ಒಂದರಲ್ಲಿ ವಯಸ್ಸಾಗುತ್ತಿರುವವರಿದ್ದು ಅವರ ಅಗತ್ಯಗಳಿಗೆ ತುರ್ತಾಗಿ ಸ್ಪಂದಿಸುವ ಅಗತ್ಯವಿದೆ. ಮತ್ತೊಂದೆಡೆ ಯುವಭಾರತೀಯರಿದ್ದು ಅವರಿಗೆ ಶಿಕ್ಷಣ, ಕೌಶಲ್ಯ ಮತ್ತು ಉದ್ಯೋಗವಕಾಶಗಳನ್ನು ನೀಡುವತ್ತ ಗಮನಹರಿಸಬೇಕಾಗಿದೆ.

ಅದೇನೆ ಇರಲಿ ಯುವಕರನ್ನು ವೃತ್ತಿಪರ ಶಿಕ್ಷಣ ಪಡೆಯುವತ್ತ ಸೆಳೆಯುವುದು ಈ ರಾಜ್ಯಗಳಲ್ಲಿ ಕಷ್ಟಕರವಾದದ್ದು. ವಲಸೆ ಹೋಗಲು ಇಚ್ಛಿಸಿದ, ತರಬೇತಿಗೆ ಹಣ ನೀಡಲು ಸಾಧ್ಯವಿರದ, ದುಡಿಮೆಗೆ ತಕ್ಕ ಪ್ರತಿಫಲಗಳು ದೊರಕದ, ಕಡಿಮೆ ಶಿಕ್ಷಣ ಮಟ್ಟ, ಅರಿವಿನ ಕೊರತೆ – ಈ ಕಾರಣಗಳಿಂದ ಇದನ್ನು ಸಾಧಿಸುವುದು ಕಷ್ಟ. ಯುವಕರನ್ನು ಸಬಲಗೊಳಿಸುವುದು ದುಡಿಮೆಯ ಮಾರುಕಟ್ಟೆಯಲ್ಲಿ ಯುವಜನತೆಯ ಭಾಗವಹಿಸುವಿಕೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಅಗತ್ಯವಾದದ್ದು.

* ಸಲಹೆಗಾರರು, (ಕೌಶಲ್ಯ ಅಭಿವೃದ್ಧಿ, ಉದ್ಯೋಗ ಮತ್ತು ನಗರೀಕರಣ ನಿರ್ವಹಣೆ) ನೀತಿ ಆಯೋಗ. E-mail : sunitasanghi1960@gmail.com

### ಯುವಜನತೆ ಮತ್ತು ಕಾರ್ಮಿಕ ಮಾರುಕಟ್ಟೆ

ಕಾರ್ಮಿಕರ ಮಾರುಕಟ್ಟೆಯ ಸೂಚ್ಯಂಕಗಳೆಂದರೆ ಕಾರ್ಮಿಕ ಶಕ್ತಿಯ ಭಾಗವಹಿಸುವಿಕೆಯ ಪ್ರಮಾಣ (ಕಾರ್ಮಿಕರು ಅಥವಾ ಕೆಲಸ ಹುಡುಕುತ್ತಿರುವವರು), ಕಾರ್ಮಿಕ ಜನಸಂಖ್ಯೆಯ ಪ್ರಮಾಣ, ನಿರುದ್ಯೋಗಿಗಳ ಪ್ರಮಾಣ. ಇದನ್ನು ಕೋಷ್ಟಕ 1ರಲ್ಲಿ ನೀಡಲಾಗಿದೆ. ಇದು ಭಾರತದ ಕಾರ್ಮಿಕ ಮಾರುಕಟ್ಟೆಯಲ್ಲಿನ ಯುವಜನತೆಯ ಸ್ಥಿತಿಯ ಬಗ್ಗೆ ಮಹತ್ವದ ಒಳನೋಟವನ್ನು ನೀಡುತ್ತದೆ.

ಕೋಷ್ಟಕವನ್ನು ನೋಡಿದರೆ ಲಿಂಗ, ಸ್ಥಳ ಭೇದವಿಲ್ಲದೆ ಕಾರ್ಮಿಕ ಶಕ್ತಿಯು ಎಲ್ಲ ಗುಂಪುಗಳಲ್ಲೂ ಕಡಿಮೆಯಾಗಿರುವುದು ತಿಳಿದುಬರುತ್ತದೆ. ಅದೇನೇ ಇರಲಿ ಗ್ರಾಮೀಣ ಪ್ರದೇಶದ ಮಹಿಳೆಯರ ಭಾಗವಹಿಸುವಿಕೆಯು ಕಡಿಮೆಯಾಗಿರುವುದರ ಹಿನ್ನೆಲೆಯಲ್ಲಿ ಆ ಭಾಗಗಳಲ್ಲಿ ಅವಕಾಶಗಳು ಕಡಿಮೆಯಿರುವುದು ಅಥವಾ ಸಮಾಜೋ ಧಾರ್ಮಿಕ ಕಾರಣಗಳಿರಬಹುದು. ಗ್ರಾಮೀಣ, ನಗರ ಪ್ರದೇಶಗಳಲ್ಲಿ ಕಾರ್ಮಿಕ ಮಾರುಕಟ್ಟೆಗೆ ಬರುವ ಮುನ್ನ ಹೆಚ್ಚಿನ ಶಿಕ್ಷಣ, ಕೌಶಲ್ಯ ಗಳಿಕೆಯಲ್ಲಿ ಯುವಸಮೂಹವು ತೊಡಗಿರುವುದರಿಂದ ಅವರ ಸಂಖ್ಯೆ ಕಡಿಮೆಯಾಗಿದೆ. 15 – 29ರ ವಯೋಮಾನದ ನಡುವಿನ ಯುವಸಮೂಹದ ಭಾಗವಹಿಸಿಕೆಯು ಇದೇ ರೀತಿಯಲ್ಲಿದೆ.

ಎಲ್ಲ ವರ್ಗದ ಗುಂಪುಗಳಲ್ಲೂ ನಿರುದ್ಯೋಗವು 6.1% ರಿಂದ 15.6%ರವರೆಗೆ ಇದೆ. ನಗರದ ಮಹಿಳೆಯರಲ್ಲಿ (15 –29) ಅತಿಹೆಚ್ಚು ಅಂದರೆ 15.6%ರಷ್ಟು ನಿರುದ್ಯೋಗಿಗಳು ಬಹುಶಃ ಕುಟುಂಬದ ಬೆಂಬಲ ಬಲವಾಗಿರುವುದು ಇದಕ್ಕೆ ಕಾರಣವಿರಬಹುದು. 15 – 19ರ ವಯೋಮಾನದವರಲ್ಲಿ ಎಲ್ಲ ಗುಂಪುಗಳಲ್ಲೂ ನಿರುದ್ಯೋಗವಿದ್ದು ವಯಸ್ಸು ಹೆಚ್ಚಿದಂತೆ ಇದು ಕಡಿಮೆಯಾಗುವುದಾದರೂ ಒಟ್ಟಾರೆ ನೋಡಿದಾಗ ರಾಷ್ಟ್ರೀಯ ಸರಾಸರಿ ಸೂಚ್ಯಂಕದಲ್ಲಿ ಇದು ಹೆಚ್ಚೇ ಆಗಿದೆ.

ವಿದ್ಯಾವಂತ ಯುವಸಮೂಹದಲ್ಲಿ ನಿರುದ್ಯೋಗದ ಪ್ರಮಾಣವು ಹೆಚ್ಚಾಗಿದೆ. ಇಯುಎಸ್ 2011–12ರ ಅಂಕಿಅಂಶಗಳ ಪ್ರಕಾರ ಯುವವಿದ್ಯಾವಂತ ಸಮೂಹದಲ್ಲಿ ನಿರುದ್ಯೋಗವು ಹೆಚ್ಚಾಗಿರಲು

**ಕೋಷ್ಟಕ 1 : ಕಾರ್ಮಿಕ ಶಕ್ತಿಯ ಭಾಗವಹಿಸುವಿಕೆಯ ಪ್ರಮಾಣ, ಕಾರ್ಮಿಕ ಜನಸಂಖ್ಯೆಯ ಪ್ರಮಾಣ, ವಿವಿಧ ವಯೋಮಾನಗಳ ಯುವನಿರುದ್ಯೋಗಿಗಳ ಪ್ರಮಾಣ.**

| ವಯಸ್ಸು | 1999–2000 | | | 2011–12 | | |
|---|---|---|---|---|---|---|
| | LFPR | WPR | UR | LFPR | WPR | UR |
| **ಗ್ರಾಮೀಣ ಪುರುಷರು** | | | | | | |
| 15–19 | 532 | 503 | 6.5 | 333 | 303 | 11.4 |
| 20–24 | 889 | 844 | 6.2 | 788 | 742 | 6.9 |
| 25–29 | 975 | 950 | 3.2 | 963 | 942 | 2.8 |
| 15–29 | – | 741 | 5.1 | – | 616 | 6.1 |
| All | 540 | 531 | - | 553 | 543 | - |
| **ಗ್ರಾಮೀಣ ಮಹಿಳೆಯರು** | | | | | | |
| 15–19 | 314 | 304 | 3.1 | 164 | 156 | 8.0 |
| 20–24 | 425 | 409 | 4.9 | 297 | 278 | 9.9 |
| 25–29 | 498 | 491 | 2.4 | 369 | 357 | 5.8 |
| 15–29 | – | 400 | 3.7 | – | 258 | 7.8 |
| All | 302 | 299 | - | 253 | 248 | - |
| **ನಗರಗಳ ಪುರುಷರು** | | | | | | |
| 15–19 | 366 | 314 | 15.4 | 256 | 223 | 14.4 |
| 20–24 | 755 | 658 | 13.9 | 664 | 594 | 11.6 |
| 25–29 | 951 | 883 | 7.5 | 951 | 906 | 5.3 |
| 15–29 | – | 593 | 11.5 | – | 558 | 8.9 |
| All | 542 | 518 | - | 563 | 546 | - |
| **ನಗರಗಳ ಮಹಿಳೆಯರು** | | | | | | |
| 15–19 | 121 | 105 | 15.5 | 89 | 78 | 15.3 |
| 20–24 | 191 | 155 | 25.8 | 197 | 160 | 21.9 |
| 25–29 | 214 | 194 | 15.8 | 253 | 231 | 10.8 |
| 15–29 | – | 149 | 19.9 | – | 157 | 15.6 |
| All | 147 | 139 | - | 155 | 147 | - |

force (which includes both the employed and unemployed) per 1000 persons / person-days.2.Worker Population Ratio (WPR) is defined as the number of persons/person-days employed per 1000 persons/person-days.3.Unemployment Rate (UR is defined as the number of persons/person-days unemployed per 1000 persons/person-days in the labour force.

ಕಾರಣ ಅವರಲ್ಲಿನ ಕೆಲಸದ ಕಡೆಗಿನ ಮಹತ್ವಾಕಾಂಕ್ಷೆಯ ನಿರೀಕ್ಷೆ ಹಾಗೂ ಅವರ ಮಹತ್ವಾಕಾಂಕ್ಷೆ ಮತ್ತು ಲಭ್ಯ ಕೆಲಸದ ನಡುವೆ ಸಾಮರಸ್ಯವಿಲ್ಲದಿರುವುದಾಗಿದೆ. ಕೋಷ್ಟಕ 2ರಲ್ಲಿ ಔಪಚಾರಿಕ ಶಿಕ್ಷಣ ಮತ್ತು ಡಿಪ್ಲೊಮೊ/ ಪ್ರಮಾಣೀಕೃತ ಕೋರ್ಸುಗಳನ್ನು



ಮಾಡಿದವರ ನಿರುದ್ಯೋಗದ ಪ್ರಮಾಣವನ್ನು ನೀಡಲಾಗಿದೆ.

ಈ ವಿಶ್ಲೇಷಣೆಯು ವೈರುಧ್ಯ ಸನ್ನಿವೇಶವನ್ನು ತೆರೆದಿಡುತ್ತಿದೆ. ಒಂದೆಡೆ ಯುವಸಮೂಹವು ಉದ್ಯೋಗವನ್ನು ಹುಡುಕುತ್ತಿದೆ. ಮತ್ತೊಂದೆಡೆ ಕೈಗಾರಿಕೆಗಳು ಕೌಶಲ್ಯವುಳ್ಳ ಮಾನವಸಂಪನ್ಮೂಲವನ್ನು ಹುಡುಕುತ್ತಿವೆ. ಇಬ್ಬರ ಹುಡುಕಾಟಗಳು ಒಂದಕ್ಕೊಂದು ಪೂರಕವಾಗಿಲ್ಲ. ಇದಕ್ಕೆ ಮುಖ್ಯಕಾರಣ ಈ ಪರಿಸ್ಥಿತಿಯ ನಡುವೆ ಸಮತೋಲನ ಸಾಮರಸ್ಯವಿಲ್ಲದಿರುವುದು. ಯುವಸಮೂಹವು ನಿರುದ್ಯೋಗಿಗಳಾಗಿರಲು ಕಾರಣವೇನೆಂದರೆ ಯಾವುದೋ ಒಂದು ಬಗೆಯ ಕೌಶಲ್ಯಕ್ಕೆ ಹೆಚ್ಚಿನ ಬೇಡಿಕೆಯಿದ್ದು ಅಲ್ಲಿ ಮಾನವಸಂಪನ್ಮೂಲವು ಪೂರೈಕೆಯಾಗುತ್ತಿಲ್ಲ. ವೇತನ, ಶೈಕ್ಷಣಿಕ ಅರ್ಹತೆ ಅಥವಾ ಆ ಕೆಲಸಕ್ಕೆ ಅವಶ್ಯವಿರುವ ನಿರ್ದಿಷ್ಟ ಅರ್ಹತೆಯೂ ಇದಕ್ಕೆ ಕಾರಣವಾಗಿರಬಹುದು. ಶೈಕ್ಷಣಿಕ ಅರ್ಹತೆ ಮತ್ತು ಕೆಲಸಕ್ಕೆ ತಕ್ಕ ಸಾಮರ್ಥ್ಯ ಇವುಗಳ ನಡುವಿನ ಅಸಮತೋಲನ, ಅಥವಾ ತಂತ್ರಜ್ಞಾನದ ಬೆಳವಣಿಗೆಯ ಕಾರಣದಿಂದಾಗಿ ಕೌಶಲ್ಯ ಅಭಿವೃದ್ಧಿಯು ಅತ್ಯವಶ್ಯಕವಾಗಿರುವುದು ಮುಖ್ಯ ಕಾರಣವಾಗಿದೆ. ಭಾರತದಲ್ಲಿ ಅನೌಪಚಾರಿಕ ವಲಯವು 93% ಉದ್ಯೋಗವನ್ನು ಒದಗಿಸುತ್ತಿದೆ. ಉದ್ಯೋಗವನ್ನು ಹುಡುಕುತ್ತಿರುವವರಲ್ಲಿ ಯುವಸಮೂಹವು 49%ರಷ್ಟಿದೆ. ಭಾರತದ ಹೆಚ್ಚು ವಿದ್ಯಾವಂತ ಯುವಸಮೂಹವು ನಿರುದ್ಯೋಗಿಗಳು ಇಲ್ಲವೇ ಅವರಿಗೆ ತಕ್ಕುದಲ್ಲದ ಕೆಲಸಗಳಲ್ಲಿದ್ದಾರೆ ಅಥವ ಕೆಲಸ ಹುಡುಕುತ್ತಿದ್ದಾರೆ ಇಲ್ಲವೇ ಒಂದು ಕೆಲಸದಿಂದ ಮತ್ತೊಂದಕ್ಕೆ ಬದಲಿಸುತ್ತಿದ್ದಾರೆ ಅಥವ ಅಸುರಕ್ಷಿತ ಕೆಲಸದ ವ್ಯವಸ್ಥೆಯಡಿಯಲ್ಲಿದ್ದಾರೆ. 2017ರ ಭಾರತದ ಕೌಶಲ್ಯ ವರದಿಯ ಪ್ರಕಾರ 40% ವಿದ್ಯಾವಂತ ಯುವಕರು ಕೆಲಸಕ್ಕೆ ಅರ್ಹರು. ಸವಾಲಿರುವುದು ಬಡಕೆಲಸಗಾರರ ವಿಷಯದಲ್ಲಿ.

**ಕೋಷ್ಟಕ –2 ವಿದ್ಯಾರ್ಹತೆಗನುಗುಣವಾಗಿ 2011–12ರಲ್ಲಿ ನಿರುದ್ಯೋಗದ ಪ್ರಮಾಣ**

| ಸಾಮಾನ್ಯ ಶಿಕ್ಷಣ ಮಟ್ಟ | ನಿರುದ್ಯೋಗದ ಪ್ರಮಾಣ (15–29 ವರ್ಷಗಳು) | | | |
|---|---|---|---|---|
| | ಗ್ರಾಮೀಣ | | ನಗರ | |
| | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು |
| ಅವಿದ್ಯಾವಂತರು | 2.3 | 0.8 | 2.5 | 1.6 |
| ಸುಶಿಕ್ಷಿತರು ಮತ್ತು ಪ್ರಾಥಮಿಕ ಶಿಕ್ಷಣ ಪಡೆದವರು | 3.2 | 0.6 | 4.8 | 4.3 |
| ಮಾಧ್ಯಮಿಕ ಶಿಕ್ಷಣ ಪಡೆದವರು | 4.2 | 4.6 | 5.1 | 5.8 |
| ಹೈಸ್ಕೂಲು ಶಿಕ್ಷಣ | 4.6 | 8.6 | 5.5 | 15.1 |
| ಪದವಿಪೂರ್ವ ಶಿಕ್ಷಣ | 6.5 | 13.8 | 12.0 | 14.6 |
| ಡಿಪ್ಲೊಮೋ/ ಸರ್ಟಿಫಿಕೇಟ್ | 15.9 | 30.0 | 12.5 | 17.3 |
| ಪದವಿ ಮತ್ತು ಉನ್ನತ | 19.1 | 29.6 | 16.3 | 23.4 |
| ಎಲ್ಲಾ | 5.0 | 4.8 | 8.1 | 13.1 |

ಅವರು ಕೆಲಸಮಾಡುವೆಡೆಗಳಲ್ಲಿನ ಪರಿಸರ ಸುಧಾರಣೆ, ಮಾರುಕಟ್ಟೆಯಲ್ಲಿ ಅಗತ್ಯವಾದ ಕೌಶಲ್ಯಗಳನ್ನು ಅವರುಗಳಿಗೆ ಒದಗಿಸುವುದರ ಬಗ್ಗೆ, ಅವರುಗಳಿಗೆ ಮಾಹಿತಿ ಲಭ್ಯವಾಗದಿರುವುದರ ಬಗ್ಗೆ ಹಾಗೂ ಕೌಶಲ್ಯ ಅಭಿವೃದ್ಧಿಯಲ್ಲಿ ಅವರುಗಳು ಹೆಚ್ಚಾಗಿ ಪಾಲ್ಗೊಳ್ಳುವುದರ ಬಗ್ಗೆ ಗಮನ ಅತ್ಯಗತ್ಯ. ಮೇಲಿನ ಅಂಶಗಳಿಂದ ಸ್ಪಷ್ಟವಾಗುವುದೇನೆಂದರೆ (1) ಬೇಡಿಕೆಗನುಗುಣವಾಗಿ ಸಂಪನ್ಮೂಲವನ್ನು ಒದಗಿಸುವುದು (2) ಉದ್ಯಮಗಳಿಗೆ ಹಾಗೂ ಕಾರ್ಮಿಕರಿಗೆ ಬದಲಾವಣೆಗೆ ಹೊಂದಿಕೊಳ್ಳಲು ನೆರವು ನೀಡುವುದು (3) ಭವಿಷ್ಯತ್ತಿನ ಮಾರುಕಟ್ಟೆಯನ್ನು ಗಮನದಲ್ಲಿರಿಸಿಕೊಂಡು ಅದಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಉದ್ಯೋಗವನ್ನು ಹೆಚ್ಚಿಸಲು ಏನು ಮಾಡಬೇಕು ಎನ್ನುವುದು ಮುಖ್ಯ ಪ್ರಶ್ನೆ.

### ಉದ್ಯೋಗಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ನೀಡಲಾಗುವ ಸಹಯೋಗ

ಪ್ರದೇಶಗಳ ಭೇದವಿಲ್ಲದೆ ಎಲ್ಲೆಡೆಯು ಯುವಸಮೂಹವು ಉದ್ಯೋಗದಲ್ಲಿರುವಂತೆ ಮಾಡಲು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಿಷನ್ ಹಾಗೂ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲ ನೀತಿಯನ್ನು 2015ರಲ್ಲಿ ತರಲಾಯಿತು. ಇದರ ಮೂಲ ಉದ್ದೇಶ ಕೌಶಲ್ಯ ಪಡೆದಿರುವವರನ್ನು ಒಂದೆಡೆ ಸೇರಿಸುವುದು; ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ಬೇಡಿಕೆಗೆ ತಕ್ಕಂತೆ ಇನ್ನಿತರ ಕೌಶಲ್ಯವನ್ನು ಪಡೆಯಲು ನೆರವಾಗುವುದು; ಸಾಮಾನ್ಯ ಮತ್ತು ಜಾಗತಿಕ ಗುಣಮಟ್ಟಕ್ಕನುಗುಣವಾಗಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿಯ ಕೋರ್ಸುಗಳನ್ನು ರೂಪಿಸುವುದು; ಉದ್ದಿಮೆಗಳಲ್ಲಿನ ಬೇಡಿಕೆಗನುಗುಣವಾಗಿ ಮಾನವಸಂಪನ್ಮೂಲವನ್ನು ಹೊಂದಿಸುವುದು. ಸೌಲಭ್ಯವಂಚಿತ ಗುಂಪುಗಳಿಗೂ ಕೂಡ ಈ ಕಾರ್ಯಕ್ರಮಗಳು ತಲುಪುವಂತೆ ಮಾಡುವ ಮೂಲಕ ಅವರನ್ನು ಭಾಗಿಯಾಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಹೈಸ್ಕೂಲು ಶಿಕ್ಷಣ ಅದರಲ್ಲಿಯೂ 10ನೇ ತರಗತಿ ಶಿಕ್ಷಣದೊಂದಿಗೆ ವೃತ್ತಿಪರ ತರಬೇತಿಗಳನ್ನು ಪಠ್ಯದೊಂದಿಗೆ ಜೋಡಿಸುವುದರಿಂದ ಕೌಶಲ್ಯದ ಗುಣಮಟ್ಟವನ್ನು ಹೆಚ್ಚಿಸಬಹುದಾಗಿದೆ. ಈ ಬಗೆಯ ಶಿಕ್ಷಣರೂಪಿಸುವುದರೊಂದಿಗೆ ವಿವಿಧ ಕೈಗಾರಿಕೆಗಳು/ಉದ್ದಿಮೆಗಳ ಸಹಯೋಗದಲ್ಲಿ ಈ ನಿಟ್ಟಿನಲ್ಲಿ ತರಬೇತಿ ನೀಡಲು

ರೂಪುರೇಷೆಗಳನ್ನು ಸಿದ್ಧಪಡಿಸಬಹುದು. ಆಗ ಹೊಸ ಸಂಸ್ಥೆಗಳು ಹಲವುಕೌಶಲ್ಯಗಳ ತರಬೇತಿಯನ್ನು ರೂಪಿಸಿಕೊಡುವುದರ ಮೂಲಕ ಬದಲಾಗುತ್ತಿರುವ ಕೆಲಸದ ಅಗತ್ಯಗಳಿಗೆ ತಕ್ಕಂತೆ ಜನರನ್ನು ತರಪೇತುಗೊಳಿಸಬಹುದು. ಇಂತಹ ಸಂಸ್ಥೆಗಳಲ್ಲಿ ನುರಿತ ತರಬೇತುದಾರರ/ಶಿಕ್ಷಕರ ಅಗತ್ಯವಿದೆ. ಸೂಕ್ತ ರೀತಿಯಲ್ಲಿ ಸಂಶೋಧನೆ/ಅಧ್ಯಯನಗಳನ್ನು ನಡೆಸಿ ವೃತ್ತಿಪರ ಶಿಕ್ಷಣ ನೀಡುವ ಕೌಶಲ್ಯ ಸಂಸ್ಥೆಗಳನ್ನು ದೂರದರ್ಶಿತ್ವದೊಂದಿಗೆ ರೂಪಿಸಬೇಕು.

ಕೌಶಲ್ಯ ಅಭಿವೃದ್ಧಿ ಮತ್ತು ಉದ್ದಿಮೆ ಸಚಿವಾಲಯವು ಸೇರಿದಂತೆ 20 ಕೇಂದ್ರ ಸಚಿವಾಲಯಗಳು ಯುವಸಮೂಹಕ್ಕೆ ಉದ್ಯೋಗವನ್ನು ಒದಗಿಸಲು ನೀಡುತ್ತಿರುವ ವಿವಿಧ ರೀತಿಯ ನೆರವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು : ಸಾಮಾನ್ಯ ಕಾರ್ಯಕ್ರಮಗಳು, ಪ್ರದೇಶ ಕೇಂದ್ರಿತ ಮತ್ತು ವಲಯ ಕೇಂದ್ರಿತ. 13000ಕ್ಕೂ ಹೆಚ್ಚು ಇನ್‌ಸ್ಟಿಟ್ಯೂಟ್‌ಗಳು, 4000ಕ್ಕೂ ಹೆಚ್ಚು ಪಾಲಿಟೆಕ್ನಿಕ್‌ಗಳು ಮತ್ತು 20,000ಕ್ಕೂ ಹೆಚ್ಚು ವೃತ್ತಿತರಬೇತಿ ಸಂಸ್ಥೆಗಳು ವಿವಿಧ ಕೌಶಲ್ಯಗಳಲ್ಲಿ ತರಬೇತಿ ನೀಡುತ್ತಿವೆ. ಈ ತರಬೇತಿಗಳು ವ್ಯಕ್ತಿಗಳಿಗೆ ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಕಂಡುಕೊಳ್ಳಲು, ಆ ನಿಟ್ಟಿನಲ್ಲಿ ಸೂಕ್ತ ತರಬೇತಿ ಪಡೆಯಲು ಎಲ್ಲ ಬಗೆಯ ಅನುಕೂಲಗಳನ್ನು ಒದಗಿಸುತ್ತಿದೆ. ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿಯಲ್ಲಿ ಕೌಶಲ್ಯಗಳನ್ನು ಕಲಿಯಲು ಹಾಗೂ ಕಲಿತಿರುವ ಕೌಶಲ್ಯವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಅನೌಪಚಾರಿಕ ವಲಯಗಳಲ್ಲಿನ ಕಾರ್ಮಿಕರಿಗೆ ಅವಕಾಶ ಒದಗಿಸುತ್ತಿದೆ. ಈ ಯೋಜನೆಯು ಹೈಸ್ಕೂಲು ಶಿಕ್ಷಣದ ನಂತರ ಓದನ್ನು ಬಿಟ್ಟವರಿಗೆ ಅಗತ್ಯ ಕೌಶಲಗಳನ್ನು ಕಲಿತು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಅವಕಾಶ ಒದಗಿಸುತ್ತದೆ. ಆದರೆ ಈ ಉದ್ದೇಶವು ಸಫಲವಾಗಲು ಕೌಶಲ್ಯ ಯೋಜನೆಯ ತರಬೇತಿ ಪಡೆಯಲು ಸ್ವಯಂಪ್ರೇರಣೆಯಿಂದ ಮುಂದೆಬರುವಂತೆ ಮಾಡಲು ಈ ವಿಷಯವನ್ನು ಸಾಧ್ಯವಾದಷ್ಟು ಪ್ರಚುರಪಡಿಸಬೇಕು. ರಾಷ್ಟ್ರೀಯ ಕೌಶಲ್ಯ ಶಿಕ್ಷಣದ ರೂಪುರೇಷೆಗಳು ಎಲ್ಲ ಪ್ರದೇಶಗಳಲ್ಲೂ ಏಕರೂಪದಲ್ಲಿರುವಂತೆ ಮಾಡುವುದು ಹಾಗೂ ಕೌಶಲ್ಯ ತರಬೇತಿಗೆ ಸ್ವಯಂಪ್ರೇರಿತವಾಗಿ ಮುಂದೆಬರುವುದು;



ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಏಕರೀತಿಯ ನಿಯಮಗಳನ್ನು ಅಳವಡಿಸಿಕೊಳ್ಳುವುದು; ಕಾರ್ಮಿಕ ಮಾರುಕಟ್ಟೆಯ ಮಾಹಿತಿ ವ್ಯವಸ್ಥೆಯನ್ನು ಎಲ್ಲ ಭಾಗಿದಾರರಿಗೂ ಲಭ್ಯವಿರುವಂತೆ ಮಾಡುವುದು; ದೇಶದಲ್ಲಿ ಕೌಶಲ್ಯ ಅಭಿವೃದ್ಧಿಯ ಕಡೆ ನಿಗಾವಹಿಸುವುದು ಇತ್ಯಾದಿ ಕೆಲಸಗಳನ್ನು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಸಂಸ್ಥೆಯು ಮಾಡುತ್ತಿದೆ. ಇದರೊಂದಿಗೆ ಖಾಸಗಿ ವಲಯಗಳ ಪ್ರಯತ್ನಗಳನ್ನು ಬೆಂಬಲಿಸುತ್ತಾ ಅವುಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಅಗತ್ಯ ತರಬೇತಿಯನ್ನೂ ಒದಗಿಸುವುದರೊಂದಿಗೆ 2015ರ ನೀತಿಯ ಗುರಿಯನ್ನು ಮುಟ್ಟಲು ಯತ್ನಿಸುತ್ತಿದೆ. ವಲಯಗಳ ಕೌಶಲ್ಯ ಮಂಡಳಿಗಳು, ಕೈಗಾರಿಕೆಗಳ ಘಟಕಗಳು ಅಗತ್ಯವಿರುವ ತರಬೇತಿಯನ್ನು ಬೇಡಿಕೆಯಿರುವಲ್ಲಿ ಒದಗಿಸುತ್ತಿದೆ. ಹಾಗೂ ಪಠ್ಯಕ್ರಮವನ್ನು ಅಭಿವೃದ್ಧಿ ಪಡಿಸುವುದರಲ್ಲೂ ನೆರವಾಗುತ್ತಿದೆ. ಸರ್ಕಾರವು ಕೌಶಲ್ಯ ಅಭಿವೃದ್ಧಿ ಯೋಜನೆಯಲ್ಲಿ ಬಡವಿದ್ಯಾರ್ಥಿಗಳು ಪಾಲ್ಗೊಳ್ಳಲು ನೆರವಾಗುವಂತೆ ಸಾಲ ಸೌಲಭ್ಯವನ್ನು ಒದಗಿಸುತ್ತಿದೆ. ಅಗತ್ಯವಾದ ನೀತಿಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಕೂಡ ಆರ್ಥಿಕ ಅಭಿವೃದ್ಧಿಯಲ್ಲಿ ಯುವಶಕ್ತಿಯ ಭಾಗವಹಿಸುವಿಕೆಗೆ ಇನ್ನೂ ಹೆಚ್ಚಿನದನ್ನು ಮಾಡುವ ಅಗತ್ಯವಿದೆ. ಮುಂದಿನ ಭಾಗದಲ್ಲಿ ಇದಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

## ಯುವಶಕ್ತಿಯ ಜಾಗೃತೀಕರಣ : ಏನೇನು ಮಾಡಬಹುದು?

### 1. ಯುವಕರ ಆಕಾಂಕ್ಷೆಗಳ ಸಮೀಕ್ಷೆ

ಯುವಕರ ಆಸಕ್ತಿ, ಆಕಾಂಕ್ಷೆಗಳ ಸಮೀಕ್ಷೆಯನ್ನು ಮಾಡಿದಾಗ ಸಮಾಜೋಆರ್ಥಿಕ ಬೆಳವಣಿಗೆಗೆ ಅನುಕೂಲವಾಗುವಂತೆ ಉದ್ಯೋಗಾವಕಾಶಗಳನ್ನು ರೂಪಿಸಲು ಸಾಧ್ಯವಾಗುವುದು. ಲಭ್ಯವಿರುವ ಮಾಹಿತಿಯ ವಿಶ್ಲೇಷಣೆ (EUS, 2011–12) ಮಾಡಿದಾಗ ಕೆಲ ಅಂಶಗಳು ಕಂಡುಬಂದಿವೆ. ಗ್ರಾಮೀಣ, ನಗರ ಪ್ರದೇಶಗಳಲ್ಲಿ ಯಾವ ಬಗೆಯ ತರಬೇತಿಗೆ ಯುವಸಮೂಹದ ಒಲವಿದೆ ಎಂದು ತಿಳಿದುಬಂದಿದೆ. ಅವು ಹೀಗಿವೆ : ಗ್ರಾಮೀಣ ಭಾಗಗಳ ಯುವಕರಲ್ಲಿ 22.3% ವಾಹನ ಚಾಲನೆ ಮತ್ತು ಮೆಕ್ಯಾನಿಕ್ ಕೆಲಸಗಳ ತರಬೇತಿ ಪಡೆದಿದ್ದಾರೆ/ಪಡೆಯುತ್ತಿದ್ದಾರೆ. ನಗರಗಳಲ್ಲಿ 26.3% ಯುವಕರು 'ಕಂಪ್ಯೂಟರ್ ವ್ಯಾಪಾರ'ಕ್ಕೆ ಸಂಬಂಧಿಸಿದ ತರಬೇತಿಗಳನ್ನು ಪಡೆದಿದ್ದಾರೆ. ಅದೇ ರೀತಿ ಗ್ರಾಮೀಣ ಯುವತಿಯರಲ್ಲಿ 32.2% ಮಂದಿ 'ಜವಳಿ' ಗೆ ಸಂಬಂಧಿಸಿದ ತರಬೇತಿ ಪಡೆದಿದ್ದಾರೆ. ಅದೇ ನಗರದ ಯುವತಿಯರಲ್ಲಿ 30.4% ಮಂದಿ ಕಂಪ್ಯೂಟರ್ ಸಂಬಂಧಿ ತರಬೇತಿಯನ್ನು ಪಡೆದಿದ್ದಾರೆ. ಇದು ಎನ್‌ಎಸ್‌ಡಿಸಿ ತೋರಿಸುತ್ತಿರುವ ಕೌಶಲ್ಯದ ಕೊರತೆಯಲ್ಲಿನ ಅಂತರವನ್ನು ಎತ್ತಿ ತೋರಿಸುತ್ತದೆ. ಬೇಡಿಕೆ ಮತ್ತು ಪೂರೈಕೆಯ ಹಿನ್ನೆಲೆಯಲ್ಲಿ ಇರುವ ಅಸಮಂಜಸ ಪರಿಸ್ಥಿತಿಯನ್ನು ಇದು ತೋರಿಸುತ್ತದೆ. ಎನ್‌ಎಸ್‌ಡಿಸಿಯ ವರದಿಗಳ ಪ್ರಕಾರ ಅತಿಹೆಚ್ಚು ಕೌಶಲ್ಯಯುಕ್ತ ಮಾನವಸಂಪನ್ಮೂಲವನ್ನು ಬೇಡುವ ವಲಯಗಳು ಇಂತಹ ಕೌಶಲ್ಯವುಳ್ಳವರ ಕೊರತೆಯನ್ನು ಎದುರಿಸುತ್ತಿದೆ. ಈ ಅಸಮಂಜಸ ಸಾಮರಸ್ಯದ ಕೊರತೆಯನ್ನು ಕುರಿತಾದ ಎನ್‌ಎಸ್‌ಡಿಸಿಯ ವರದಿಯು ಪೂರೈಕೆಗನುಗುಣವಾಗಿ ಯುವಸಮೂಹದ ಆಸಕ್ತಿ, ಆಕಾಂಕ್ಷೆಗಳ ಸಮೀಕ್ಷೆ ಮಾಡಬೇಕಾದ ಅಗತ್ಯವನ್ನು ಎತ್ತಿಹಿಡಿಯುತ್ತದೆ. ಈ ಸಮೀಕ್ಷೆಗಳ ಅಂಕಿಅಂಶಗಳ ಪ್ರಕಾರ ಹಲವು ರಾಜ್ಯಗಳಲ್ಲಿ ಕಟ್ಟಡನಿರ್ಮಾಣ, ಸಾರಿಗೆ, ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು, ಆಹಾರ ಸಂಸ್ಕರಣೆ – ಕ್ಷೇತ್ರಗಳಲ್ಲಿ ಹೆಚ್ಚಿನ ಬೇಡಿಕೆಯಿದೆ. ಮತ್ತೆ ಕೆಲವು ರಾಜ್ಯಗಳಲ್ಲಿ ಇವುಗಳಿಗೆ ಸಂಬಂಧಿಸಿದ ಬೇಡಿಕೆ ಕಡಿಮೆ.

ಹಾಗಾಗಿ ಬೇಡಿಕೆ, ಪೂರೈಕೆಯನ್ನು ಆರ್ಥಿಕತೆಯ ಅಗತ್ಯಕ್ಕೆ ತಕ್ಕಂತೆ ಹೊಂದಿಸಲು ಈ ಸಮೀಕ್ಷೆ ನಡೆಸುವುದು ಕಷ್ಟಕರವಾದದ್ದು. ಅತ್ಯುತ್ತಮ ಕ್ಷಮತೆಯನ್ನು ತರಬೇತಿಯಲ್ಲಿ ತೋರಿದವರನ್ನು ಗುರುತಿಸುವ ಹಾಗೂ ಸನ್ಮಾನಿಸುವ ಮೂಲಕ ಯುವಸಮೂಹವನ್ನು ಕೌಶಲ್ಯ



ತರಬೇತಿ ಪಡೆಯಲು ಪ್ರೋತ್ಸಾಹಿಸಬಹುದು. ಶ್ರಮದಾಯಕ ಕೆಲಸಕ್ಕಿರುವ ಗೌರವವನ್ನು ಚಿಕ್ಕಂದಿನಲ್ಲೇ ಮಕ್ಕಳಿಗೆ ಮನದಟ್ಟು ಮಾಡಿಸಿದರೆ ಕೇವಲ ಬಿಳಿಕಾಲರಿನ ಕೆಲಸಗಳೇ ಗೌರವಯುತವಾದದ್ದು ಎನ್ನುವ ಗ್ರಹಿಕೆಯನ್ನು ಬದಲಿಸಬಹುದು. ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಭಿನ್ನ ಬಗೆಗಳಲ್ಲಿ ಪ್ರಚುರಪಡಿಸಬೇಕು ಹಾಗೂ ಅದನ್ನು ಪಡೆಯಲು ಯುವಸಮೂಹದಲ್ಲಿ ಆಸಕ್ತಿ ಹುಟ್ಟುವಂತೆ ಮಾಡಬೇಕು. ಇದು ಯುವಸಮೂಹವನ್ನು ಸನ್ನದ್ಧಗೊಳಿಸಲು ನೆರವಾಗುವುದು.

**2. ಗುರಿ ತಲುಪಲು ಅಗತ್ಯವಾದ ಸನ್ನದ್ಧತೆ**

2015 ರ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮತ್ತು ಉದ್ದಿಮೆ ನೀತಿ ಅನ್ವಯ ಭಾರತವು 110 ಮಿಲಿಯನ್ ಮಂದಿಗೆ ಕೌಶಲ್ಯ ತರಬೇತಿ ನೀಡಬೇಕಾಗಿದೆ. ಅದೇ ರೀತಿ 290 ಮಿಲಿಯನ್ ಮಂದಿಗೆ 2022ರ ವೇಳೆಗೆ ಪುನರ್‌ಕೌಶಲ್ಯ/ ಹೆಚ್ಚಿನಕೌಶಲ್ಯ ತರಬೇತಿಯ ಮೂಲಕ ತರಪೇತುಗೊಳಿಸಬೇಕಾಗಿದೆ. ಇದನ್ನು ಸಾಧಿಸಲು ದೇಶದೆಲ್ಲೆಡೆ ವಿದ್ಯಾರ್ಥಿಗಳನ್ನು ಹಾಗೂ ಯುವಸಮೂಹವನ್ನು ಕೌಶಲ್ಯ ತರಬೇತಿ ಪಡೆಯಲು ಸನ್ನದ್ಧಗೊಳಿಸಬೇಕಾಗಿದೆ. ಎಷ್ಟರಮಟ್ಟಿಗೆ ಈ ಕೆಲಸಕ್ಕೆ ನಾವು ಸನ್ನದ್ಧರಿದ್ದೇವೆ ಎನ್ನುವುದರ ಮೇಲೆ ಕೌಶಲ್ಯ ತರಬೇತಿಯ ಕಾರ್ಯಕ್ರಮದ ಯಶಸ್ಸು ನಿಂತಿದೆ. ಪ್ರಸ್ತುತ ಸನ್ನಿವೇಶದಲ್ಲಿ ಅಭ್ಯರ್ಥಿಯ ಸನ್ನದ್ಧತೆಯು ತರಪೇತುದಾರನನ್ನು ಅವಲಂಬಿಸಿದೆ. ವೃತ್ತಿಪರ ತರಬೇತಿಗಳ ಮಾಹಿತಿ ಕೊರತೆ, ಕಾರ್ಮಿಕ ಮಾರುಕಟ್ಟೆಯ ಅಗತ್ಯಗಳ ಅರಿವಿಲ್ಲದಿರುವುದು; ಈ ತರಬೇತಿ ಪಡೆಯಲು ಅನುಕೂಲವಿಲ್ಲದಿರುವುದು; ವಲಸೆ ಹೋಗಲು ಇಚ್ಛಿಸದಿರುವುದು; ಹಳೆಯ ಪಠ್ಯಕ್ರಮ ಇತ್ಯಾದಿಗಳು ಯುವಸಮೂಹವನ್ನು ಸನ್ನದ್ಧಗೊಳಿಸಲು ಅಡ್ಡಿಗಳಾಗಿವೆ. ಹಾಗಾಗಿ ಈ ಕ್ಷಣದ ಅಗತ್ಯ ಸೂಕ್ತ ತರಬೇತು ಅಭ್ಯರ್ಥಿಗಳನ್ನು ಸನ್ನದ್ಧಗೊಳಿಸುವುದಾಗಿದೆ. ಮಹಾರಾಷ್ಟ್ರ ಸರ್ಕಾರದ ಕೌಶಲ್ಯ ಸಖಿ ಮಾದರಿಯು ಅನುಕರಣೀಯ. ಇದರಲ್ಲಿ ಸಮುದಾಯದ ಯುವತಿಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಪ್ರಯೋಜನ ಪಡೆಯಲು ಸನ್ನದ್ಧಗೊಳಿಸಲಾಗಿದೆ. ಇವರು ಸ್ಥಳೀಯ ಮಟ್ಟದಲ್ಲಿ ಬದಲಾವಣೆಗೆ ನಾಂದಿ ಹಾಡುವ ಮೂಲಕ ಸಮುದಾಯವನ್ನು ಈ ಕಾರ್ಯಕ್ರಮವನ್ನು ಯಶಸ್ಸುಗೊಳಿಸುವಲ್ಲಿ ಸಹಭಾಗಿಗಳನ್ನಾಗಿಸಿದೆ. ಸ್ಥಳೀಯ ಸಂಸ್ಥೆಗಳು ಈ ನಿಟ್ಟಿನಲ್ಲಿ ಬದಲಾವಣೆಯ ಹರಿಕಾರರಾಗಬಹುದು. ಅವರು ಸ್ಥಳೀಯ ಯುವಸಮೂಹದಲ್ಲಿ ತರಬೇತಿಯ ಅಗತ್ಯವಿರುವವರ ಮಾಹಿತಿಯನ್ನು ಕಲೆಹಾಕಿ ಅವರಿಗೆ ದಿನವೇತನ/ಸ್ವಯಂ ಉದ್ಯೋಗಕ್ಕೆ ಅಗತ್ಯವಾದ ತರಬೇತಿಯನ್ನು ಕೊಡಿಸುವಲ್ಲಿ ಸಹಕರಿಸಬಹುದು. ಈ ಮಾಹಿತಿಯನ್ನು ಎಸ್‌ಎಸ್‌ಡಿಎಂನ ಜಾಲತಾಣದಲ್ಲಿ ಆಧಾರ್ ಸಂಖ್ಯೆ, ಮತದಾನದ ಗುರುತಿನಚೀಟಿ, ಬ್ಯಾಂಕ್ ಖಾತೆ ಸಂಖ್ಯೆಯ ಮೂಲಕ ಸಂಗ್ರಹಿಸಿಡಬಹುದು. ಈ ಸಂಸ್ಥೆಗಳಿಗೆ ಪ್ರತಿ ಮನೆಗೂ ಭೇಟಿ ನೀಡಿ, ಪೋಷಕರೊಡನೆ ಮಾತನಾಡಿ ಅವರ ಮನವೊಲಿಸುವ ಹಾಗೂ ತರಬೇತಿ ಅಗತ್ಯವಿರುವ ನಿರುದ್ಯೋಗಿಗಳ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯವನ್ನು ವಹಿಸಬಹುದು. ರಾಷ್ಟ್ರೀಯ ಜಾಗೃತ ಪ್ರಚಾರವು ಶಾಲೆ, ಕಾಲೇಜು ಮತ್ತಿತರ ಶಿಕ್ಷಣ ಸಂಸ್ಥೆಗಳ ಭೇಟಿಯನ್ನು ಒಳಗೊಂಡಿದೆ. ಹಾಗೂ ಕಾರ್ಮಿಕ ಮಾರುಕಟ್ಟೆಗೆ ಅತಿ ಹೆಚ್ಚಿನ ತರಬೇತಿ ಅಭ್ಯರ್ಥಿಗಳನ್ನು ಸೆಳೆಯುವ ಉದ್ದೇಶವನ್ನು ಹೊಂದಿದೆ.

**3. ವಿಭಿನ್ನತೆಯನ್ನು ಗಮನದಲ್ಲಿರಿಸಿಕೊಳ್ಳುವುದು**

ಭಾರತದ ಕಾರ್ಮಿಕ ಮಾರುಕಟ್ಟೆಯಲ್ಲಿ ವಲಯ, ಲಿಂಗ ಹಾಗೂ ಪ್ರಾದೇಶಿಕ ವೈವಿಧ್ಯತೆಯಿದೆ. ಕಾರ್ಮಿಕ ಮಾರುಕಟ್ಟೆಯಲ್ಲಿ ಅನೌಪಚಾರಿಕ ಉದ್ಯೋಗವು (93%) ಪ್ರಧಾನವಾಗಿದ್ದು ಔಪಚಾರಿಕ ವಲಯದಲ್ಲಿ 8% ಮಾತ್ರ ಅವಕಾಶಗಳಿವೆ. ಎರಡೂ ವಲಯಗಳಿಗೂ ಅಗತ್ಯವಿರುವ ತರಬೇತಿಯ ಸ್ವರೂಪವು ಭಿನ್ನ. ಅನೌಪಚಾರಿಕ ವಲಯದಲ್ಲಿ ಉದ್ಯೋಗ ವಿಭಜನೆಯು ಸೂಕ್ತವಾಗಿಲ್ಲ. ಅಲ್ಲಿ ಕೌಶಲ್ಯದ ಕೊರತೆಯಿಂದಾಗಿ ಉತ್ಪಾದನೆಯ ಮೇಲೆ ಕೂಡ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಈ ವಲಯದಲ್ಲಿನ ಕಾರ್ಮಿಕರ ಶಿಕ್ಷಣ ಹಾಗೂ ಕೌಶಲ್ಯದ ಗುಣಮಟ್ಟ ಕಡಿಮೆ ಮಟ್ಟದ್ದಾಗಿರುತ್ತದೆ. ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಕಾರ್ಯಕ್ರಮವನ್ನು ಉತ್ತಮ ಕೌಶಲ್ಯಪೂರ್ಣ ಮಾನವಸಂಪನ್ಮೂಲ ನಿರ್ಮಾಣಕ್ಕೆ ಬಳಸಬೇಕು.

ಒಟ್ಟು ಜನಸಂಖ್ಯೆಯಲ್ಲಿ 48% ಮಹಿಳೆಯರಿದ್ದಾರೆ. ಆದರೆ ಅವರಲ್ಲಿ ಕಾರ್ಮಿಕ ಶಕ್ತಿ ಪಟ್ಟಿಯಲ್ಲಿರುವವರು 22% ಮಾತ್ರ. ಮಾನ್ಯ ಪ್ರಧಾನಮಂತ್ರಿಗಳು "ಮಹಿಳೆಯರ ಶಕ್ತಿಯನ್ನು ಸಂವರ್ಧನೆಗೊಳಿಸಿ ಅದನ್ನು ಅಭಿವೃದ್ಧಿಯ ಪ್ರಕ್ರಿಯೆಯೊಡನೆ ಬೆಸೆದಲ್ಲಿ ಯಾವುದೇ ದೇಶದ ಅಭಿವೃದ್ಧಿಯನ್ನು ಶರವೇಗದಲ್ಲಿ ಸಾಧಿಸಬಹುದಾಗಿದೆ" ಎಂದು ಹೇಳಿದ್ದಾರೆ. ಈ ಕ್ಷಣದ ತುರ್ತು ಅವಶ್ಯಕತೆ, ಮಹಿಳೆಯರಿಗೆ ಅಗತ್ಯವಾದ ಕೌಶಲ್ಯ/ ಪುನರ್‌ಕೌಶಲ್ಯ ತರಬೇತಿಯನ್ನು ಒದಗಿಸಿ ಅವರನ್ನು ಕಾರ್ಮಿಕ ಮಾರುಕಟ್ಟೆಗೆ ಸೇರಿಸುವುದಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ನೀತಿಯನ್ನು ರೂಪಿಸಬೇಕು. ಅದೇ ರೀತಿ ಲಿಂಗಾಧರಿತ ಹಳೆಯ ಜವಾಬ್ದಾರಿ ರಹಿತ ವ್ಯವಸ್ಥೆ ಮುರಿಯುವ ಅಗತ್ಯವಿದೆ. ದೈನಿಕಗಳಿಗಿಂತ ಭಿನ್ನವಾದ ಚಟುವಟಿಕೆಗಳಲ್ಲಿ ಹಾಗೂ ಕೌಶಲ್ಯ ತರಬೇತಿಗಳಲ್ಲಿ ಮಹಿಳೆಯರು ತೊಡಗಿಸಿಕೊಳ್ಳುವಂತಿರಬೇಕು. ಈ ನಿಟ್ಟಿನಲ್ಲಿ ಹರಿಯಾಣ ಸರ್ಕಾರವು ಜಿಂದಾಲ್ ಉಕ್ಕು ಕಾರ್ಖಾನೆಗಳ ಸಹಯೋಗದಲ್ಲಿ ಮಹಿಳೆಯರಿಗೆ ಅಲ್ಲಿ ಕೆಲಸ ಮಾಡುವ ಅವಕಾಶ ಒದಗಿಸಿರುವುದು ಅನುಕರಣೀಯ.

ಕೇವಲ ಲಿಂಗ ಮತ್ತು ವಲಯ ತಾರತಮ್ಯಗಳಲ್ಲದೆ ಉತ್ತರ ಹಾಗೂ ಈಶಾನ್ಯ ರಾಜ್ಯಗಳ ನಡುವೆ ಮತ್ತು ದಕ್ಷಿಣ ಮತ್ತು ಪಶ್ಚಿಮ ರಾಜ್ಯಗಳ ನಡುವೆ ಮೂಲಭೂತ ಸೌಕರ್ಯಗಳ ತಾರತಮ್ಯವಿದೆ. ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ 67% ಖಾಸಗಿ ಮತ್ತು ಸರ್ಕಾರಿ ಐಟಿಐಗಳು 60% ಸೀಟು ಸೌಕರ್ಯದೊಂದಿಗೆ 51% ಜನಸಂಖ್ಯೆಗೆ ಲಭ್ಯವಿದೆ. ಅದೇ ಉತ್ತರ ಹಾಗೂ ಪೂರ್ವ ಭಾಗಗಳಲ್ಲಿ 33%ನಷ್ಟು ಐಟಿಐಗಳು 49% ಜನಸಂಖ್ಯೆಗೆ 40% ಸೀಟು ಸೌಕರ್ಯವನ್ನು ಒದಗಿಸುತ್ತಿವೆ. ಇದರೊಂದಿಗೆ ರಾಜ್ಯ ಮತ್ತು ವಲಯ ಮಟ್ಟದಲ್ಲೂ ಎದ್ದುಕಾಣವಷ್ಟು ವ್ಯತ್ಯಾಸಗಳಿವೆ. ಈ ಭಾಗಗಳಲ್ಲಿ ಮೂಲಭೂತಸೌಕರ್ಯಗಳನ್ನು ಹೆಚ್ಚಿಸುವ ಅಗತ್ಯವಿದೆ. ಸಾಧ್ಯವಿರುವೆಡೆಯಲ್ಲಿ



ಉದ್ಯೋಗವನ್ನು ಅರಸಿ ಈ ಪ್ರದೇಶಗಳಿಂದ ವಲಸೆ ಹೋಗುವುದನ್ನು ತಡೆಯಲು ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿ ತರಬೇತಿಯ ಅನುಕೂಲಗಳನ್ನು ಕಲ್ಪಿಸಬೇಕು. ಮೂಲ ಪ್ರದೇಶಗಳು ಹಾಗೂ ವಲಸೆ ಪ್ರದೇಶಗಳಲ್ಲಿನ ವಲಸೆಕೇಂದ್ರಗಳ ನೆರವನ್ನು ಇದಕ್ಕಾಗಿ ಪಡೆಯಬಹುದು. ಖಾಸಗಿ ವಲಯವು ಈ ಕೆಲಸಕ್ಕೆ ಕೈ ಜೋಡಿಸುವುದನ್ನು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯಾಗಿ ಇಲ್ಲವೆ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ ನೇರವಾಗಿ ತೊಡಗಿಸಿಕೊಳ್ಳುವುದನ್ನು ಉತ್ತೇಜಿಸಬೇಕು.

**4. ಎರಡನೆಯ ಅವಕಾಶ : ಪುನರ್‌ಕೌಶಲ್ಯ/ ಹೆಚ್ಚಿನ ಕೌಶಲ್ಯ ತರಬೇತಿಗೆ ಒತ್ತು ನೀಡುವುದು ಮತ್ತು ಹಿಂದಿನ ಕಲಿಕೆಯನ್ನು ಗುರುತಿಸುವುದು**

ಯುವಸಮೂಹದಲ್ಲಿ ಹೆಚ್ಚಿನ ಮಂದಿ ಹೈಸ್ಕೂಲು ಶಿಕ್ಷಣವನ್ನು ಮುಗಿಸುವ ಮೊದಲೇ ಶಾಲೆಯನ್ನು ಬಿಟ್ಟಿರುತ್ತಾರೆ. 2012–17ರ 12ನೇ ಯೋಜನೆಯ ಪ್ರಕಾರ 47% ವಿದ್ಯಾರ್ಥಿಗಳು ಹೈಸ್ಕೂಲು ಶಿಕ್ಷಣವನ್ನು ಮುಗಿಸುವ ಮುನ್ನವೇ ಶಾಲೆಯನ್ನು ಬಿಟ್ಟಿದ್ದಾರೆ. ಹಾಗಾಗಿ ಅವರು ಅತಿ ಕಡಿಮೆ ಕೌಶಲ್ಯದೊಂದಿಗೆ ಅತಿ ಕಡಿಮೆ ಸಂಬಳಕ್ಕೆ ದುಡಿಯುತ್ತಿರುತ್ತಾರೆ. ಅಂತಹವರಿಗೆ ಕೌಶಲ್ಯ ತರಬೇತಿಯ ಅವಶ್ಯಕತೆಯಿರುತ್ತದೆ. ಪ್ರತಿ ರಾಜ್ಯದಲ್ಲೂ ಇಂತಹ ಹಲವು ಕಾರ್ಯಕ್ರಮಗಳಿವೆಯಾದರೂ ಅವುಗಳಲ್ಲಿ ಕೌಶಲ್ಯ ತರಬೇತಿ, ಪುನರ್‌ಕೌಶಲ್ಯ ತರಬೇತಿ ಮತ್ತು ಹೆಚ್ಚಿನ ಕೌಶಲ್ಯ ತರಬೇತಿ ಇವುಗಳನ್ನು ವಿಂಗಡಿಸಿಕೊಂಡಿದ್ದರೆ ಮಾತ್ರ ಅಂದುಕೊಂಡಂತೆ ಗುರಿ ಸಾಧಿಸಬಹುದಾಗಿದೆ. ಈ ತರಬೇತಿಗಳ ಅವಶ್ಯಕತೆಯಿರುವ ಕೆಲಸಗಾರರನ್ನು ಗುರುತಿಸುವುದೊಂದು ಸವಾಲು. ಕೌಶಲ್ಯ ತರಬೇತಿಯ ವಿಶ್ಲೇಷಣೆ, ಈ ತರಬೇತಿಗೆ ಅವಶ್ಯಕವಾದ ವಸ್ತುವಿಷಯಗಳ ಅಭಿವೃದ್ಧಿ ಮತ್ತು ಸೂಕ್ತ ರೀತಿಯಲ್ಲಿ ತರಬೇತಿ ವ್ಯವಸ್ಥೆ ಮಾಡುವುದು ಅತ್ಯಗತ್ಯ. ಅದೇ ರೀತಿ ಈ ತರಬೇತಿಗಳ ಕಟುವಿಶ್ಲೇಷಣೆ ವಿಮರ್ಶೆಗಳು ಕೂಡ ಆಗಬೇಕು. ಅದರಿಂದ ಇದಕ್ಕಾಗಿ ವೆಚ್ಚಮಾಡಲಾಗುವ ಹಣ, ತರಬೇತಿಯ ಪ್ರಯೋಜನಗಳು ಅಂದರೆ ಕೆಲಸ, ವೇತನ, ಉತ್ತಮ ಗುಣಮಟ್ಟದ ಜೀವನ ಹಾಗೂ ಫಲಿತಾಂಶ ಇವುಗಳ ಬಗೆಗಿನ ಸ್ಪಷ್ಟ ಚಿತ್ರಣ ದೊರಕುತ್ತದೆ. ಅದೇ ರೀತಿ ಕೆಲಸಗಾರರಿಗೆ ತಮ್ಮ ಕೆಲಸದ ಬಗ್ಗೆ ಇರುವ ಅಂದರೆ ಕೆಲಸದ ಅರಿವು, ಆ ಕೆಲಸದಲ್ಲಿ ಅವರಿಗೆ ಅನುಭವವಿದ್ದೂ ಯಾವುದೇ ಪ್ರಮಾಣಪತ್ರಗಳಿಲ್ಲದಿರುವುದನ್ನೂ ಗುರುತಿಸಬೇಕು. ಅದರಲ್ಲೂ ಕುಶಲಕರ್ಮಿಗಳ ಕುಟುಂಬಗಳಲ್ಲಿ ಈ ರೀತಿಯ ಕರಕುಶಲ/ ಕೈಕೆಲಸಗಳ ಅರಿವು ತಲೆಮಾರಿನಿಂದ ತಲೆಮಾರಿಗೆ ಕುಟುಂಬದಲ್ಲೇ ವರ್ಗಾವಣೆ ಆಗಿರುತ್ತಿರುತ್ತದೆ. ಇಂತಹವನ್ನೂ ಗಮನಿಸಬೇಕು. ಇದು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವುದಲ್ಲದೆ, ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ಸೇರಿಸುವ ಮೂಲಕ ಅವರ ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಬಹುದು. ಭಾರತದಲ್ಲಿ ಹೀಗೆ ವಂಶಪಾರಂಪರ್ಯವಾಗಿ ಕುಶಲಕಲೆಗಳನ್ನು ಕಲಿತವರೊಂದಿಗೆ ಇನ್ನೂ ಹೆಚ್ಚಿನ ತರಬೇತಿ ಬೇಕಾಗಿರುವ 298.25 ಮಿಲಿಯನ್ ಕೆಲಸಗಾರರಿದ್ದಾರೆ. ಇವರೆಲ್ಲರನ್ನೂ ಒಟ್ಟುಗೂಡಿಸಬೇಕಾಗಿದೆ. ಕೌಶಲ್ಯ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಯೋಜನೆಯು ಇಂತಹ ಕುಶಲಕರ್ಮಿಗಳನ್ನು ಗುರುತಿಸುವ ನಿಟ್ಟಿನಲ್ಲಿ ಶ್ರಮವಹಿಸುತ್ತಿದೆ. ಆದರೆ ಈ ಬಗೆಯ ಕುಶಲಕರ್ಮಿಗಳನ್ನು ಗುರುತಿಸಲು ಯಾವುದೇ ಒಂದು ಬಗೆಯ ಸಿದ್ಧಮಾದರಿಯನ್ನು ಅನುಸರಿಸಲು ಸಾಧ್ಯವಿಲ್ಲ.

**5. ಶಾಲೆಯಿಂದ ಕೆಲಸಕ್ಕೆ–ಸ್ಥಿತ್ಯಂತರದ ಸಮೀಕ್ಷೆ**

ಯುವಸಮೂಹಕ್ಕೆ (15 –29 ವರ್ಷ) ಕಾರ್ಮಿಕ ಮಾರುಕಟ್ಟೆಯ ಗುಣಮಟ್ಟ ಹಾಗೂ ಬೇಡಿಕೆ ಕುರಿತಾದ ಸೂಕ್ತ ಮಾಹಿತಿಗಳನ್ನು ನೀಡಬೇಕು. ಕೆಲಸಗಾರರ ಸಮೀಕ್ಷೆಯು ಉದ್ಯೋಗಸ್ಥರು, ನಿರುದ್ಯೋಗಿಗಳು, ದುಡಿಯುವ ವಲಯದಿಂದ ದೂರ ಉಳಿದವರು – ಇವರ ಬಗ್ಗೆ ಮಾಹಿತಿ ಒದಗಿಸುತ್ತದೆ. ಇದು ನಿರುದ್ಯೋಗದ ಮಟ್ಟ, ಉದ್ಯೋಗಸ್ಥರ ಸ್ಥಿತಿಗತಿ, ವಲಯಗಳಲ್ಲಿನ ಉದ್ಯೋಗದ ಸಂಖ್ಯೆ ಉಳಿದವುಗಳ ಚಿತ್ರಣವನ್ನು ಕಟ್ಟಿಕೊಡುತ್ತದೆ. ಆದರೆ ಇವು ಕೆಲಸದ ಬಗೆಗಿನ ತೃಪ್ತಿ, ಶಾಲೆಯಿಂದ ಕೆಲಸಕ್ಕೆ ಸ್ಥಿತ್ಯಂತರಗೊಳ್ಳುವುದರ ಅನುಕೂಲ ಅನನುಕೂಲಗಳ ಬಗೆಗೆ ಏನನ್ನೂ ಹೇಳುವುದಿಲ್ಲ. ಶಾಲೆಯಿಂದ ಕೆಲಸಕ್ಕೆ ಸ್ಥಿತ್ಯಂತರಗೊಳ್ಳುವ ಬಗೆಗಿನ ಸಮೀಕ್ಷೆಗಳು ಸಕಾಲಿಕ ಮಾಹಿತಿಯನ್ನು ಕಾರ್ಮಿಕಮಾರುಕಟ್ಟೆಯ ಕುರಿತಾಗಿ ನೀಡುತ್ತದೆ. ಇದು ಯುವಕ, ಯುವತಿಯರು ಎದುರಿಸುವಂತಹ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುವಂತಹ ರಾಷ್ಟ್ರೀಯ ಉದ್ಯೋಗ ಕಾರ್ಯಕ್ರಮಗಳನ್ನು ರೂಪಿಸಲು ನೆರವಾಗುತ್ತದೆ. ಸೂಕ್ಷ್ಮ ಪರಿಸ್ಥಿತಿಯಲ್ಲಿರುವಂತಹ ಗುಂಪುಗಳಿಗೆ ನೆರವಾಗುವಂತಹ ಆದೇಶಗಳನ್ನು, ನೀತಿಗಳನ್ನು ರೂಪಿಸಲು ಅಧಿಕಾರಿ ವರ್ಗದವರಿಗೆ ಇದರಿಂದ ನೆರವಾಗುತ್ತದೆ. ಈ ಸಮೀಕ್ಷೆಗಳು ರಾಷ್ಟ್ರೀಯ ಉದ್ಯೋಗ ಸೇವೆಯು ಯುವಸಮೂಹದ ಸ್ಥಿತ್ಯಂತರಗಳು ಹೆಚ್ಚಿನ ತೃಪ್ತಿದಾಯಕ ಹಾಗೂ ಸುರಕ್ಷಿತ ಉದ್ಯೋಗಗಳೆಡೆಗೆ ಚಲಿಸುವಂತೆ ಮಾಡುವಲ್ಲಿ ನೆರವಾಗುತ್ತದೆ. ಇದರೊಂದಿಗೆ ಕಾರ್ಮಿಕ ಮಾರುಕಟ್ಟೆಯಲ್ಲಿನ ವೈವಿಧ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ತರಬೇತಿ ಪಡೆಯಲು ಅನುಕೂಲವಿಲ್ಲದ ಕಾರ್ಮಿಕರಿಗೆ ಸರ್ಕಾರವು ತರಬೇತಿ ನೀಡಲು ಉತ್ತೇಜನ ನೀಡಬಹುದು. ಇದರೊಂದಿಗೆ ಕೈಗಾರಿಕಾ ಕ್ರಾಂತಿಯೊಡನೆ ಉಂಟಾಗುವ ಭವಿಷ್ಯದ ಉದ್ಯೋಗದಲ್ಲಿನ ಸವಾಲುಗಳನ್ನು ಎದುರಿಸಲು ಸಿದ್ಧತೆಮಾಡಿಕೊಳ್ಳಬಹುದು.

ಅಂತಿಮವಾಗಿ ಶರವೇಗದ ಆರ್ಥಿಕ ಬದಲಾವಣೆಗಳು ಮತ್ತು ಭವಿಷ್ಯದ ಉದ್ಯೋಗದ ಸನ್ನಿವೇಶದಲ್ಲಿ ಯುವಸಮೂಹಕ್ಕೆ ತಮ್ಮ ಉದ್ಯೋಗಾರ್ಹತೆಯನ್ನು ಉತ್ತಮ ಬದುಕಿಗೆ ರೂಪಿಸಿಕೊಳ್ಳಲು ಅವಕಾಶಗಳು ಹಾಗೂ ಅಷ್ಟೇ ಪ್ರಮಾಣದ ಸವಾಲುಗಳು ಎದುರಾಗಲಿವೆ. ಉತ್ತಮ ಉದ್ಯೋಗಾರ್ಹತೆಯು ಸುರಕ್ಷಿತ ಉದ್ಯೋಗ ಹಾಗೂ ಉದ್ಯೋಗದಲ್ಲಿ ಪ್ರಗತಿಗೆ ನೆರವಾಗಲಿದೆ. ಇದು ಆರ್ಥಿಕ ಪ್ರಗತಿಗೆ ಕೊಡುಗೆಯನ್ನು ನೀಡುತ್ತದೆ. ಪ್ರತಿ ರಾಜ್ಯದಲ್ಲೂ ಸೂಕ್ತ ಕಾರ್ಯಕ್ರಮಗಳು ಹಾಗೂ ಕೌಶಲ್ಯ ಅಭಿವೃದ್ಧಿ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಯುವಸಮೂಹವನ್ನು ಬದಲಾವಣೆಯ ಹರಿಕಾರರನ್ನಾಗಿಸಿ ಅಂದುಕೊಂಡ ಗುರಿಯನ್ನು ತಲುಪಬಹುದಾಗಿದೆ. ❑

# ಉದ್ಯೋಗದಾತರ ಸೃಷ್ಟಿ

* ಸೌರಭ್ ಸನ್ಯಾಲ್
** ರಂಜೀತ್ ಮೆಹತಾ




ಆರ್ಥಿಕ ವ್ಯವಸ್ಥೆಗೆ ಹೊಸ ಸ್ಪರ್ಧಾತ್ಮಕ ಆಯಾಮ ತರುವಲ್ಲಿ ನವೋದ್ಯಮ ಕಂಪನಿಗಳು ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಕ್ರಿಯಾಶೀಲವಾಗಿವೆ. ಇದರ ಫಲ ಸರಣಿ ಪ್ರತಿಕ್ರಿಯೆ ನಡೆಯುತ್ತದೆ. ಒಮ್ಮೆ ಉದ್ಯಮ ಸ್ಥಾಪನೆಯಾದರೆ, ಇದನ್ನು ಕೈಗಾರಿಕೀಕರಣಗೊಳಿಸುವ ಪ್ರಕ್ರಿಯೆಗೆ ಚಾಲನೆ ಸಿಗುತ್ತದೆ.

ಭಾರತದಲ್ಲಿ ವಾರ್ಷಿಕವಾಗಿ ಒಂದು ಕೋಟಿ ಉದ್ಯೋಗಾವಕಾಶ ಕಲ್ಪಿಸುವ ಅವಶ್ಯಕತೆ ಇದ್ದು, ದೊಡ್ಡ ಉದ್ಯಮಗಳ ಬದಲಾಗಿ ನವೋದ್ಯಮಗಳೇ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸುತ್ತಿವೆ ಎಂಬುದನ್ನು ಜಾಗತಿಕ ದತ್ತಾಂಶಗಳು ತೋರಿಸಿ ಕೊಟ್ಟಿವೆ. ಇದರ ಜೊತೆಗೆ ನವೋದ್ಯಮಗಳು ಆವಿಷ್ಕಾರಗಳ ಕೇಂದ್ರ ಬಿಂದುಗಳಾಗಿ ಮಾರ್ಪಟ್ಟಿದ್ದು, ದೇಶದಲ್ಲಿ ಉದ್ಯೋಗಾವಕಾಶ ಸೃಷ್ಟಿಯ ಹೆಚ್ಚಳದಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 'ಸ್ಟಾರ್ಟ್ ಅಪ್ ಇಂಡಿಯಾ' ಯೋಜನೆಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ಔಪಚಾರಿಕವಾಗಿ 2016ರ ಜನವರಿ 16ರಂದು ಚಾಲನೆ ನೀಡಿದ್ದರು.

ನವೋದ್ಯಮ ಬೆಳವಣಿಗೆಗೆ ಪೂರಕವಾದ ಸನ್ನಿವೇಶ ಮತ್ತು ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಮೂಲಕ ನವೋದ್ಯಮಗಳನ್ನು ಉತ್ತೇಜಿಸುವ ಉದ್ದೇಶ ಹೊಂದಲಾಗಿದೆ. ಉದ್ಯೋಗಾವಕಾಶದ ಅನ್ವೇಷಕರ ಹೊರತಾಗಿ ಉದ್ಯೋಗಾವಕಾಶವನ್ನು ಒದಗಿಸುವ ದೇಶವನ್ನಾಗಿ ಭಾರತವನ್ನು ಪರಿವರ್ತಿಸುವ ಗುರಿ ಇದರ ಹಿಂದಿದೆ. ಪ್ರಧಾನ ಮಂತ್ರಿಯವರು ಮಾಡಿರುವ 'ಸ್ಟಾರ್ಟ್ ಅಪ್ ಇಂಡಿಯಾ' ಘೋಷಣೆಯು ಈಗಾಗಲೇ ಉದ್ಯಮ ವರ್ಗದಲ್ಲಿ ಸಕಾರಾತ್ಮಕ ಅಭಿಪ್ರಾಯವನ್ನು ಮೂಡಿಸಿದೆ. ಇದು ಭಾರತವು ಜಾಗತಿಕವಾಗಿ ಮೂರನೇ ಅತಿ ದೊಡ್ಡ ನವೋದ್ಯಮ ದೇಶವಾಗಿ ಹೊರ ಹೊಮ್ಮುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದು, ಇದು ಉದ್ಯಮಿಗಳಲ್ಲಿ ಉತ್ಸಾಹ ಮೂಡಿಸಿದೆ. ಆವಿಷ್ಕಾರದ ಸಂಸ್ಕೃತಿಯನ್ನು ಉತ್ತೇಜಿಸುವುದು ದೀರ್ಘಾವಧಿಯಲ್ಲಿ ದೇಶಕ್ಕೆ ಮಹತ್ವದ್ದಾಗಿದೆ. ಇದು, ದೇಶವನ್ನು ಆವಿಷ್ಕಾರ, ವಿನ್ಯಾಸ ಮತ್ತು ನವೋದ್ಯಮದ ಕೇಂದ್ರವನ್ನಾಗಿಸುವ ಭಾರತ ಸರ್ಕಾರದ ಗುರಿಯನ್ನು ಪುನರುಚ್ಚರಿಸುವ ನಿಟ್ಟಿನಲ್ಲಿ ಮಹತ್ವದ ಕ್ರಮವಾಗಿದೆ.


ಒಂದು ನವೋದ್ಯಮ ಕಂಪನಿ ಅಥವಾ ನವೋದ್ಯಮದಲ್ಲಿ ಈಗಷ್ಟೇ ತೊಡಗಿಸಿಕೊಂಡಿರುವ ಸಂಸ್ಥೆಯೆಂದರೆ ಇದು ಅಭಿವೃದ್ಧಿಯ ಆರಂಭ ಮಾತ್ರ. ಸಾಮಾನ್ಯವಾಗಿ ನವೋದ್ಯಮಗಳು ಚಿಕ್ಕದಾಗಿರುತ್ತವೆ ಮತ್ತು ಆರಂಭಿಕವಾಗಿ ಆರ್ಥಿಕವಾಗಿ ಕೆಲವೊಬ್ಬ ಅಥವಾ ಏಕ ವ್ಯಕ್ತಿಯಿಂದ ಕಾರ್ಯೋನ್ಮುಖವಾಗುತ್ತವೆ. ಈಗಾಗಲೇ ಉತ್ಪನ್ನ ಅಥವಾ ಸೇವೆಗಳನ್ನು ಒದಗಿಸುತ್ತಿರುವ ಸಂಸ್ಥೆಗಳ ರೀತಿಗೆ ಹೊರತಾದ ರೀತಿಯಲ್ಲಿ ಅದನ್ನು ಒದಗಿಸುತ್ತವೆ. ಈ ಮೂಲಕ ಮಾರುಕಟ್ಟೆಯಲ್ಲಿ ಲಭ್ಯವಿರದ ಸೇವೆಯನ್ನು ಅವು ಒದಗಿಸುತ್ತವೆ. ಆರಂಭಿಕ ಹಂತದಲ್ಲಿ, ನವೋದ್ಯಮಗಳ ವೆಚ್ಚ, ಆದಾಯಕ್ಕಿಂತ ಹೆಚ್ಚಾಗಬಹುದು. ಇದಕ್ಕೆ ಕೆಲಸದ ಸುಧಾರಣೆ, ಸಂಶೋಧನೆ, ಮಾರುಕಟ್ಟೆ ಮೊದಲಾದ ಅಂಶಗಳು ಕಾರಣವಾಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ಆರ್ಥಿಕ ನೆರವು ಬೇಕಾಗುತ್ತದೆ. ಸಾಮಾನ್ಯವಾಗಿ ನವೋದ್ಯಮಗಳು, ಸಾಂಪ್ರದಾಯಿಕ ಚಿಕ್ಕ ಉದ್ಯಮ ಸಾಲ ನೀಡುವ ಬ್ಯಾಂಕುಗಳು ಅಥವಾ ಇತರ ಸಾಲ ನೀಡುವ ಹಣಕಾಸು ಸಂಸ್ಥೆಗಳು, ಸ್ಥಳೀಯ ಬ್ಯಾಂಕುಗಳ ಸರ್ಕಾರಿ ಪ್ರಾಯೋಜಿತ ಚಿಕ್ಕ ಉದ್ಯಮ ಆಡಳಿತ ಸಾಲ ಅಥವಾ ಲಾಭೇತರ ಸಂಸ್ಥೆಗಳ ಅನುದಾನ

* ಮಹಾ ಪ್ರಧಾನ ಕಾರ್ಯದರ್ಶಿ. ** ನಿರ್ದೇಶಕರು, ಪಿಎಚ್‌ಡಿ ವಾಣಿಜ್ಯೋದ್ಯಮ ಸಂಘ.
E-mail : * saurabh.sanyal@phdcci.in ** ranjeetmehta@gmail.com

ಅಥವಾ ರಾಜ್ಯ ಸರ್ಕಾರಗಳ ಅನುದಾನವನ್ನು ಅವಲಂಬಿಸಿರುತ್ತವೆ. ನವೋದ್ಯಮಗಳಲ್ಲಿ ಎರಡು ಪ್ರಮುಖ ವಿಧಗಳಿವೆ.

ಮೊದಲನೇ ವಿಧವೆಂದರೆ, ಹೊಸದಾಗಿ ಆರಂಭವಾಗುವುದು. ಅಂದರೆ ಇದುವರೆಗೆ ಯಾರೂ ಕಂಡು ಕೇಳರಿಯದ ಯೋಚನೆಯನ್ನು ಕಾರ್ಯರೂಪಕ್ಕೆ ಇಳಿಸುವುದು. ಇಂತಹ ನವೋದ್ಯಮವನ್ನು ಹುಟ್ಟು ಹಾಕುವುದು ಕಷ್ಟ ಎಂಬುದು ನಿಜವಾದರೂ ಒಮ್ಮೆ ಪ್ರಾರಂಭಿಸಿದ ಬಳಿಕ ಅಸಾಮಾನ್ಯ ಪ್ರಗತಿಯನ್ನು ಇದು ಕಾಣುತ್ತದೆ.

ಇನ್ನೊಂದು ವಿಧದ ನವೋದ್ಯಮಗಳೆಂದರೆ ಪ್ರಾಥಮಿಕವಾಗಿ ಬದಲಾವಣೆ ತರಲು ಬಯಸದವರು ಆರಂಭಿಸುವಂತಹದ್ದು. ನಮ್ಮ ದೇಶದಲ್ಲಿ ಉದ್ಯಮಶೀಲತೆ ಮತ್ತು ನವೋದ್ಯಮಗಳು ತೀರಾ ಇತ್ತೀಚಿನ ವಿದ್ಯಮಾನ. ನವೋದ್ಯಮ ಆರಂಭಿಸುವುದು ತುಂಬಾ ಕಷ್ಟ ಹಾಗೂ ಪ್ರತಿ ದೇಶವೂ ಇದರಲ್ಲಿ ಯಶಸ್ಸಿಗಿಂತ ಹೆಚ್ಚು ವೈಫಲ್ಯವನ್ನು ಕಂಡಿದೆ. ಆದ್ದರಿಂದ ಉದ್ಯಮಿಯೊಬ್ಬ ವೈಫಲ್ಯ ಮತ್ತು ಅನಿರೀಕ್ಷಿತ ಅಡೆತಡೆಗಳನ್ನು ಎದುರಿಸಲು ಸಿದ್ಧನಾಗಿರಬೇಕಾಗುವುದು ಅವಶ್ಯಕ. ಉದ್ಯಮಶೀಲತೆ ಎನ್ನುವುದು ಯಾವಾಗಲೂ ಸಂಭ್ರಮಗಳಿಂದ ಬೆಳೆಯುತ್ತದೆ ಮತ್ತು ಉದ್ಯಮದ ವೈಫಲ್ಯವನ್ನು ವಿಶ್ಲೇಷಿಸುವಲ್ಲಿ ಸಮಾಜವು ವಿಫಲವಾಗುವ ಮೂಲಕ ಸೃಜನಶೀಲತೆ ಮತ್ತು ವಿನೂತನ ಆವಿಷ್ಕಾರಗಳು ನಿಗ್ರಹಿಸಲ್ಪಡುತ್ತವೆ. ಒಂದು ದೃಷ್ಟಿಯಲ್ಲಿ ಒಂದು ನವೋದ್ಯಮ ವಿಫಲವಾಗುವುದು ಉತ್ತಮ, ಯಾಕೆಂದರೆ ಇಂತಹ ವೈಫಲ್ಯಗಳು ಉದ್ಯಮಿಗೆ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ಬಗ್ಗೆ ಪಾಠ ಕಲಿಸುತ್ತದೆ. ಒಂದು ನವೋದ್ಯಮ ಆರಂಭಿಸಲು ನಿಮಗೆ ಸಹ ಸಂಸ್ಥಾಪಕರು ಬೇಕಾಗಬಹುದು. ಆದರೆ, ಅದರ ಯಶಸ್ಸಿಗೆ ಉದ್ಯಮದ ಕುಶಾಗ್ರಮತಿ ಅತ್ಯಾವಶ್ಯಕವೇನೂ ಅಲ್ಲ. ಅತ್ಯುತ್ತಮ ಯೋಚನೆಯನ್ನು ಹೊಂದಿರುವುದು ಮತ್ತು ಅದನ್ನು ಉದ್ಯಮದ ಯಶಸ್ಸಾಗಿ ಪರಿವರ್ತಿಸುವುದು ವಿಭಿನ್ನವಾದುದು. ನವೋದ್ಯಮಕ್ಕೆ ಈಗಾಗಲೇ ಅಂತಹ ಉದ್ಯಮ ಸ್ಥಾಪಿಸಿ, ಇಡೀ ಪ್ರಕ್ರಿಯೆಯ ಅನುಭವ ಅಥವಾ ಉದ್ಯಮದ ಅನುಭವ ಪಡೆದವರ ಮಾರ್ಗದರ್ಶನ ಮಹತ್ವದ್ದಾಗಿರುತ್ತದೆ. ಒಬ್ಬ ಅತ್ಯುತ್ತಮ ಗುರು ಮೌಲ್ಯಯುತ




ಸಲಹೆಗಳನ್ನು ನೀಡುವ ಮೂಲಕ ವೈಫಲ್ಯವನ್ನು ಯಶಸ್ಸಿನಿಂದ ಪ್ರತ್ಯೇಕಿಸಬಲ್ಲರು. ಆದಾಗ್ಯೂ, ದೇಶದಲ್ಲಿ ನವೋದ್ಯಮ ಕುರಿತು ಮಾರ್ಗದರ್ಶನ ನೀಡುವ ಕುರಿತಂತೆ ಔಪಚಾರಿಕ ವ್ಯವಸ್ಥೆಯೊಂದಿಲ್ಲ.

ಪ್ರತಿಯೊಬ್ಬ ಮಾರ್ಗದರ್ಶಕರು ಕೂಡ ಆಗಿನ ಅಗತ್ಯದ ಆಧಾರದಲ್ಲಿ ರೂಪುಗೊಳ್ಳುತ್ತಾರೆ. ಒಂದು ನವೋದ್ಯಮ ಹಣಕಾಸು ಸಂಪನ್ಮೂಲ ಸಂಗ್ರಹಿಸಿ, ಹೂಡಿಕೆದಾರರನ್ನು ಲೆಕ್ಕ ಹಾಕುತ್ತದೆ. ಅವರನ್ನೇ ಒಂದು ವಿಧದಲ್ಲಿ ಮಾರ್ಗದರ್ಶಕರೆಂದು ಹೇಳಬಹುದು. ಆದರೆ ಪ್ರಾಮಾಣಿಕ, ತಾರತಮ್ಯ ಧೋರಣೆಯಿಲ್ಲದ, ಉತ್ತಮ ಉದ್ಯಮ ಮಾರ್ಗದರ್ಶಕರು ಇಲ್ಲವೇ ಇಲ್ಲವೆಂದು ಹೇಳುವಷ್ಟು ಕಡಿಮೆಯಿದ್ದಾರೆ. ಆದ್ದರಿಂದ ನವೋದ್ಯಮಕ್ಕೆ ಮಾರ್ಗದರ್ಶಕರನ್ನು ಕಂಡುಕೊಳ್ಳುವುದು ಅತ್ಯಂತ ದೊಡ್ಡ ಸಾಹಸವೇ ಸರಿ.

**ಭಾರತದಲ್ಲಿ ನವೋದ್ಯಮದ ಆರ್ಥಿಕ ನಿಧಿ ಸಂಗ್ರಹಕ್ಕಿರುವ ಸವಾಲುಗಳು**

ಸ್ಟಾರ್ಟ್ ಅಪ್ ಇಂಡಿಯಾ ಘೋಷಣೆಯಡಿ ತಮ್ಮ ಉದ್ಯಮವನ್ನು ಗುರುತಿಸುವ ಸರ್ಕಾರದ ಎಲ್ಲಾ ಪ್ರಯತ್ನಗಳನ್ನು ಸ್ವಾಗತಿಸುವುದರಲ್ಲಿ ಮೊದಲ ಪೀಳಿಗೆಯ ಉದ್ಯಮಶೀಲತೆಯು ಮುಂದಿದೆ. ಆದರೆ ಹಣಕಾಸು ಸಂಪನ್ಮೂಲ ಕ್ರೋಢೀಕರಣ, ಹಕ್ಕು ಸ್ವಾಮ್ಯ ಮತ್ತು ಬೌದ್ಧಿಕ ಹಕ್ಕು ಸ್ವಾಮ್ಯ ಸೃಷ್ಟಿಯ ಕುರಿತ ಪ್ರಶ್ನೆಗಳು ಹಾಗೆಯೇ ಉಳಿದಿವೆ. ಇದೇ ರೀತಿ, ಹಕ್ಕು ಸ್ವಾಮ್ಯ ಪಡೆಯುವ ದೀರ್ಘ ಕಾಲದ ಪ್ರಕ್ರಿಯೆ, ಸಂಶೋಧನೆ ಮತ್ತು ಅಭಿವೃದ್ಧಿ ಕುರಿತಂತೆ ದೀರ್ಘಾವಧಿ ಪ್ರಕ್ರಿಯೆ ಮತ್ತೊಂದು ಸಮಸ್ಯೆಯಾಗಿದೆ. ಬಹುತೇಕ ನವೋದ್ಯಮಗಳ ಪ್ರಕಾರ, ಬೇರೆ ದೇಶಗಳಿಗೆ ಆದ್ಯತೆ ನೀಡಲು ಇದುವೇ ಪ್ರಮುಖ ಕಾರಣವಾಗಿದೆ. ಸರ್ಕಾರದ ಮಾಹಿತಿ ದತ್ತಾಂಶಗಳ ಪ್ರಕಾರ 2,46,495 ಹಕ್ಕು ಸ್ವಾಮ್ಯ ಪ್ರಕರಣಗಳು ಮತ್ತು 5,32,682 ಟ್ರೇಡ್ ಮಾರ್ಕ್ ಪ್ರಕರಣಗಳ ಅರ್ಜಿಗಳು 2015ರ ನವೆಂಬರ್ 1 ರ ಅಂಕಿ ಅಂಶಗಳ ಪ್ರಕಾರ ಸರ್ಕಾರದ ಮುಂದೆ ಬಾಕಿ ಇದ್ದವು.

ಪ್ರಸಕ್ತ ನವೋದ್ಯಮಕ್ಕೆ ಶೇ. 90ರಷ್ಟು ಹೂಡಿಕೆಯು ವಿದೇಶದಿಂದ ಹರಿದು ಬರುತ್ತಿದ್ದು, ದೇಶೀಯ ಹೂಡಿಕೆದಾರರು ಈ ಕುರಿತ ತಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳುವ ಅವಶ್ಯಕತೆ ಇದೆ. ಗ್ರಾಂಟ್ ಥ್ರೋನ್ಟಂಟ್‌ನ ಇತ್ತೀಚಿನ ಸಮೀಕ್ಷೆಯು, 2015ರಲ್ಲಿ 600ಕ್ಕೂ ಹೆಚ್ಚು ಕಂಪನಿಗಳು 2 ಶತಕೋಟಿ ಡಾಲರ್ ನಿಧಿಯನ್ನು ಪಿಇ ಮತ್ತು ವಿಸಿ ನಿಧಿಯ ಮೂಲಕ ಪಡೆದುಕೊಂಡಿವೆ ಎಂಬುದು ಇಲ್ಲಿ ಗಮನಾರ್ಹ. ಇತ್ತೀಚಿನ ಅಧ್ಯಯನದ ಪ್ರಕಾರ, ಶೇ. 94ರಷ್ಟು ಉದ್ಯಮಗಳು ಮೊದಲ ವರ್ಷದ ಕಾರ್ಯಾರಂಭದ ಬಳಿಕ ವೈಫಲ್ಯ ಕಂಡಿವೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಹಣಕಾಸು ಸಂಪನ್ಮೂಲದ ಕೊರತೆ. ಯಾವುದೇ ಉದ್ಯಮವಿರಲಿ ಅದಕ್ಕೆ ಹಣಕಾಸು ನೆರವು ಪ್ರಮುಖವಾಗಿರುತ್ತದೆ, ಅದುವೇ ಜೀವನಾಡಿಯಾಗಿರುತ್ತದೆ. ಯಾವುದೇ ಆದಾಯ ತರುವ ಉದ್ಯಮವಾಗಿರಲಿ, ಅದಕ್ಕೆ ತನ್ನ ಯಶೋಗಾಥೆಯನ್ನು ಮುಂದುವರಿಸಲು ಬಂಡವಾಳ ರೂಪದಲ್ಲಿ ಹಣಕಾಸು ಸಂಪನ್ಮೂಲ ಎಂಬ ತೈಲ ಆವಶ್ಯಕವಾಗಿರುತ್ತದೆ. ಇದರಿಂದಾಗಿಯೇ ಪ್ರತಿಯೊಬ್ಬ ಉದ್ಯಮಿಯೂ, ತಮ್ಮನ್ನು ತಾವೇ ಕೇಳಿಕೊಳ್ಳುವ ಪ್ರಶ್ನೆಯೆಂದರೆ, ಯಾವ ರೀತಿ ನನ್ನ ನವೋದ್ಯಮಕ್ಕೆ ಹಣಕಾಸು ಸಂಪನ್ಮೂಲ ಒದಗಿಸಿಕೊಳ್ಳಬೇಕು? ಎಂಬುದಾಗಿರುತ್ತದೆ. ಆದರೆ ನವೋದ್ಯಮ ಆರಂಭಿಸಲು ಮಾರುಕಟ್ಟೆಯಲ್ಲಿ ಸಾಕಷ್ಟು ಹಣಕಾಸು ಸಂಪನ್ಮೂಲಗಳ ಅವಕಾಶವಿದೆ. ನವೋದ್ಯಮ ಆರಂಭಕ್ಕೆ ಹಣಕಾಸು ಸಂಪನ್ಮೂಲ ಸಂಗ್ರಹಿಸುವ ನಿಟ್ಟಿನಲ್ಲಿ ಇಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

**1. ಪ್ರಧಾನ ಮಂತ್ರಿ ಮೈಕ್ರೊ ಯೂನಿಟ್ಸ್ ಡೆವಲಪ್‌ಮೆಂಟ್ ಆಂಡ್ ರಿಫೈನಾನ್ಸ್ ಏಜೆನ್ಸಿ ಲಿಮಿಟೆಡ್ (ಮುದ್ರಾ)** – 20,000 ಕೋಟಿ ರೂ. ಮೂಲನಿಧಿ ಹೊಂದಿರುವ ಯೋಜನೆಯಡಿ 10 ಲಕ್ಷ ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆದಾರರಿಗೆ ನೆರವು ಕಲ್ಪಿಸುವ ಗುರಿ ಹೊಂದಲಾಗಿದೆ. ನೀವು ನಿಮ್ಮ ಉದ್ಯಮದ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಒಮ್ಮೆ ಅದಕ್ಕೆ ಅನುಮೋದನೆ ಸಿಕ್ಕಿದರೆ, ಆಗ ಸಾಲಕ್ಕೆ ತಕ್ಷಣವೇ




ಅನುಮೋದನೆ ಸಿಗುತ್ತದೆ. ಕ್ರೆಡಿಟ್ ಕಾರ್ಡ್ ರೀತಿಯಲ್ಲೇ ಕೆಲಸ ಮಾಡುವ ಮುದ್ರಾ ಕಾರ್ಡ್ ದೊರಕುತ್ತದೆ, ತಕ್ಷಣವೇ ಕಚ್ಚಾ ಸಾಮಗ್ರಿಗಳನ್ನು ಖರೀದಿಸಬಹುದು ಮತ್ತು ಇತರ ವೆಚ್ಚಗಳನ್ನು ಇದರ ಮೂಲಕವೇ ಭರಿಸಬಹುದು. ಶಿಶು, ಕಿಶೋರ್ ಮತ್ತು ತರುಣ್ ವಿಭಾಗದಲ್ಲಿ ಉದ್ದಿಮೆಗಳನ್ನು ವರ್ಗೀಕರಿಸಲಾಗಿದೆ.

**2. ಕನಿಷ್ಠ ಬಂಡವಾಳ ಅಥವಾ ಸ್ವಂತ ಹೂಡಿಕೆ** – ಸ್ವಯಂ ಹೂಡಿಕೆಯನ್ನು ಕನಿಷ್ಠ ಬಂಡವಾಳ ಹೂಡಿಕೆ ಎಂದು ಕೂಡ ಕರೆಯುತ್ತಾರೆ. ಇದು ನವೋದ್ಯಮ ಸಂಪನ್ಮೂಲ ಕ್ರೋಢೀಕರಣದಲ್ಲಿ ಅದರಲ್ಲೂ ಮುಖ್ಯವಾಗಿ ಈಗಷ್ಟೇ ಉದ್ಯಮ ಆರಂಭಿಸುವವರಿಗೆ ಪರಿಣಾಮಕಾರಿ ದಾರಿ. ಯಾಕೆಂದರೆ, ಮೊದಲ ಬಾರಿಗೆ ಉದ್ಯಮಿಗಳಾಗುವವರು ಸಾಮಾನ್ಯವಾಗಿ ಯಶಸ್ಸು ಸಿಗಬಹುದಾದ ಯೋಜನೆಯನ್ನು ತೋರಿಸದ ವಿನಃ ಆರ್ಥಿಕ ನೆರವು ಪಡೆಯಲು ಕಷ್ಟವಾಗುತ್ತದೆ.

**3. ಸಮೂಹ ನಿಧಿ** – ಒಂದೇ ಕಾಲದಲ್ಲಿ, ಒಂದಕ್ಕಿಂತ ಹೆಚ್ಚು ವ್ಯಕ್ತಿಗಳಿಂದ, ಸಾಲ, ಮುಂಗಡ, ಕೊಡುಗೆ ಅಥವಾ ಹೂಡಿಕೆ ಪಡೆಯುವುದನ್ನು ಸಮೂಹ ನಿಧಿ ಅಥವಾ ಕ್ರೌಡ್ ಫಂಡಿಂಗ್ ಎಂದು ಹೇಳುತ್ತಾರೆ. ಇಲ್ಲಿ ನವೋದ್ಯಮ ಆರಂಭಿಸುವ ಉದ್ಯಮಿ ತನ್ನ ಪ್ರಾಜೆಕ್ಟ್‌ನ ಪೂರ್ಣ ವಿವರವನ್ನು ಸಮೂಹ ನಿಧಿ ವೇದಿಕೆಯ ಮುಂದಿಡುತ್ತಾರೆ. ಉದ್ಯಮದ ಗುರಿ, ಲಾಭ ಗಳಿಸುವ ಯೋಜನೆ, ಅವಶ್ಯಕವಾದ ಆರ್ಥಿಕ ಸಂಪನ್ಮೂಲ, ತನ್ನ ಅವಶ್ಯಕತೆ ಮತ್ತು ಅದಕ್ಕೆ ಕಾರಣಗಳು ಇತ್ಯಾದಿಗಳನ್ನು ಇದರಲ್ಲಿ ಪ್ರಸ್ತಾವಿಸಬೇಕಾಗುತ್ತದೆ. ಇದನ್ನು ಓದಿದವರು ತಮಗೆ ಒಪ್ಪಿತವಾದರೆ ಹಣಕಾಸು ನೆರವು ಒದಗಿಸುತ್ತಾರೆ. ಹೀಗೆ ನೀಡುವ ಹಣವನ್ನು ಉತ್ಪನ್ನವನ್ನು ತಯಾರಿಕೆಗೆ ಮೊದಲೇ ಕೊಳ್ಳುವ (ಪ್ರಿ ಬೈಯಿಂಗ್) ಕುರಿತಂತೆ ಆನ್‌ಲೈನ್‌ನಲ್ಲಿ ಭರವಸೆ ನೀಡುವುದು ಅಥವಾ ಕೊಡುಗೆಯ ಮೂಲಕ ನೀಡುತ್ತಾರೆ. ತಮಗೆ ಒಪ್ಪಿತವಾದ ಯಾವುದೇ ಉದ್ಯಮಕ್ಕೆ ಈ ರೀತಿ ಯಾರು ಬೇಕಾದರೂ ಆರ್ಥಿಕ ನೆರವು ಒದಗಿಸಬಹುದು. ಭಾರತದಲ್ಲಿರುವ ಕೆಲವು ಜನಪ್ರಿಯ ಸಮೂಹ ನಿಧಿ ಅಂತರ್ಜಾಲಗಳೆಂದರೆ Indeigogo, wishberry, ketto, fundlined ಇತ್ಯಾದಿ.

**4. ಏಂಜೆಲ್ ಹೂಡಿಕೆ** – ತಮ್ಮಲ್ಲಿ ಸಾಕಷ್ಟು ಹಣವಿದ್ದು, ಅದನ್ನು ಮುಂಬರುವ ನವೋದ್ಯಮಗಳಲ್ಲಿ ಹೂಡಿಕೆ ಮಾಡುವವರನ್ನು ಏಂಜೆಲ್ ಹೂಡಿಕೆದಾರರು ಎಂದು ಕರೆಯುತ್ತಾರೆ. ಇವರು ಹೂಡಿಕೆಗೆ ಮೊದಲು ತಮ್ಮದೇ ಆತ ಬಳಗದ (ನೆಟ್‌ವರ್ಕ್) ಗುಂಪುಗಳ ಜೊತೆಗೂಡಿ ಪ್ರಸ್ತಾವನೆಯನ್ನು ಪರಿಶೀಲಿಸುತ್ತಾರೆ. ಇವರು ಹೂಡಿಕೆಯ ಜೊತೆಗೆ ನವೋದ್ಯಮ ಉಸ್ತುವಾರಿ ನೋಡಿಕೊಳ್ಳುವಿಕೆ ಅಥವಾ ಸಲಹೆಗಾರರಾಗುವ ಪ್ರಸ್ತಾವನೆಯನ್ನು ಕೂಡ ಮುಂದಿಡಬಹುದು. ಇಂತಹ ಹೂಡಿಕೆದಾರ, ಗೂಗಲ್, ಯಾಹೂ ಮತ್ತು ಆಲಿಬಾಬಾ ಸೇರಿದಂತೆ ಹಲವಾರು ಪ್ರತಿಷ್ಠಿತ ಕಂಪನಿಗಳು ನವೋದ್ಯಮಗಳಿಗೆ ನೆರವು ನೀಡಿವೆ. ಹೂಡಿಕೆಯ ಈ ಪರ್ಯಾಯ ಕ್ರಮವು ಸಾಮಾನ್ಯವಾಗಿ ಕಂಪನಿಯ ಅಭ್ಯುದಯದ ಆರಂಭಿಕ ಹಂತದಲ್ಲಿ ನಡೆಯುತ್ತಿದೆ. ಸುಮಾರು ಶೇ. 30ರಷ್ಟು ಪಾಲು ಈಕ್ವಿಟಿಯನ್ನು ಹೂಡಿಕೆದಾರರು ನಿರೀಕ್ಷಿಸುತ್ತಾರೆ. ಹೆಚ್ಚಿನ ಲಾಭಕ್ಕಾಗಿ ಹೂಡಿಕೆಯಲ್ಲಿ ದೊಡ್ಡ ಸವಾಲನ್ನು ಎದುರಿಸಲು ಕೂಡ ಅವರು ಸಿದ್ಧರಿರುತ್ತಾರೆ.

**5. ವ್ಯವಸ್ಥಿತ ವೃತ್ತಿಪರ ಬಂಡವಾಳ (ವೆಂಚರ್ ಕ್ಯಾಪಿಟಲ್)** – ಈ ಹೂಡಿಕೆಯು ವೃತ್ತಿಪರವಾಗಿ ನಿರ್ವಹಿಸಲ್ಪಡುವ ನಿಧಿಯಾಗಿದೆ. ದೊಡ್ಡ ಪ್ರಮಾಣದ ಪ್ರಗತಿಯನ್ನು ಕಾಣುವ ಸಾಧ್ಯತೆಯಿರುವ ಕಂಪನಿಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಇವರು, ಸಾಮಾನ್ಯವಾಗಿ ಈಕ್ವಿಟಿಯ ಮೇಲೆ ನಡೆಯುತ್ತಿರುವ ಉದ್ಯಮದಲ್ಲಿ ಹೂಡಿಕೆ ಮಾಡುತ್ತಾರೆ ಮತ್ತು ಸಂಸ್ಥೆಯು ಶೇರು ಮಾರುಕಟ್ಟೆ ಪ್ರವೇಶಿಸಿದರೆ (ಐಪಿಓ) ಅಥವಾ ಬೇರೆಯವರಿಗೆ ಮಾರಾಟವಾದಾಗ ಹೂಡಿಕೆಯನ್ನು ಹಿಂದಕ್ಕೆ ಪಡೆದುಕೊಳ್ಳುತ್ತಾರೆ. ವೆಂಚರ್ ಕ್ಯಾಪಿಟಲ್‌ಗಳು ಅನುಭವ, ಪರಿಣಿತಿ, ಮಾರ್ಗದರ್ಶನವನ್ನು ನೀಡುವುದರ ಜೊತೆಗೆ ಸಂಸ್ಥೆಯು ಯಾವ ಹಾದಿಯಲ್ಲಿ ಸಾಗುತ್ತಿದೆ ಎಂಬುದರ ಬಗ್ಗೆ ಪರೀಕ್ಷಕರಂತೆ ಕೆಲಸ ಮಾಡುತ್ತವೆ. ಇದಲ್ಲದೆ ಉದ್ಯಮ ಉಳಿಯುವಿಕೆ ಮತ್ತು ಅದರ ವಿಸ್ತರಣೆ ಮತ್ತು ಗಾತ್ರದ ದೃಷ್ಟಿಕೋನದಿಂದಲೂ ಮೌಲ್ಯಮಾಪನ ಮಾಡುತ್ತಾರೆ.

**6. ಉದ್ಯಮದ ಇನ್‌ಕ್ಯುಬೇಟರ್‌ಗಳು ಮತ್ತು ವೇಗವರ್ಧಕರು** – ಉದ್ಯಮಗಳು ಆರಂಭಿಕ ಹಂತದಲ್ಲಿ ಪೋಷಕ ಮತ್ತು ವೇಗವರ್ಧಕ ಕಾರ್ಯಕ್ರಮಗಳನ್ನು ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ಆಯ್ಕೆಯಾಗಿ ಪರಿಗಣಿಸಬಹುದು. ಬಹುತೇಕ ಪ್ರಮುಖ ನಗರಗಳಲ್ಲಿ ಕಂಡು ಬರುವ ಈ ವ್ಯವಸ್ಥೆಯು ಪ್ರತಿ ವರ್ಷವೂ ನೂರಾರು ನವೋದ್ಯಮಗಳಿಗೆ ನೆರವು ನೀಡಿವೆ. ನವೋದ್ಯಮಕ್ಕೆ ಬೇಕಾದ ಅವಶ್ಯಕ ಸಾಮಗ್ರಿ, ತರಬೇತಿ ಮತ್ತು ಉದ್ಯಮಕ್ಕೆ ಬೇಕಾದ ಸಂಪರ್ಕ ಜಾಲವನ್ನು ಒದಗಿಸಿ ಉದ್ಯಮವು ಬೆಳೆಯುವಂತೆ ಮಾಡುವ ಇನ್‌ಕ್ಯುಬೇಟರ್ ಒಂದು ರೀತಿಯಲ್ಲಿ ಮಗುವಿನ ಪೋಷಕರ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಅಕ್ಸಲರೇಟರ್‌ಗಳು ಕೂಡ ಬಹುತೇಕ ಅಷ್ಟೇ ಅಥವಾ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇವರನ್ನೇ ಹೋಲುತ್ತಾರಾದರೂ, ಇನ್‌ಕ್ಯುಬೇಟರ್ ಉದ್ಯಮವೊಂದು ಸ್ಥಿರವಾಗಿ ನೆಲೆಯೂರಿ ಮುಂದಕ್ಕೆ ಸಾಗಲು ನೆರವು/ಸಲಹೆ ನೀಡಿದರೆ, ಅಕ್ಸಲರೇಟರ್‌ಗಳು ಉದ್ಯಮ ಮುಂದೆ ಸಾಗಲು ಹಾಗೂ ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಸಹಾಯ ಮಾಡುತ್ತಾರೆ.

**7. ಕಿರುಹಣಕಾಸು ಪೂರೈಕೆದಾರರು ಅಥವಾ ಎನ್‌ಬಿಎಫ್‌ಸಿಗಳು** – ಮೂಲಭೂತವಾಗಿ ಸಾಂಪ್ರದಾಯಿಕ ಬ್ಯಾಂಕಿಂಗ್ ವ್ಯವಸ್ಥೆಯಿಂದ ಆರ್ಥಿಕ ನೆರವು ಸಿಗದವರಿಗೆ ಕಿರು ಹಣಕಾಸು ಪೂರೈಕೆದಾರರು ಸೇವೆ ಒದಗಿಸುತ್ತಾರೆ. ಸೀಮಿತ ಬಂಡವಾಳದ ಅವಶ್ಯಕತೆ ಇರುವವರಿಗೆ ಮತ್ತು ಕ್ರೆಡಿಟ್ ಶ್ರೇಯಾಂಕ ಬ್ಯಾಂಕ್ ನಿಯಮಗಳಿಗೆ ಪೂರಕವಾಗಿಲ್ಲದವರಲ್ಲಿ ಇದು ದಿನೇ ದಿನೇ ಹೆಚ್ಚು ಜನಪ್ರಿಯವಾಗುತ್ತಿದೆ. ಇದೇ ರೀತಿ ಎನ್‌ಬಿಎಫ್‌ಸಿಗಳು ಬ್ಯಾಂಕೇತರ ಹಣಕಾಸು ಸಂಸ್ಥೆಗಳಾಗಿದ್ದು, ಕಾನೂನು ನಿಯಮಗಳ ಅವಶ್ಯಕತೆ / ಬ್ಯಾಂಕ್‌ನ ನಿಯಮಗಳ ಅವಶ್ಯಕತೆ ಇಲ್ಲದೆ ಬ್ಯಾಂಕಿಂಗ್ ಸೇವೆಯನ್ನು ಒದಗಿಸುತ್ತವೆ.

## ನವೋದ್ಯಮ ಉತ್ತೇಜನಕ್ಕೆ ಭಾರತದ ಸರ್ಕಾರದ ಕ್ರಮಗಳು

ನವೋದ್ಯಮ ಕ್ರಿಯಾ ಯೋಜನೆಯು 19 ಅಂಶಗಳ ಕಾರ್ಯಸೂಚಿಯನ್ನು ಒಳಗೊಂಡಿದ್ದು, ಇದರಲ್ಲಿ ಕಾರ್ಮಿಕರು ಮತ್ತು ಪರಿಸರಕ್ಕೆ ಸಂಬಂಧಿಸಿದ ನಿಯಮಗಳನ್ನು ಪಾಲಿಸುವ ಕುರಿತು ಸ್ವಯಂ ಪ್ರಮಾಣ ಪತ್ರ, ಹಕ್ಕು ಸಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕು ಪಡೆಯಲು ಅರ್ಜಿ ಸಲ್ಲಿಕೆಯಲ್ಲಿ ನೆರವಾಗಲು ಸಮಿತಿ ರಚನೆ, ಮೂಲ ಬಂಡವಾಳ ಮತ್ತು ಬಂಡವಾಳದ ಮೇಲಿನ ಲಾಭಕ್ಕೆ ತೆರಿಗೆ ರಿಯಾಯಿತಿ ಮತ್ತು ಮೂರು ವರ್ಷ ಆದಾಯ ತೆರಿಗೆ ರಜೆ (ವಿನಾಯಿತಿ) ಹಾಗೂ ನಾಲ್ಕು ವರ್ಷಗಳಿಗೆ 10 ಸಾವಿರ ಕೋಟಿ ರೂ. ಹಣಕಾಸು ನೆರವು ಒದಗಿಸುವ ಹಲವಾರು ಅಂಶಗಳು ಸೇರಿವೆ.

## ನವೋದ್ಯಮ ಭಾರತದ 19 ಅಂಶಗಳ ಕ್ರಿಯಾ ಯೋಜನೆ

### 1. ಸ್ವಯಂ ಪ್ರಮಾಣ ಪತ್ರ

ಕಾನೂನು ನಿಯಂತ್ರಣ ಬಾಧ್ಯತೆಗಳ ಹೊರೆ ಕಡಿಮೆ ಮಾಡಿಕೊಳ್ಳಲು ನವೋದ್ಯಮಗಳು ಸ್ವಯಂ ಪ್ರಮಾಣ ಪತ್ರ ನೀತಿಯನ್ನು ಅಳವಡಿಸಿಕೊಳ್ಳಲಿವೆ. ಈ ಪ್ರಮಾಣ ಪತ್ರವು ಪಾವತಿ, ಗ್ರಾಚ್ಯುಟಿ, ಕಾರ್ಮಿಕ ಒಪ್ಪಂದ, ಭವಿಷ್ಯ ನಿಧಿ ನಿರ್ವಹಣೆ, ನೀರು ಮತ್ತು ವಾಯು ಮಾಲಿನ್ಯ ಕಾಯ್ದೆ ಸೇರಿದಂತೆ ಎಲ್ಲಾ ಕಾನೂನುಗಳಿಗೆ ಅನ್ವಯವಾಗುತ್ತವೆ.

### 2. ಭಾರತ ನವೋದ್ಯಮ ಕೇಂದ್ರ

ಉದ್ಯಮಿಗಳಿಗೆ ಮಾಹಿತಿ ಮತ್ತು ಜ್ಞಾನ ವಿನಿಮಯ ಹಾಗೂ ಹಣಕಾಸು ನೆರವು ಒದಗಿಸುವ ನಿಟ್ಟಿನಲ್ಲಿ ಭಾರತದ ನವೋದ್ಯಮ ಪ್ರತಿಷ್ಠಾನಕ್ಕಾಗಿ ಏಕ ಸ್ಥಳ ಸಂಪರ್ಕದ ಅಖಿಲ ಭಾರತದ ಮಟ್ಟದಲ್ಲಿ ಕೇಂದ್ರವೊಂದನ್ನು ರಚಿಸಲಾಗುತ್ತಿದೆ.

### 3. ಆ್ಯಪ್ ಮೂಲಕ ನೊಂದಣಿ

ಮೊಬೈಲ್ ಅಪ್ಲಿಕೇಶನ್ ರೂಪದಲ್ಲಿ ಆನ್‌ಲೈನ್ ಪೋರ್ಟಲ್ ಆರಂಭಿಸಿ ಈ ಮೂಲಕ ನವೋದ್ಯಮ ಸ್ಥಾಪಕರಿಗೆ ಸುಲಭವಾಗಿ ನೊಂದಣಿ ಮಾಡಿಕೊಳ್ಳಲು ಅವಕಾಶ ನೀಡುವುದು.

### 4. ಹಕ್ಕು ಸ್ವಾಮ್ಯ ರಕ್ಷಣೆ

ಹಕ್ಕು ಸ್ವಾಮ್ಯ ಪರೀಕ್ಷೆಯನ್ನು ಕಡಿಮೆ ವೆಚ್ಚದಲ್ಲಿ ತ್ವರಿತವಾಗಿ ಮಾಡಲು ಕೇಂದ್ರ ಸರ್ಕಾರದಿಂದ ಸಿದ್ಧವಾದ ತ್ವರಿತ–ಗತಿಯ ವ್ಯವಸ್ಥೆಯ ನಿರೂಪಣೆ. ಈ ವ್ಯವಸ್ಥೆಯು ನವೋದ್ಯಮಗಳ ಬೌದ್ಧಿಕ ಹಕ್ಕು ಸ್ವಾಮ್ಯ (ಐಪಿಆರ್‌ಗಳು)ದ ಅಳವಡಿಕೆ ಮತ್ತು ಈ ಕುರಿತು ತಿಳಿವಳಿಕೆ ಮೂಡಿಸಲು ಉತ್ತೇಜನ ನೀಡುತ್ತದೆ.

### 5. 10,000 ಕೋಟಿ ರೂ. ನಿಧಿ

ಹೊಸ ನವೋದ್ಯಮ ಉದ್ಯಮಿಗಳ ಬೆಂಬಲಕ್ಕಾಗಿ, ಸರ್ಕಾರವು ಆರಂಭಿಕ 2,500 ಕೋಟಿ ರೂ.ನೊಂದಿಗೆ ನಾಲ್ಕು ವರ್ಷಗಳಲ್ಲಿ ಒಟ್ಟು 10,000 ಕೋಟಿ ರೂ. ನಿಧಿಯನ್ನು ಅಭಿವೃದ್ಧಿ ಪಡಿಸಲಿದೆ.

ಈ ನಿಧಿಯನ್ನು ಅಭಿವೃದ್ಧಿ ಪಡಿಸುವಲ್ಲಿ ಭಾರತೀಯ ಜೀವ ವಿಮಾ ನಿಗಮ ಪ್ರಮುಖ ಪಾತ್ರ ವಹಿಸಲಿದೆ. ನವೋದ್ಯಮ ಕ್ಷೇತ್ರದಿಂದ ಆಯ್ಕೆಯಾದ ಖಾಸಗಿ ವೃತ್ತಿಪರರನ್ನು ಒಳಗೊಂಡ ಸಮಿತಿಯು ಈ ನಿಧಿಯನ್ನು ನಿರ್ವಹಿಸಲಿದೆ.

### 6. ರಾಷ್ಟ್ರೀಯ ಸಾಲ ಖಾತರಿ ವಿಶ್ವಸ್ಥ ಮಂಡಳಿ

ನವೋದ್ಯಮಗಳಿಗೆ ನಿಧಿ ಹರಿವು ಸಿಗುವಂತೆ ಮಾಡಲು ಮುಂದಿನ ನಾಲ್ಕು ವರ್ಷಗಳಲ್ಲಿ ವಾರ್ಷಿಕ 500 ಕೋಟಿ ರೂ. ಬಜೆಟ್ ನಲ್ಲಿ ಒಂದು ರಾಷ್ಟ್ರೀಯ ಸಾಲ ಖಾತರಿ ವಿಶ್ವಸ್ಥ ಮಂಡಳಿ (ಎನ್‌ಸಿಜಿಟಿಸಿ) ಯ ಸ್ಥಾಪಿಸಲಾಗುತ್ತಿದೆ.

### 7. ಮೂಲ ಬಂಡವಾಳ ಲಾಭಕ್ಕೆ ತೆರಿಗೆ ಇಲ್ಲ

ಪ್ರಸಕ್ತ ದೀರ್ಘಾವಧಿ ಹೂಡಿಕೆ ನಿಧಿಯ ಮೇಲೆ ಮೂಲ ಬಂಡವಾಳದ ಮೇಲಿನ ಲಾಭಕ್ಕೆ ತೆರಿಗೆ ವಿನಾಯಿತಿ ಇದೆ. ಇದೇ ನೀತಿಯನ್ನು ನವೋದ್ಯಮಗಳ ಪ್ರಾಥಮಿಕ ಹಂತದ ಹೂಡಿಕೆಯಲ್ಲೂ ಅನುಸರಿಸಲಾಗುವುದು.

### 8. ಮೂರು ವರ್ಷ ಆದಾಯ ತೆರಿಗೆ ವಿನಾಯಿತಿ

ಮೂರು ವರ್ಷಗಳ ಕಾಲ ನವೋದ್ಯಮ ಆದಾಯ ತೆರಿಗೆ ಪಾವತಿ ಮಾಡಬೇಕಾಗಿಲ್ಲ. ಈ ಕ್ರಾಂತಿಕಾರಿ




ನೀತಿಯಿಂದ ನವೋದ್ಯಮಗಳು ಭವಿಷ್ಯದಲ್ಲಿ ದೊಡ್ಡ ಪ್ರಗತಿ ಕಾಣಲು ಸಾಧ್ಯವಿದೆ.

### 9. ಉನ್ನತ ಮೌಲ್ಯದ ಹೂಡಿಕೆಗೆ ತೆರಿಗೆ ವಿನಾಯಿತಿ

ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಮೌಲ್ಯದ ಹೂಡಿಕೆಯ ಪ್ರಕರಣಗಳಲ್ಲಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗುತ್ತದೆ.

### 10. ಉದ್ಯಮಿಗಳ ಬೆಳೆಸುವಿಕೆ

ಐದು ಲಕ್ಷ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅವಿಷ್ಕಾರಕ್ಕೆ ಸಂಬಂಧಪಟ್ಟ ಅಧ್ಯಯನವನ್ನು ಒದಗಿಸಲು ಯೋಜನೆ ಮಾಡಲಾಗಿದೆ. ಇದರ ಹೊರತಾಗಿ ವಿಶ್ವ ದರ್ಜೆಯ ಇನ್‌ಕ್ಯುಬೇಟರ್‌ಗಳನ್ನು ಅಭಿವೃದ್ಧಿ ಪಡಿಸಲು ವಾರ್ಷಿಕವಾಗಿ ಇನ್‌ಕ್ಯುಬೇಟರ್ ಮಹಾ ಸ್ಪರ್ಧೆ ಕೂಡ ಇರುತ್ತದೆ.

### 11. ಅಟಲ್ ಅವಿಷ್ಕಾರ ಮಿಷನ್

ಅವಿಷ್ಕಾರಕ್ಕೆ ಉತ್ತೇಜನ ನೀಡಲು ಮತ್ತು ಪ್ರತಿಭಾವಂತ ಯುವ ಜನಾಂಗಕ್ಕೆ ಸ್ಫೂರ್ತಿ ತುಂಬಲು ಅಟಲ್ ಆವಿಷ್ಕಾರ ಮಿಷನ್ ಆರಂಭಿಸಲಾಗುತ್ತದೆ.

### 12. ಇನ್‌ಕ್ಯುಬೇಟರ್‌ಗಳ ತಯಾರಿ

ಖಾಸಗಿ–ಸರ್ಕಾರಿ ಪಾಲುದಾರಿಕೆಯಲ್ಲಿ ಮಾದರಿ, 35 ಹೊಸ ಇನ್‌ಕ್ಯುಬೇಟರ್ ಮತ್ತು 31 ಅವಿಷ್ಕಾರ ಕೇಂದ್ರಗಳನ್ನು ರಾಷ್ಟ್ರೀಯ ಸಂಸ್ಥೆಗಳಲ್ಲಿ ಸ್ಥಾಪಿಸಲು ಚಿಂತನೆ ನಡೆಸಲಾಗಿದೆ.

### 13. ಸಂಶೋಧನಾ ಪಾರ್ಕ್‌ಗಳು

ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ ಆರು ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ಇನ್ನೊಂದು ಸೇರಿದಂತೆ ಏಳು ಹೊಸ ಸಂಶೋಧನಾ ಪಾರ್ಕ್ ಗಳನ್ನು ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸಿದೆ. ಇದಕ್ಕೆ 100 ಕೋಟಿ ರೂ. ಹೂಡಿಕೆ ಮಾಡಲಾಗುತ್ತದೆ.

**14. ಜೈವಿಕ ತಂತ್ರಜ್ಞಾನದಲ್ಲಿ ಉದ್ಯಮಶೀಲತೆ**

ಸರ್ಕಾರವು ಇನ್ನೂ ಐದು ಹೊಸ ಜೈವಿಕ ತಂತ್ರಜ್ಞಾನ ಕೇಂದ್ರಗಳು ಹಾಗೂ 50 ಹೊಸ ಜೈವಿಕ ಇನ್‌ಕ್ಯುಬೇಟರ್, 15 ತಂತ್ರಜ್ಞಾನ ವರ್ಗಾವಣೆ ಕಚೇರಿ ಮತ್ತು 20 ಜೈವಿಕ–ಸಂಪರ್ಕ ಕಚೇರಿಗಳನ್ನು ದೇಶಾದ್ಯಂತ ಸ್ಥಾಪಿಸಲಿದೆ.

**15. ಶಾಲೆಗಳಿಗೆ ಪ್ರತ್ಯೇಕ ಮೀಸಲು ಕಾರ್ಯಕ್ರಮಗಳು**

ಸುಮಾರು 5 ಲಕ್ಷ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆವಿಷ್ಕಾರ–ಸಂಬಂಧಿತ ಕಾರ್ಯಕ್ರಮಗಳನ್ನು ಸರ್ಕಾರ ಬೆಂಬಲಿಸಲಿದೆ.

**16. ಕಾನೂನು ಬೆಂಬಲ**

ಒಂದು ಸಮಿತಿಯು, ಹಕ್ಕು ಸ್ವಾಮ್ಯ ಅರ್ಜಿ ಮತ್ತು ಇತರ ಅಧಿಕೃತ ದಾಖಲೆಗಳನ್ನು ಸಲ್ಲಿಸಲು ಹಾಗೂ ಕಾನೂನು ಬೆಂಬಲಕ್ಕೆ ನೆರವು ನೀಡಲಿದೆ.

**17. ರಿಯಾಯಿತಿ**

ಹಕ್ಕು ಸ್ವಾಮ್ಯ ಅರ್ಜಿಗಳನ್ನು ಸಲ್ಲಿಸುವ ಉದ್ಯಮಿಗಳಿಗೆ ಒಟ್ಟು ಮೌಲ್ಯದ ಶೇ. 80ರಷ್ಟು ರಿಯಾಯಿತಿ ನೀಡಲಾಗುತ್ತದೆ.

**18. ಸರಳ ನಿಯಮ**

ನವೋದ್ಯಮಗಳಿಗಾಗಿ ಸರ್ಕಾರಿ ಸಂಸ್ಥೆಗಳಿಗೆ ಸರಕು ಪಡೆಯುವಿಕೆ ಮತ್ತು ವ್ಯಾಪಾರ ಮಾಡುವ ನಿಯಮಗಳನ್ನು ಸರಳಗೊಳಿಸಲಾಗುವುದು.

**19. ತ್ವರಿತ ನಿರ್ಗಮನ**

ಒಂದು ವೇಳೆ ನವೋದ್ಯಮವೊಂದು ವಿಫಲವಾದರೆ ಆಗ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಪಡೆಯಲು ಉದ್ಯಮಿಗಳಿಗೆ ಸರ್ಕಾರ ನೆರವು ಒದಗಿಸುವುದು. ಮತ್ತೊಮ್ಮೆ ಅವರು ವಿಫಲವಾದರೆ ಆಗ ಸುಲಭವಾಗಿ ಉದ್ಯಮದಿಂದ ಹೊರ ನಡೆಯಲು ಸರ್ಕಾರ ಅವಕಾಶ ನೀಡುತ್ತದೆ.

2016ರ ಮೊದಲ ಮತ್ತು ಮೂರನೇ ತ್ರೈಮಾಸಿಕ ಅವಧಿಯ ನಡುವೆ ಭಾರತದ ನವೋದ್ಯಮ 815 ವ್ಯವಹಾರಗಳಲ್ಲಿ 3.5 ಶತ ಕೋಟಿ ಡಾಲರ್ ಏಂಜೆಲ್ ಮತ್ತು ವೆಂಚರ್ ಕ್ಯಾಪಿಟಲ್ ಹೂಡಿಕೆ ಕಂಡಿದೆ. ಇದು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಗಣನೀಯ ಇಳಿಕೆಯನ್ನು ತೋರಿಸುತ್ತದೆ. ಯುವರ್ ಸ್ಟೋರಿ ರಿಸರ್ಚ್ ಪ್ರಕಾರ, 2015ರ ಜನವರಿ ಮತ್ತು ಸೆಪ್ಟೆಂಬರ್ ಅವಧಿಯಲ್ಲಿ 639 ವ್ಯವಹಾರಗಳಲ್ಲಿ 7.3 ಶತ ಕೋಟಿ ಡಾಲರ್ ಹೂಡಿಕೆ ಹರಿದು ಬಂದಿತ್ತು. ಈ ವರ್ಷ ಪ್ರಸಕ್ತ ಒಟ್ಟು ವ್ಯವಹಾರಗಳ ಸಂಖ್ಯೆಯಲ್ಲಿ ಶೇ. 27ರಷ್ಟು ಏರಿಕೆಯಾಗಿದ್ದು, ಒಟ್ಟು ವ್ಯವಹಾರದ ಮೌಲ್ಯ ಮತ್ತು ಅಂಕಿಗಳ ಪ್ರಮಾಣದಲ್ಲಿ ಇಳಿಕೆಯಾಗಿದೆ. ಈ ದೃಷ್ಟಿಕೋನದಲ್ಲಿ ನೋಡಿದರೆ 2014ರಲ್ಲಿ 300 ವೆಂಚರ್ ಕ್ಯಾಪಿಟಲ್ ಮತ್ತು ಏಂಜೆಲ್ ಹೂಡಿಕೆ ಒಪ್ಪಂದವು ವರ್ಷಪೂರ್ತಿ ಕಂಡು ಬಂದಿತ್ತು.

**ಆರ್ಥಿಕ ವ್ಯವಸ್ಥೆಗೆ ಹೊಸ ಸ್ಪರ್ಧಾತ್ಮಕ ಆಯಾಮ ತರುವಲ್ಲಿ** – ಯಾವುದೇ ಆರ್ಥಿಕ ವ್ಯವಸ್ಥೆಗೆ ಹೆಚ್ಚುವರಿ ಆಯಾಮ ಮತ್ತು ಸ್ಪರ್ಧಾತ್ಮಕತೆಯನ್ನು ಒದಗಿಸುವುದರಿಂದ ನವೋದ್ಯಮ ಕಂಪನಿಗಳು ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಕ್ರಿಯಾಶೀಲ ಆರ್ಥಿಕ ಸಂಸ್ಥೆಗಳಾಗಿವೆ ಎಂದು ತೀರ್ಮಾನಿಸಬಹುದು. ಬದಲಾವಣೆಗೆ ಉತ್ತೇಜನ ನೀಡುವ ಸಂಸ್ಥೆಗಳಾಗಿ ಅವು ವರ್ತಿಸುತ್ತಿದ್ದು, ಇದರ ಫಲಿತಾಂಶವಾಗಿ ಸರಣಿ ಪ್ರತಿಕ್ರಿಯೆ ನಡೆಯುತ್ತದೆ. ಒಮ್ಮೆ ಉದ್ಯಮ ಸ್ಥಾಪನೆಯಾದರೆ, ಇದನ್ನು ಕೈಗಾರಿಕೀಕರಣಗೊಳಿಸುವ ಪ್ರಕ್ರಿಯೆಗೆ ಚಾಲನೆ ಸಿಗುತ್ತದೆ. ಈ ಎಲ್ಲಾ ಚಟುವಟಿಕೆಗಳು ಉದ್ಯಮಶೀಲತೆಯನ್ನು ಬೆಳೆಸುತ್ತದೆ ಮತ್ತು



ನಾನಾ ವಿಧದ ಘಟಕಗಳಿಗಾಗಿ ಬೇಡಿಕೆ ಸೃಷ್ಟಿಸುತ್ತವೆ. ಇದಕ್ಕೆ ಪ್ರತಿಯಾಗಿ ಬೇಡಿಕೆ ಹೆಚ್ಚಳದಿಂದ, ಹೆಚ್ಚು ಹೆಚ್ಚು ಘಟಕಗಳ ಸ್ಥಾಪನೆಯಾಗಿ ಒಂದು ಕ್ಷೇತ್ರದ ಒಟ್ಟಾರೆ ಅಭಿವೃದ್ಧಿಗೆ ನಾಂದಿ ಹಾಡುತ್ತದೆ. ದೇಶೀಯ ನವೋದ್ಯಮಗಳು ತಮ್ಮ ಕಡಿಮೆ ಬೆಲೆಯ ಮತ್ತು ಸುಲಭ ಸೇವೆಯಿಂದ ಜನ ಜೀವನ ಸರಳವಾಗುವಂತೆ ಮಾಡುವುದಲ್ಲದೆ, ಭಾರತದ ಆರ್ಥಿಕ ಪ್ರಗತಿಯ ಪ್ರಮುಖ ಉತ್ತೇಜಕವಾಗಿ ಕೆಲಸ ಮಾಡುತ್ತವೆ. ನವೋದ್ಯಮ ಭಾರತ (ಸ್ಟಾರ್ಟ್ ಅಪ್ ಇಂಡಿಯಾ), ಭಾರತದ ಶ್ರೇಯೋಭಿವೃದ್ಧಿಗೆ ಪೂರಕವಾಗುತ್ತದೆ ಎಂದು ನಾವು ನಂಬಿದ್ದೇವೆ. ಹಲವಾರು ಯುವ ಉದ್ಯಮಿಗಳು ತಮ್ಮದೇ ಸ್ವಂತ ಉದ್ಯಮ ಆರಂಭಿಸುವ ಕನಸು ಕಾಣುತ್ತಿದ್ದರೂ ಸಂಪನ್ಮೂಲಗಳ ಕೊರತೆ ಎದುರಿಸುತ್ತಿದ್ದಾರೆ. ಇದರ ಫಲಿತಾಂಶವಾಗಿ ಅವರ ಚಿಂತನೆ, ಪ್ರತಿಭೆ ಮತ್ತು ಸಾಮರ್ಥ್ಯದ ಬಳಕೆ ಸಾಧ್ಯವಾಗುತ್ತಿಲ್ಲ. ಇದರಿಂದ ದೇಶವು ಸಂಪತ್ತು ಸೃಷ್ಟಿ, ಆರ್ಥಿಕ ಪ್ರಗತಿ ಮತ್ತು ಉದ್ಯೋಗಾವಕಾಶವನ್ನು ಕಳೆದುಕೊಳ್ಳುತ್ತದೆ. ವಿನೂತನ ಆವಿಷ್ಕಾರ ಮಾಡುವ ಸಾಮರ್ಥ್ಯ ಹೊಂದಿರುವ ಜನರು ಮತ್ತು ಸ್ವಂತ ಉದ್ಯಮ ಆರಂಭಿಸಲು ಮುಂದಾಗುವವರನ್ನು ಕ್ರಿಯಾತ್ಮಕ ಬೆಂಬಲ ಮತ್ತು ಬಹು ಹಂತದಲ್ಲಿ ಪ್ರೋತ್ಸಾಹ ನೀಡುವ ಮೂಲಕ ನವೋದ್ಯಮ ಭಾರತ (ಸ್ಟಾರ್ಟ್ ಅಪ್ ಇಂಡಿಯಾ), ಉದ್ಯಮಶೀಲತೆ ಮತ್ತು ಆರ್ಥಿಕ ಅಭಿವೃದ್ಧಿ ಹೆಚ್ಚಳಕ್ಕೆ ನೆರವಾಗುತ್ತಿದೆ. ❑

## ಸುದ್ದಿ ಗುಟುಕು

ಭಾರತ–ರಶಿಯಾ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಸೇಂಟ್ ಪೀಟರ್ಸ್ ಬರ್ಗ್ ಘೋಷಣೆಗೆ ಸಹಿ ಹಾಕಿವೆ. ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ತಮ್ಮ ಇತ್ತೀಚಿನ ರಶಿಯಾ ಭೇಟಿ ಸಂದರ್ಭದಲ್ಲಿ ರಶಿಯಾ ಅಧ್ಯಕ್ಷ ಶ್ರೀ ವ್ಲಾಡಿಮಿರ್ ಪುಟಿನ್ ಜತೆ ಮಾತುಕತೆ ನಡೆಸಿದ ಬಳಿಕ ಈ ಬಗ್ಗೆ ಜಂಟಿ ಹೇಳಿಕೆ ನೀಡಿದ್ದಾರೆ. ಉಭಯ ದೇಶಗಳು ಭಯೋತ್ಪಾದನೆಯನ್ನು ಆಮೂಲಾಗ್ರವಾಗಿ ಖಂಡಿಸಿವೆ. ತಮಿಳು ನಾಡಿನ ಕುಂದನ್ ಕುಲನ್ ಅಣುವಿದ್ಯುತ್ ಸ್ಥಾವರದಲ್ಲಿ ಎರಡು ಘಟಕಗಳ ಸ್ಥಾಪನೆ ಕುರಿತಾದ ಒಪ್ಪಂದದ ಜಾರಿ ದೇಶದ ವಿದ್ಯುಚ್ಛಕ್ತಿ ಸ್ಥಿತಿಯನ್ನು ಸುಧಾರಿಸಲಿದೆ ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಈ ಸಂದರ್ಭದಲ್ಲಿ ಹೇಳಿದರು.

# ತನು-ಮನಗಳ ಸಾಮರಸ್ಯಕ್ಕಾಗಿ ಯೋಗ

* ಡಾ. ಈಶ್ವರ ಎನ್. ಆಚಾರ್ಯ
** ಡಾ. ರಾಜೀವ್ ರಸ್ತೋಗಿ



**ಯುವಕರು ತಮ್ಮ ಆರೋಗ್ಯದ ಸಮಸ್ಯೆಗಳಿಂದ ಹೊರಬರಲು ಪರಿಣಾಮಕಾರಿಯಾದ ಯೋಗ ಚಿಕಿತ್ಸೆ ಪಡೆದು ದೇಶದ ಬೆಳವಣಿಗೆಯ ಭಾಗವಾಗಬಹುದು. ಯೋಗ ಸಕಾರಾತ್ಮಕ ಆರೋಗ್ಯವನ್ನು ಕೊಡುತ್ತದೆ ಮತ್ತು ಸಕಾರಾತ್ಮಕ ನಡಾವಳಿಕೆಯನ್ನು ಬೆಳೆಸುತ್ತದೆ. ಯೋಗ ಮಾಡುವುದರಿಂದ ದೇಹ ಮತ್ತು ಮನಸ್ಸುಗಳ ಆರೋಗ್ಯದಲ್ಲಿ ಸಮತೋಲನ ಸಾಧಿಸಿಕೊಂಡು ಉತ್ತಮವಾದ ಜೀವನದನ್ನು ಸಾಗಿಸಬಹುದು.**

ಯೋಗ ಈಗ ಎಲ್ಲ ಕಡೆ ಪ್ರಾಮುಖ್ಯತೆ ಪಡೆಯುತ್ತಿದೆ. ಅದು ಎಲ್ಲ ಪ್ರದೇಶ, ಧರ್ಮ, ಜಾತಿ ವರ್ಗ ಮತ್ತು ರಾಷ್ಟ್ರೀಯತೆಯನ್ನು ಮೀರಿ ಜನಪ್ರಿಯವಾಗುತ್ತಿದೆ. ಆರೋಗ್ಯ ವೃದ್ಧಿಗೆ, ಕಾಯಿಲೆಯನ್ನು ತಡೆಗಟ್ಟುವ, ವಿವಿಧ ಜೀವನಶೈಲಿಗಳಿಂದುಂಟಾಗುವ ಅಸ್ವಸ್ಥತೆಗೆ ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡುವ ಸಾಮರ್ಥ್ಯವನ್ನು ಅದು ಹೊಂದಿರುವುದರಿಂದ ಪ್ರಪಂಚದಾದ್ಯಂತ ಜನಜನಿತವಾಗುತ್ತಿದೆ. ಯೋಗ ಆಧ್ಯಾತ್ಮದ ಒಂದು ಭಾಗವಾಗಿದ್ದು, ಅದು ದೇಹ ಮತ್ತು ಮನಸ್ಸುಗಳ ನಡುವೆ ಸಮರ್ಪಕವಾದ ಹೊಂದಾಣಿಕೆಯನ್ನು ತಂದುಕೊಡುತ್ತದೆ.

ಈಗಿನ ಕಾಲ ತಾಂತ್ರಿಕತೆಯ ಬೆಳವಣಿಗೆಗಳಿಂದ ಕೂಡಿದ್ದು ನಮ್ಮ ಜೀವನವನ್ನು ಹೆಚ್ಚು ಸುಖ ಸಂತೋಷದಿಂದಿರಿಸಿದೆ. ಆದರೂ, ಸರಿಯಾಗಿಲ್ಲದ ಜೀವನಶೈಲಿ, ಕಲುಷಿತ ಪರಿಸರ, ಮಾಲಿನ್ಯ, ಆಧುನಿಕವಾದ ದುಡಿಯುವ ಶೈಲಿಗಳು ನಮ್ಮ ಜೀವನವನ್ನು ಕಷ್ಟವನ್ನಾಗಿಸಿವೆ. ಈ ದುಡಿಯುವ ಶೈಲಿ ನಮ್ಮ ಜೀವನದ ದೈಹಿಕ, ಮಾನಸಿಕ, ಭೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆಧ್ಯಾತ್ಮಕ ಹೀಗೆ ಎಲ್ಲ ಆಯಾಮಗಳಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿ ಗೊಂದಲಗಳನ್ನು ತಂದಿಟ್ಟಿದೆ. ಜೀವನದ ಎಲ್ಲ ಹಂತಗಳಲ್ಲಿ ಯೋಗ ಸರಿಯಾದ ದಾರಿ ತೋರಿಸುತ್ತದೆ. ಯಾವುದೇ ಆರೋಗ್ಯ ರಕ್ಷಣೆಯ ವ್ಯವಸ್ಥೆಗೆ ಹೊಂದಿಕೊಳ್ಳುವ ವೈಶಿಷ್ಟ್ಯತೆಯನ್ನು ಯೋಗ ಹೊಂದಿದೆ. ಈ ವೈಶಿಷ್ಟ್ಯತೆಯೇ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯೂ ಸೇರಿದಂತೆ ಇತರೆ ವೈದ್ಯಕೀಯ ಪದ್ಧತಿ ಅನುಸರಿಸುತ್ತಿರುವ ವೈದ್ಯರು ಯೋಗ ಚಿಕಿತ್ಸೆಯನ್ನು ತಮ್ಮ ರೋಗಿಗಳಿಗೆ ಶಿಫಾರಸ್ಸು ಮಾಡಲು ಸಹಾಯ ಮಾಡುತ್ತದೆ.

ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರು 2014 ರ ಸೆಪ್ಟೆಂಬರ್ 27 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಷಣ ಮಾಡುತ್ತಾ "ನಮ್ಮ ಪುರಾತನವಾದ ಪರಂಪರೆಯು ಅಮೂಲ್ಯವಾದ ಯೋಗವನ್ನು ಉಡುಗೊರೆಯಾಗಿ ನೀಡಿದೆ ಎಂದರು. ಯೋಗ ದೇಹ ಮತ್ತು ಮನಸ್ಸುಗಳನ್ನು ಬೆಸೆಯುವ; ಆಲೋಚನೆ ಮತ್ತು ಕ್ರಿಯೆ; ಸಂಯಮ ಮತ್ತು ಸಾರ್ಥಕತೆ; ಮನುಷ್ಯ ಮತ್ತು ಪ್ರಕೃತಿಯ ನಡುವೆ ಸುಮಧುರವಾದ ಸಂಬಂಧ; ಆರೋಗ್ಯ ಮತ್ತು ಸ್ವಾಸ್ಥ್ಯದ ಬಗ್ಗೆ ಸಮಗ್ರವಾದ ಧೋರಣೆಯನ್ನು ಹೊಂದುವುದರ ಬಗ್ಗೆ ತಿಳಿಸುತ್ತದೆ. ಯೋಗ ಕೇವಲ ವ್ಯಾಯಾಮವಲ್ಲ, ನಮ್ಮಲ್ಲಿ ನಮ್ಮತನವನ್ನು, ವಿಶ್ವ ಮತ್ತು ಪ್ರಕೃತಿಯಲ್ಲಿ ಒಂದಾಗುವುದನ್ನು ಕಲಿಸುತ್ತದೆ. ನಮ್ಮ ಜೀವನಶೈಲಿಯನ್ನು ಬದಲಾಯಿಸಿ ಸ್ವಯಂ ಪ್ರಜ್ಞೆಯನ್ನು ರೂಪಿಸುತ್ತದೆ, ಇದು ಹವಾಮಾನದಾಲ್ಲಾಗುವ ಬದಲಾವಣೆಯನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಕಲಿಸುತ್ತದೆ. ಆದ್ದರಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸುವುದರ ಕಡೆ ನಾವೆಲ್ಲರೂ ಕೆಲಸ ಮಾಡೋಣ" ಎಂದು ಪ್ರಧಾನ ಮಂತ್ರಿಯವರು ಕರೆ ನೀಡಿದರು. ಯೋಗವನ್ನು ಎಲ್ಲರೂ ಒಪ್ಪಿಕೊಂಡಿರುವುದರಿಂದ ಅದರ

* ನಿರ್ದೇಶಕರು. ** ಸಹಾಯಕ ನಿರ್ದೇಶಕರು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಕೇಂದ್ರೀಯ ಮಂಡಳಿ ನವ ದೆಹಲಿ.
E-mail : * ccryn.goi@gmail.com ** rrastogi.2009@gmail.com

ಉಪಯುಕ್ತತೆಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಲು ಅದನ್ನು ಪ್ರಪಂಚದಾದ್ಯಂತ ಜನಪ್ರಿಯಗೊಳಿಸುವುದು ಅಗತ್ಯವಿದೆ ಎಂದು ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು.

ನಂತರ ವಿಶ್ವಸಂಸ್ಥೆ ಜೂನ್, 21 ನ್ನು ಅಂತಾರಾಷ್ಟ್ರೀಯ ಯೋಗ ದಿನ ಎಂದು ಸಾರಿತು. ಅದನ್ನು 177 ದೇಶಗಳು ಬೆಂಬಲಿಸಿದವು. ಈಗ ಯೋಗವನ್ನು ಇಡೀ ಪ್ರಪಂಚದಲ್ಲಿ ಅತ್ಯುತ್ಸಾಹ ಮತ್ತು ಆಸಕ್ತಿಯಿಂದ ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನಾಚರಿಸಲು ಕೇಂದ್ರ ಸರ್ಕಾರ ಆಯುಷ್ ಇಲಾಖೆಗೆ ವಹಿಸಿ ಇತರೆ ಇಲಾಖೆಗಳ ಬೆಂಬಲದಿಂದ ಸರಿಯಾದ ರೀತಿಯಲ್ಲಿ ಆಚರಿಸಬೇಕೆಂದು ತಿಳಿಸಲಾಗಿದೆ. ಈ ವರ್ಷ ನಾವು ಮೂರನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿದ್ದೇವೆ.


**ಯೋಗ ಅಂದರೆ ಏನು?**

ಯೋಗ ಒಂದು ಆಧ್ಯಾತ್ಮಿಕ ವಿಜ್ಞಾನವಾಗಿದ್ದು ಭಾರತದಲ್ಲಿ ಉಗಮಿಸಿದ ಪರಿಕಲ್ಪನೆಯಾಗಿದೆ. ಪ್ರಾಚೀನ ಭಾರತದ ಋಷಿಗಳು ಯೋಗಾಭ್ಯಾಸ ಪ್ರಾರಂಭಿಸಿದರು. ಯೋಗವು ಸಮಗ್ರ ಜೀವನ ಪದ್ಧತಿಯಾಗಿದ್ದು ಅದು ಭಾರತದ ಪರಂಪರೆ ಮತ್ತು ಸಂಸ್ಕೃತಿಯ ಆಳವಾದ ಬೇರಿನಿಂದ ಕೂಡಿದೆ. ಇದನ್ನು ಸಾವಿರಾರು ವರ್ಷಗಳ ಹಿಂದೆ ಭಾರತದ ಋಷಿಗಳು ಮತ್ತು ಮುನಿಗಳು ಅಭಿವೃದ್ಧಿ ಪಡಿಸಿದರು. ಯೋಗಕ್ಕೆ ಸಂಬಂಧಿಸಿದ ಸಾಹಿತ್ಯ ನಮ್ಮ ದೇಶದ ಎಲ್ಲ ಪುರಾತನವಾದ ಗ್ರಂಥಗಳಲ್ಲಿ ಕಂಡುಬರುತ್ತದೆ. ಮಧ್ಯಕಾಲೀನ, ಆಧುನಿಕ ಮತ್ತು ಸಮಕಾಲೀನದ ಎಲ್ಲ ಸಾಹಿತ್ಯಗಳಲ್ಲಿ ವಿಪುಲವಾಗಿ ಕಂಡು ಬರುತ್ತದೆ. ಪತಂಜಲಿಯ ಯೋಗಸೂತ್ರ (ಕ್ರಿಸ್ತಪೂರ್ವ 400)ವು ಮೊದಲನೆಯ ಕ್ರಮಬದ್ಧವಾದ ಪಠ್ಯವಾಗಿದ್ದು ಅನೇಕ ವ್ಯಾಖ್ಯಾನಕಾರರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ. ಪತಂಜಲಿ ಯೋಗ ಎಂಟು ಸುತ್ತಿನ ಯೋಗ ವಿನ್ಯಾಸದಿಂದ ಕೂಡಿದ್ದು ಅಷ್ಟಾಂಗ ಯೋಗ ಎಂದು ಜನಪ್ರಿಯವಾಗಿದೆ. ಈ ಅಷ್ಟಾಂಗ ಯೋಗ ವ್ಯಕ್ತಿಯ ಸಮಗ್ರ ವ್ಯಕ್ತಿತ್ವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಯೋಗ ಔಷಧಿರಹಿತ ಚಿಕಿತ್ಸೆಯಾಗಿದ್ದು ಆರೋಗ್ಯಕರವಾದ ಜೀವನ ಕ್ರಮವಾಗಿದೆ. ಆರೋಗ್ಯ ಮತ್ತು ರೋಗಗಳ ಬಗ್ಗೆ ಯೋಗ ತನ್ನದೇ ಆದ ಕಲ್ಪನೆಗಳು ಮತ್ತು ನೀತಿ ನಿಯಮಗಳನ್ನು ಹೊಂದಿದೆ. ಜೀವನಕ್ಕೆ ಸಂಬಂಧಿಸಿದ ದೈಹಿಕ, ಮಾನಸಿಕ, ನೈತಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಆರೋಗ್ಯದ ಬಗ್ಗೆ ಸಮಗ್ರವಾದ ದೃಷ್ಟಿಕೋನ ಯೋಗಕ್ಕಿದೆ. ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ರೋಗರುಜಿನೆಗಳು ಬರುವುದನ್ನು ಪೂರ್ವಭಾವಿಯಾಗಿ ತಡೆಗಟ್ಟಲು ಆರೋಗ್ಯಕರವಾಗಿ ಬದುಕಲು ಕ್ಲಿಷ್ಟಕರವಲ್ಲದ ಮತ್ತು ಸುಲಭವಾಗಿ ದೈನಂದಿನ ಚಟುವಟಿಕೆಗಳಲ್ಲಿ ಅನುಸರಿಸುವಂತಹ ಹಲವಾರು ಕ್ರಮಗಳ ಬಗ್ಗೆ ಅದು ಸಲಹೆ ನೀಡುತ್ತದೆ. ಇದರ ಜೊತೆಗೆ ಇತರೆ ವೈದ್ಯಪದ್ಧತಿಯಲ್ಲೂ ರೂಢಿಸಿಕೊಳ್ಳಬಹುದಾದ ಚಟುವಟಿಕೆಗಳನ್ನು ಯೋಗ ಸೂಚಿಸುತ್ತದೆ.

ಮಾನವನ ಆರೋಗ್ಯಕ್ಕೆ ಸಂಬಂಧಿಸಿದ ಅಗತ್ಯಗಳನ್ನು ಪೂರೈಸಲು ಸಂಶೋಧಕರು ಮತ್ತು ವೈದ್ಯರು ವ್ಯಾಪಕವಾಗಿ ಯೋಗದ ವಿವಿಧ ಆಯಾಮಗಳನ್ನು ಈಗ ಅನುಸರಿಸುತ್ತಿದ್ದಾರೆ. ಯೋಗ ಈಗ ಜಗತ್ತಿನ ಗಮನ ಸೆಳೆದಿದೆ. ಜೀವನದ ವಿವಿಧ ಕ್ಷೇತ್ರಗಳ ಜನರಲ್ಲಿ ಯೋಗದ ಚಟುವಟಿಕೆಗಳ ಬಗ್ಗೆ ತಿಳಿವಳಿಕೆ ಹೆಚ್ಚಾಗುತ್ತಿದ್ದು, ರೋಗ ಬರದಂತೆ ತಡೆಯುವ ಕ್ರಮಗಳ ಜೊತೆಗೆ ಆರೋಗ್ಯವನ್ನು ಇನ್ನೂ ಹೇಗೆ ಸುಧಾರಿಕೊಳ್ಳಬಹುದು ಎಂಬುದರ ಬಗ್ಗೆ ಹೊಸ ಹೊಸ ಆಡಳಿತಾತ್ಮಕ ಅಲೋಚನೆಗಳು ಬೆಳೆಯುತ್ತಿವೆ. ಒತ್ತಡವೂ ಸೇರಿದಂತೆ ಇತರೆ ಮನೋದೈಹಿಕ ತೊಂದರೆಗಳನ್ನು ನಿವಾರಿಸಲು ಮತ್ತು ಅವು ಬಾರದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಅನೇಕ ಯೋಗ ಗುರುಗಳು ಮತ್ತು ವೈದ್ಯಕೀಯ ಕ್ಷೇತ್ರದ ವೃತ್ತಿನಿರತರು ಯೋಗದ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡುತ್ತಿದ್ದಾರೆ.

ಯೋಗವನ್ನು ಮಾಡುವುದರಿಂದ ಆರೋಗ್ಯ ಉತ್ತಮವಾಗುತ್ತದೆ, ಕಾಯಿಲೆ ಬರದಂತೆ ತಡೆಯಬಹುದು, ಮನೋದೈಹಿಕ ತೊಂದರೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಬಹುದು, ಜೊತೆಗೆ ನಮ್ಮಲ್ಲಿರುವ ಅಂತರಾತ್ಮವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.




ಯೋಗ ಕೇವಲ ಉತ್ತಮ ಆರೋಗ್ಯದ ಬಗ್ಗೆ ಮಾತ್ರ ಹೇಳುವುದಿಲ್ಲ, ಒಟ್ಟಾರೆ ಉತ್ತಮವಾದ ವ್ಯಕ್ತಿತ್ವದ ಬಗ್ಗೆ ಹೇಳುತ್ತದೆ.

ಯೋಗ ಆಚರಣೆಯು ಸೂರ್ಯ ನಮಸ್ಕಾರ, ಆಸನಗಳು, ಪ್ರಾಣಾಯಾಮ, ವಿಶ್ರಾಂತಿಯ ತಂತ್ರಗಳು, ಬಂಧ ಮತ್ತು ಮುದ್ರ ಮತ್ತು ಧ್ಯಾನ ಸೇರಿದಂತೆ ಕ್ರಿಯೆ (ಶುದ್ಧೀಕರಣದ ಪ್ರಕ್ರಿಯೆಗಳು)ಗಳನ್ನು ಒಳಗೊಂಡಿರುತ್ತದೆ.

**ಸೂರ್ಯ ನಮಸ್ಕಾರ**

ಸೂರ್ಯ ನಮಸ್ಕಾರವು ಬಹಳ ಉಪಯುಕ್ತವಾದ ಮತ್ತು ಜನಪ್ರಿಯವಾದ ಯೋಗದ ವ್ಯಾಯಾಮ. ಇದು ದೇಹದ ವಿವಿಧ ಭಂಗಿಯ ಆಸನಗಳನ್ನು ಹೊಂದಿದ್ದು, ಇವುಗಳನ್ನು ಮುಂಜಾನೆ ಹುಟ್ಟುತ್ತಿರುವ ಸೂರ್ಯನ ಎದುರಿಗೆ ಮಾಡಬೇಕಾಗುತ್ತದೆ. ಈ ಸೂರ್ಯ ನಮಸ್ಕಾರ ದೇಹದ ನರಮಂಡಲ ಮತ್ತು ಸ್ನಾಯುಮಂಡಲಗಳಿಗೆ ಶಕ್ತಿ ನೀಡಿ ಉದ್ದೀಪನಗೊಳಿಸುತ್ತದೆ. ಇದನ್ನು ನಿಯಮಿತವಾಗಿ ಮಾಡುತ್ತಿದ್ದರೆ ರಕ್ತಕ್ಕೆ ಸಮತೋಲನದಲ್ಲಿ ಆಮ್ಲಜನಕವನ್ನು ಸರಬರಾಜು ಮಾಡುತ್ತದೆ ಮತ್ತು ದೇಹದ ಎಲ್ಲ ವ್ಯವಸ್ಥೆಗಳ ನಡುವೆ ಸಮತೋಲನವನ್ನು ಕಾಪಾಡುತ್ತದೆ. ಇದರಿಂದ ಇಡೀ ದೇಹದ ಮನೋದೈಹಿಕ ವ್ಯವಸ್ಥೆ ಚೈತನ್ಯಗೊಳಗಾಗುತ್ತದೆ.

**ಆಸನಗಳು**

ವಿಶೇಷ ರೀತಿಯ ಭಂಗಿಗಳಿಂದ ದೇಹವನ್ನು ಹಿಗ್ಗಿಸುವುದರಿಂದ ದೇಹ ಮತ್ತು ಮನಸ್ಸುಗಳನ್ನು ಸದೃಢಗೊಳಿಸುತ್ತವೆ. ಆಸನಗಳ ಮುಖ್ಯ ಉದ್ದೇಶ ದೇಹದ ಸ್ನಾಯುಗಳ ಸ್ವಾಸ್ಥ್ಯವನ್ನು ವೃದ್ಧಿಸುವುದೇ ಆಗಿದೆ. ದೇಹದ ವಿವಿಧ ಭಂಗಿಗಳ ಆಸನಗಳ ಮೂಲ ಉದ್ದೇಶ ದೇಹದ

ಶ್ರಮತೆಯನ್ನು ಹೆಚ್ಚಿಸುವುದಷ್ಟೇ ಅಲ್ಲ ಮನೋ–ನರದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದೂ ಆಗಿದೆ. ಆಸನಗಳನ್ನು ಕಷ್ಟಪಡದೆ ಸಹಜವಾಗಿ ಮಾಡಬೇಕು ಮತ್ತು ಆಸನಗಳನ್ನು ಕೆಲವು ಸಮಯದವರೆಗೆ ಹಾಗೆ ಮುಂದುವರೆಸಿಕೊಂಡು ಹೋಗಬೇಕು.

### ಪ್ರಾಣಾಯಾಮ

ಪ್ರಾಣಾಯಾಮ ಉಸಿರಾಟದ ವೇಗವನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತದೆ, ಇದು ನರಮಂಡಲದ ಸ್ವಾಭಾವಿಕವಾದ ಸ್ವಪ್ರೇರಣೆಯಿಂದ ಕೂಡಿದ ಉದ್ರೇಕವನ್ನು ನಿಯಂತ್ರಿಸಿ ಒಂದೇ ರೀತಿಯಲ್ಲಿರುವಂತೆ ನೋಡಿಕೊಳ್ಳುವ ಮಾರ್ಗವಾಗಿರುತ್ತದೆ. ಹೆಚ್ಚು ಸಮಯದವರೆಗೆ ಉಸಿರನ್ನು ಸಮಾಧಾನಕರವಾಗಿ ಹಿಡಿದಿಟ್ಟುಕೊಳ್ಳುವುದೇ ಯೋಗದ ಉಸಿರಾಟದ ಅಗತ್ಯವಾದ ಕೌಶಲ್ಯ. ಸ್ವಯಂಚಾಲಿತ ನರಮಂಡಲದ ವ್ಯವಸ್ಥೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವೇ ಉಸಿರಾಟದ ಮುಖ್ಯ ಉದ್ದೇಶ, ಮತ್ತು ಇದರ ಪ್ರಭಾವದಿಂದ ಮನಸ್ಸಿನ ಕೆಲಸವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಮತ್ತು ನಿಯಂತ್ರಿಸುವುದೇ ಆಗಿದೆ. ಧ್ಯಾನದಂತಹ ಉನ್ನತ ಮಟ್ಟದ ಅಭ್ಯಾಸ ಬಹಳ ಉಪಕಾರಿಯಾಗಿದೆ.

### ಧ್ಯಾನ

ಯಾವ ರೀತಿಯ ಅಡೆತಡೆಗಳಿಲ್ಲದೆ ಸತತವಾಗಿ ಯಾವ ಕಡೆ ಮನಸ್ಸು ಹರಿಯುತ್ತಿದ್ದರೂ ಅದನ್ನು ನಿಯಂತ್ರಿಸುವುದೇ ಧ್ಯಾನ. ಧ್ಯಾನದ ಮುಖ್ಯ ಉದ್ದೇಶ ಆಂತರಿಕವಾಗಿ ಅರಿವು ಮೂಡಿಸುವುದು. ಈ ಆಚರಣೆಯು ಮನಸ್ಸಿನ ಚಟುವಟಿಕೆಗಳನ್ನು ನಿಯಂತ್ರಿಸುವುದನ್ನು ಒಳಗೊಂಡಿದ್ದು, ಬಾಹ್ಯ ಪ್ರಪಂಚದಲ್ಲಿರುವ ವಸ್ತುಗಳ ಮೇಲೆ ಇಂದ್ರಿಯಗಳಿಗಿರುವ ಮೋಹವನ್ನು ಪ್ರಾರಂಭಿಕ ಹಂತದಿಂದಲೇ ಹಿಂದೆ ಸರಿಸುವುದೇ ಆಗಿದೆ. ಇದು ವ್ಯಕ್ತಿಯು ತನ್ನ ಮನಸ್ಸನ್ನು ಕೇಂದ್ರೀಕರಿಸುವುದರ ಮುಖಾಂತರ ಅನುಭವವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಾಗಿದೆ. ನಿಯಮಿತವಾಗಿ ಹಾಗೂ ಸತತವಾಗಿ ಧ್ಯಾನ ಮಾಡುವುದರಿಂದ, ವ್ಯಕ್ತಿ ಗಾಢವಾದ ಏಕಾಗ್ರತೆಯನ್ನು ಸಾಧಿಸಿ, ದೈಹಿಕ ಸಾಮರ್ಥ್ಯ, ಮಾನಸಿಕ ದಕ್ಷತೆ,



ಕ್ರಿಯಾಶೀಲತೆ, ಸಮಾಧಾನ, ಬುದ್ಧಿಶಕ್ತಿ ಮಾನಸಿಕಶಕ್ತಿ ಮತ್ತು ಒಳ ಅರಿವುಗಳ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

### ಆರೋಗ್ಯ ಅಂದರೆ ಏನು?

ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಅರ್ಥ ವಿವರಣೆಗಳಿವೆ, ಆದರೆ ವಿಶ್ವ ಆರೋಗ್ಯ ಸಂಸ್ಥೆಯ ಸಂವಿಧಾನದ ಮುನ್ನುಡಿಯಲ್ಲಿ ನಮೂದಿಸಿರುವುದನ್ನು ಎಲ್ಲ ಕಡೆ ನಮೂದಿಸಲಾಗುತ್ತಿದೆ. ಆ ಮುನ್ನುಡಿ ಹೀಗಿದೆ: ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕವಾಗಿ ಸ್ವಾಸ್ಥ್ಯದಿಂದಿರುವುದೇ ಆರೋಗ್ಯ ಎಂದು ಹೇಳಲಾಗಿದೆ.

### ಯೋಗ ಮತ್ತು ಯೌವನ

ಯೋಗ ಒಂದು ವಿಜ್ಞಾನವಾಗಿದ್ದು ಆರೋಗ್ಯಕರ ಬದುಕಿಗೆ ಕಲೆ ಇದ್ದ ಹಾಗೆ. ಅನಾರೋಗ್ಯದಿಂದ ದೂರ ಇದ್ದು ಆರೋಗ್ಯಕರವಾಗಿರಬೇಕು ಎಂಬ ಇಚ್ಛೆ ಉಳ್ಳವರು ಇದನ್ನು ಇಷ್ಟಪಡುತ್ತಾರೆ. ಯೋಗ ನಿಜವಾಗಿಯೂ ಇತರೆ ಅನುಕೂಲಗಳ ಜೊತೆಗೆ ಆಂತರಿಕ ನೈಪುಣ್ಯತೆ ಮತ್ತು ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ. ಇದು ಜೀವನಶೈಲಿಯಲ್ಲಿ ಸಂಪೂರ್ಣವಾದ ಬದಲಾವಣೆಗಳನ್ನು ಮಾಡುತ್ತದೆ ಎಂದು ಹೇಳಬಹುದು.

ಯುವಜನರಿಗೆ ಯೋಗ ಬಹಳ ಅಗತ್ಯವಿದೆ. ಯುವ ಜನತೆ ತಮ್ಮ ಜೀವನದಲ್ಲಿ ವ್ಯಾಸಂಗಕ್ಕೆ ಅಥವಾ ಉದ್ಯೋಗಕ್ಕೆ ಸಂಬಂಧಿಸಿದಂತೆ ಅನೇಕ ಸವಾಲುಗಳನ್ನು ಎದುರಿಸುತ್ತಾರೆ. ದಿನ ನಿತ್ಯದ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುವಲ್ಲಿ ಯೋಗವು ಅವರನ್ನು ನಿಜವಾದ ಯೋಗಿಗಳನ್ನಾಗಿಸುತ್ತದೆ. ಯೋಗವು ವ್ಯಕ್ತಿಯಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ, ನೈತಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕವಾದ ವ್ಯಕ್ತಿತ್ವವನ್ನು ಬೆಳೆಸಿ ಕೊನೆಗೆ ಸಂಪೂರ್ಣವಾದ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಯೋಗವು ವ್ಯಕ್ತಿಯ ಎಲ್ಲ ಆಯಾಮಗಳ ಮೇಲೆ ಪರಿಣಾಮ ಬೀರಿ ಏಕಾಗ್ರತೆ ಮತ್ತು ಸಹನಾ ಶಕ್ತಿಯನ್ನು ವೃದ್ಧಿಸುತ್ತದೆ ಮತ್ತು ಈಗಿನ ದಿನನಿತ್ಯದ ಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಸಮಾಧಾನವನ್ನು ತಂದುಕೊಡುತ್ತದೆ.

ಭಾರತ 125 ಕೋಟಿ ಜನಸಂಖ್ಯೆಯನ್ನು ಹೊಂದಿದ್ದು, ಅದರ ಅಭಿವೃದ್ಧಿ ಅದರ ಆರೋಗ್ಯದ ಮೇಲೆ ನಿಂತಿದೆ. ದೇಶದ ಆರೋಗ್ಯ ತೀರಾ ಕಳಪೆಯಾಗಿದ್ದರೆ ಅದರ ಅಭಿವೃದ್ಧಿಯೂ ನಿಧಾನವಾಗಿ, ಕಳಪೆಯಾಗಿರುತ್ತದೆ. ದೇಶದ ಆರೋಗ್ಯವನ್ನು ಸುಧಾರಿಸಬೇಕಾದರೆ ಸಾಕಷ್ಟು ಸಂಪನ್ಮೂಲ ಮತ್ತು ಶಕ್ತಿಯನ್ನು ವ್ಯಯಿಸಬೇಕಾಗುತ್ತದೆ. ಆದರೆ ದೇಶದ ಆರೋಗ್ಯ ಚೆನ್ನಾಗಿದ್ದರೆ, ಅಂದರೆ ಯುವಜನತೆ ಉತ್ತಮವಾದ ಆರೋಗ್ಯದಿಂದಿದ್ದರೆ ದೇಶ ಹೆಚ್ಚು ಆಯಾಸಕ್ಕೊಳಗಾಗದೆ ಬಹಳ ದೂರವನ್ನು ಕ್ರಮಿಸಬಹುದು. ಆದ್ದರಿಂದ ದೇಶದ ಬೆಳವಣಿಗೆಗೆ ಯುವ ಜನತೆಯ ಆರೋಗ್ಯ ಉತ್ತಮವಾಗಿರುವುದು ಬಹಳ ಮುಖ್ಯವಾಗುತ್ತದೆ.

ಯೋಗ ಪ್ರಮುಖವಾಗಿ ಒಂದು ಆಧ್ಯಾತ್ಮಿಕವಾದ ಜ್ಞಾನ, ಜೊತೆಗೆ ಆರೋಗ್ಯಕರವಾದ ಬದುಕಿನ ವಿಜ್ಞಾನ. ಅದು ರೋಗ ಬರದಂತೆ ತಡೆಯುವ ಮತ್ತು ಆರೋಗ್ಯವನ್ನು ವೃದ್ಧಿಸುವ ಸಾಮರ್ಥ್ಯವನ್ನು ಹೊಂದಿದೆ. ಸಮಗ್ರವಾದ ಯೋಗ ಜೀವನದ ಎಲ್ಲ ಆಯಾಮಗಳಲ್ಲಿ ಹೊಂದಾಣಿಕೆಯನ್ನು ತಂದು ನಮ್ಮ ದಿನನಿತ್ಯದ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ದಿನನಿತ್ಯ ಸತತವಾಗಿ ಅಭ್ಯಾಸ ಮಾಡುತ್ತಾ ಬಂದರೆ ವ್ಯಕ್ತಿಯ ನಡವಳಿಕೆ ಮತ್ತು ಮನೋಭಾವದಲ್ಲಿ ಬದಲಾವಣೆಯಾಗಿ ವ್ಯಕ್ತಿಗಳ ಸಂಬಂಧಗಳಲ್ಲಿ ಪ್ರಮುಖವಾಗಿ ಮನೆ ಮತ್ತು ಸಮಾಜದಲ್ಲಿ ಸುಧಾರಣೆ ತರುತ್ತದೆ. ಇದರ ಚಿಕಿತ್ಸಾತ್ಮಕ ಅನುಕೂಲಗಳು ಸಾಕಷ್ಟಿವೆ ಎಂಬುದು ವಿಶ್ವದಾದ್ಯಂತ ನಡೆಸಿರುವ ಸಂಶೋಧನೆಗಳಿಂದ ತಿಳಿದು ಬಂದಿದೆ. ಮಾನಸಿಕವಾದ ಮತ್ತು

ಮನೋದೈಹಿಕ ತೊಂದರೆಗಳು ಸೇರಿದಂತೆ ಜೀವನಶೈಲಿಯ ಅನೇಕ ತೊಂದರೆಗಳನ್ನು ತಡೆಯುವಲ್ಲಿ ಮತ್ತು ಅವುಗಳನ್ನು ನಿಭಾಯಿಸುವಲ್ಲಿ ಅದರಲ್ಲಿರುವ ಶಕ್ತಿಯಿಂದ ಯೋಗ ಮಹತ್ತರವಾದ ಪಾತ್ರ ವಹಿಸುತ್ತಿದೆ.

**ಯೋಗ ಮತ್ತು ಸಂಶೋಧನೆ**

ಅನೇಕ ಮನೋದೈಹಿಕ ಮತ್ತು ಜೀವನಶೈಲಿಗೆ ಸಂಬಂಧಿಸಿದಂತಹ ತೊಂದರೆಗಳನ್ನು ವ್ಯವಸ್ಥಿತವಾಗಿ ನಿಭಾಯಿಸಲು ಯೋಗ ಚಿಕಿತ್ಸಾ ವಿಧಾನ ಯಶಸ್ವಿಯಾಗಿದೆ ಎಂಬುದು ಅನೇಕ ಚಿಕಿತ್ಸಾ ಅಧ್ಯಯನಗಳಿಂದ ದೃಢಪಟ್ಟಿದೆ. ಸಾಂಕ್ರಾಮಿಕವಲ್ಲದ ಕಾಯಿಲೆಗಳನ್ನು ಆಕ್ರಮಣಕಾರಿಯಲ್ಲದ ಯೋಗ ವಿಧಾನದಿಂದ ನಿಭಾಯಿಸಬಹುದು ಎಂಬುದನ್ನು ಈಗ ಒಪ್ಪಿಕೊಳ್ಳಲಾಗಿದೆ. ದಿನನಿತ್ಯದ ಜೀವನಶೈಲಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಈ ಕಾಯಿಲೆಗಳು ಬರದಂತೆ ತಡೆಯಬಹುದಾಗಿದೆ. ಷಟ್ಕರ್ಮ, ಆಸನಗಳು, ಸೂರ್ಯ ನಮಸ್ಕಾರ, ಪ್ರಾಣಾಯಾಮ, ಧ್ಯಾನಗಳನ್ನೊಳಗೊಂಡ ಯೋಗಾಭ್ಯಾಸದ ಜೊತೆಗೆ ಪ್ರಕೃತಿ ಚಿಕಿತ್ಸಾ ಪದ್ಧತಿಯ ಉಪವಾಸ, ಪಥ್ಯ, ಮಣ್ಣು ಚಿಕಿತ್ಸೆ, ಜಲಚಿಕಿತ್ಸೆ ಅಂಗಮರ್ಧನ, ವಾಯು ಮತ್ತಿತರ ಚಿಕಿತ್ಸೆಗಳಿಂದ ರೋಗರಹಿತ, ಆರೋಗ್ಯಕರವಾದ ಸಂತೋಷದಾಯಕವಾದ ಜೀವನ ನಡೆಸಬಹುದು.

ಈಗಿನ ದಿನಗಳಲ್ಲಿ ಯುವ ಜನತೆಯನ್ನು ಸಾಮಾನ್ಯ ಸಮಸ್ಯೆಗಳಾದ ಹೆಚ್ಚಿನ ರಕ್ತದೊತ್ತಡ, ಹೃದಯಸಂಬಂಧಿ ಸಮಸ್ಯೆಗಳು, ಮಧುಮೇಹ, ಒತ್ತಡ, ನಿದ್ರಾಹೀನತೆ ಕಾಡುತ್ತಿವೆ. ಹೃದಯಕ್ಕೆ ರಕ್ತ



ಸರಬರಾಜು ಮಾಡುವ ರಕ್ತನಾಳಗಳ ಸಮಸ್ಯೆಯಿಂದ ಬಳಲುತ್ತಿರುವವರು ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಯೋಗಾಭ್ಯಾಸವನ್ನು ಮಾಡಿದರೆ ಆ ಸಮಸ್ಯೆಯಿಂದ ಹೊರಬರಬಹುದು ಎಂಬುದು ಅಧ್ಯಯನಗಳಿಂದ ಸಾಬೀತಾಗಿದೆ. ಯೋಗಾಭ್ಯಾಸ ಮಾಡಿದ ನಂತರ ಗಂಟಲು ಊತ, ದೇಹದ ಭಾರ, ಮೇದಸ್ಸಿನ ಪ್ರಮಾಣ, ಹೃದಯಕ್ಕೆ ರಕ್ತ ಸರಬರಾಜು ಮಾಡುವ ರಕ್ತ ನಾಳಗಳಲ್ಲಿ ರಕ್ತ ಹೋಗಲು ಅಡ್ಡಿಯಾಗಿರುವ ಊತಗಳು ಕಡಿಮೆಯಾಗಿರುವುದು ಕಂಡು ಬಂದಿದೆ. ಯೋಗ ಮಾಡಲು ಪ್ರಾರಂಭಿಸಿದ ನಂತರ ಹೃದಯ ಸಂಬಂಧಿ ತೊಂದರೆಗಳಿಂದ ನರಳುತ್ತಿದ್ದವರಿಗೆ ರಕ್ತನಾಳ ಬೈಪಾಸ್ ಶಸ್ತ್ರಚಿಕಿತ್ಸೆ ಅಥವಾ ಅಂಜಿಯೋಪ್ಲಾಸ್ಟಿ ಮಾಡಿಸುವ ಪ್ರಕರಣಗಳು ಕಡಿಮೆಯಾಗಿವೆ. ಹೃದಯಕ್ಕೆ ರಕ್ತ ಸರಬರಾಜು ಮಾಡುವ ರಕ್ತನಾಳಗಳ ತೊಂದರೆಯಿಂದ ಬಳಲುತ್ತಿದ್ದ ರೋಗಿಗಳು ತೀರಾ ಅಪಾಯದ ಮಟ್ಟ ತಲುಪಿದ್ದರೂ, ಯೋಗಾಭ್ಯಾಸದ ಜೀವನ ಕ್ರಮವನ್ನು ಅಳವಡಿಸಿಕೊಂಡ ನಂತರ ಅವರ ಸಮಸ್ಯೆ ಬಗೆಹರಿದ ಅನೇಕ ಪ್ರಕರಣಗಳು ವರದಿಯಾಗಿವೆ. ಯುವಕರ ಆರೋಗ್ಯದಲ್ಲಿ ಆಹಾರ ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ. ಉತ್ತಮವಾದ ಆರೋಗ್ಯ ಮತ್ತು ಒತ್ತಡರಹಿತ ಜೀವನ ಸಾಗಿಸಬೇಕಾದರೆ 'ಡಯಟ್' ಮಾಡುವುದು ಒಳ್ಳೆಯದಲ್ಲ. ಸಂರಕ್ಷಿಸಿದ ಆಹಾರ, ಫಾಸ್ಟ್‌ಫುಡ್, ಜಂಕ್ ಫುಡ್, ಹೆಚ್ಚು ಕೆಲೋರಿಯ ಡಯಟ್, ಧೂಮಪಾನ, ಮದ್ಯಪಾನ ಡ್ರಗ್ ಸೇವನೆ, ಸರಿಯಾದ ವಿಶ್ರಾಂತಿ ಮತ್ತು ವ್ಯಾಯಾಮ ಇಲ್ಲದಿರುವುದು ವ್ಯಕ್ತಿಯಲ್ಲಿ ಅಸಮಾಧಾನಕ್ಕೆ ಎಡೆಮಾಡಿಕೊಡುತ್ತವೆ. ಇದರಿಂದ ಹಲವಾರು ಮನೋದೈಹಿಕ ಕಾಯಿಲೆಗಳಾದ ಮಧುಮೇಹ, ರಕ್ತದೊತ್ತಡ, ಕೀಲುನೋವು, ಬೆನ್ನುನೋವು ಮತ್ತಿತರ ಸಮಸ್ಯೆಗಳು ಅಮರಿಕೊಳ್ಳುತ್ತವೆ. ಇದರಿಂದ ಮಾನಸಿಕ ಕಾಯಿಲೆಗಳಿಂದ ನರಳುವವರ ಸಂಖ್ಯೆ ಹೆಚ್ಚಾಗುತ್ತದೆ. ಬಹಳ ಜನ ಖಿನ್ನತೆ, ಸ್ಕಿಜೋಫ್ರೀನಿಯಾ, ಮದ್ಯಪಾನ ಮತ್ತು ಡ್ರಗ್ಸ್ ಸೇವನೆಗೆ ಸಂಬಂಧಿಸಿದ ತೊಂದರೆಗಳಿಂದ ಬಳಲುತ್ತಿದ್ದಾರೆ. ಈ ರೋಗಿಗಳಿಗೆ ದೇಹ ಮತ್ತು ಮನಸ್ಸಿಗೆ ಯೋಗದ ಮುಖಾಂತರ ಚಿಕಿತ್ಸೆ ನೀಡಿ ಯಾವುದೇ ರೀತಿಯ ಔಷಧ ದುಷ್ಪರಿಣಾಮ ಇಲ್ಲದೆ ಗುಣಪಡಿಸಲು ಸಾಧ್ಯವೆಂದು ತಿಳಿಸಲಾಗಿದೆ.

ಆದ್ದರಿಂದ ಯುವಕರು ತಮ್ಮ ಆರೋಗ್ಯದ ಸಮಸ್ಯೆಗಳಿಂದ ಹೊರಬರಲು ಪರಿಣಾಮಕಾರಿಯಾದ ಯೋಗ ಚಿಕಿತ್ಸೆ ಪಡೆದು ದೇಶದ ಬೆಳವಣಿಗೆಯ ಭಾಗವಾಗಬಹುದು. ಯೋಗ ಸಕಾರಾತ್ಮಕ ಆರೋಗ್ಯವನ್ನು ಕೊಡುತ್ತದೆ ಮತ್ತು ಸಕಾರಾತ್ಮಕ ನಡಾವಳಿಕೆಯನ್ನು ಬೆಳೆಸುತ್ತದೆ. ಯೋಗ ಮಾಡುವುದರಿಂದ ದೇಹ ಮತ್ತು ಮನಸ್ಸುಗಳ ಆರೋಗ್ಯದಲ್ಲಿ ಸಮತೋಲನ ಸಾಧಿಸಿಕೊಂಡು ಉತ್ತಮವಾದ ಜೀವನದನ್ನು ಸಾಗಿಸಬಹುದು. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ–ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : kannada-yojana@gov.in ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ದೇಹ – ಆತ್ಮ – ಸಾಕ್ಷಾತ್ಕಾರ

* ಈಶ್ವರ ವಿ. ಬಸವರಡ್ಡಿ



ಯೋಗ
ನಮ್ಮ ನರವ್ಯವಸ್ಥೆಯನ್ನು
ಚುರುಕುಗೊಳಿಸುವುದರಿಂದ
ಅದು ಆರೋಗ್ಯದಲ್ಲಿ
ಸಮತೋಲನ
ಕಾಯ್ದುಕೊಳ್ಳುವುದರ ಜೊತೆಗೆ
ಸಹಜವಾಗಿಯೇ ಇನ್ನಷ್ಟು
ಕ್ರಿಯಾಶೀಲಗೊಳಿಸುತ್ತದೆ.
ನಮ್ಮ ದೇಹ
ಒತ್ತಡಕ್ಕೊಳಗಾಗಿದೆ
ಎಂಬ ಭಾವನೆ ಇದ್ದರೂ
ಅದಕ್ಕೆ ಅವಕಾಶ ಮಾಡಿಕೊಡದೆ
ದೇಹ ಹಾಗೂ ಮನಸ್ಸನ್ನು
ಪ್ರಫುಲ್ಲವಾಗಿಡುತ್ತದೆ.

ಮಕ್ಕಳು ಮತ್ತು ಯುವಜನತೆ ತಮ್ಮ ಸ್ವಂತ ಶಕ್ತಿಯಿಂದ ಜೀವನ ರೂಪಿಸಿಕೊಳ್ಳಲು ಪ್ರೋತ್ಸಾಹಿಸುವ ಪ್ರಕ್ರಿಯೆಯೇ ಯುವ ಜನಾಂಗದ ಸಬಲೀಕರಣವಾಗಿದೆ. ಯುವ ಜನತೆ ತಮ್ಮ ವಾಸ್ತವ ಸ್ಥಿತಿಗತಿಯನ್ನು ಅರಿತು ಹೆಚ್ಚಿನ ಸಂಪನ್ಮೂಲ ಹೊಂದುವತ್ತ ಕ್ರಿಯಾಶೀಲವಾಗುವುದು; ಆ ಮೂಲಕ ತಮ್ಮ ವಿವೇಚನಾಶಕ್ತಿಯನ್ನು ನಂಬಿಕೆ, ಮೌಲ್ಯ ಮತ್ತು ವರ್ತನೆಗಳಿಂದ ಬದಲಾಯಿಸಿಕೊಳ್ಳುವುದು ಇದರಲ್ಲಿ ಸೇರಿದೆ. ಯುವ ಸಬಲೀಕರಣದ ಅಂತಿಮ ಗುರಿ ಜೀವನದ ಗುಣಮಟ್ಟ ಸುಧಾರಿಸುವುದಾಗಿದೆ. ಯುವ ಸಬಲೀಕರಣ ಸಾಧಿಸಬೇಕಾದರೆ ಈ ಕಾರ್ಯಕ್ರಮಗಳಲ್ಲಿ ಯುವ ಜನರ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಗತ್ಯ.

ಯುವಜನ ಸಬಲೀಕರಣ ಎನ್ನುವುದು ಯುವಜನರ ಅಭಿವೃದ್ಧಿಗಿಂತ ಭಿನ್ನ. ಏಕೆಂದರೆ ಅಭಿವೃದ್ಧಿಯಲ್ಲಿ ವೈಯಕ್ತಿಕ ಅಭಿವೃದ್ಧಿಯನ್ನು ಮಾತ್ರ ಗುರಿಯಾಗಿರಿಸಿಕೊಳ್ಳಲಾಗಿರುತ್ತದೆ. ಆದರೆ, ಸಬಲೀಕರಣ ಎಂದರೆ ಯುವಜನರಲ್ಲಿ ಸ್ವಯಂಬದ್ಧತೆಯನ್ನು ಹಾಗೂ ಹೊಣೆಗಾರಿಕೆಯನ್ನು ಹೆಚ್ಚಿಸಲು ನೆರವು ನೀಡುವ ಕ್ರಮಗಳನ್ನು ಕೈಗೊಳ್ಳುವುದಾಗಿದೆ. ಯುವಜನರು ತಮ್ಮ ಸ್ವಂತ ನಿರ್ಧಾರದ ಮೇಲೆ ಸ್ವಪ್ರೇರಣೆಯಿಂದ ಜವಾಬ್ದಾರಿ ಹಾಗೂ ಹಿತಾಸಕ್ತಿಗಳನ್ನು ಸಮಾಜದಲ್ಲಿ ಪ್ರದರ್ಶಿಸುವುದಾಗಿದೆ.

ಯುವ ಜನಾಂಗದ ಸಬಲೀಕರಣದ ಸಿದ್ಧಾಂತವನ್ನು ವಿಭಜಿಸುವುದಾದರೆ ಅವುಗಳನ್ನು ಮೂರು ಬಗೆಯಲ್ಲಿ ಕಾಣಬಹುದು: ವೈಯಕ್ತಿಕ ಸಬಲೀಕರಣ, ಸಾಂಸ್ಥಿಕ ಸಬಲೀಕರಣ ಮತ್ತು ಸಮುದಾಯದ ಸಬಲೀಕರಣ.

1. ವೈಯಕ್ತಿಕ ಸಬಲೀಕರಣ: ಯುವ ಜನಾಂಗ ಅಥವಾ ವಯಸ್ಕರಲ್ಲಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿ, ಅವರಲ್ಲಿನ ಸಾಮರ್ಥ್ಯವನ್ನು ಸುಧಾರಿಸುವುದು. ಸಮುದಾಯಗಳ ಮತ್ತು ಸಂಸ್ಥೆಗಳ ಶ್ರೇಯೋಭಿವೃದ್ಧಿಗಾಗಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತಹ ಜಾಗೃತಿಯನ್ನು ಅವರಲ್ಲಿ ಅಭಿವೃದ್ಧಿಗೊಳಿಸುವುದು.

2. ಸಾಂಸ್ಥಿಕ ಸಬಲೀಕರಣ: ಯುವಜನತೆ ಮತ್ತು ವಯಸ್ಕರಲ್ಲಿ ತಮ್ಮ ಜೀವನದ ಮೇಲೆ ನಿಯಂತ್ರಣ ಹೊಂದುವಂತಹ ಕೌಶಲ್ಯಗಳನ್ನು ಕಲಿಸುವುದು ಮತ್ತು ಅದರಿಂದಾಗುವ ಪ್ರಯೋಜನಗಳನ್ನು ತಿಳಿಸಿಕೊಡುವುದು. ಸೇವಾ ಆಯ್ಕೆಯ ಪರಿಹಾರಗಳ ಬಗ್ಗೆ ಮನವರಿಕೆ ಮಾಡಿಕೊಡುವುದರ ಜೊತೆಗೆ ನೀತಿ ನಿರ್ಧಾರಗಳನ್ನು ಕೈಗೊಳ್ಳುವಂತಹವರ ಮೇಲೆ ಪ್ರಭಾವ ಬೀರುವಂತಹ ಗುಣಗಳನ್ನು ಬೆಳೆಸುವುದು.

3. ಸಮುದಾಯದ ಸಬಲೀಕರಣ: ಸಮುದಾಯಗಳ ಸುಧಾರಣೆಗೆ ಪ್ರಯತ್ನಿಸುವುದು. ಜೀವನ ಗುಣಮಟ್ಟಕ್ಕೆ ಇರುವ ಅಪಾಯಗಳ ಬಗ್ಗೆ ಪ್ರತಿಕ್ರಯಿಸುವಂತಹ ಗುಣ ತಿಳಿಸುವುದು ಮತ್ತು ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವುದು.

### ಯುವಕರ ಮೇಲೆ ಪರಿಣಾಮ ಬೀರುವ ಸಾಮಾನ್ಯ ಆರೋಗ್ಯ ವಿಷಯಗಳು

ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ತಿಳಿದು ಬರುವ ಸಂಗತಿ ಎಂದರೆ ವೈಯಕ್ತಿಕ ಕಾರಣಗಳು, ಪರಿಸರದ ಪ್ರಭಾವ, ಜೀವನಶೈಲಿ ಬದಲಾವಣೆ ಮತ್ತಿತರ ಕಾರಣಗಳಿಂದ

* ನಿರ್ದೇಶಕರು, ಮೊರಾರ್ಜಿ ದೇಸಾಯಿ, ರಾಷ್ಟ್ರೀಯ ಯೋಗ ಸಂಸ್ಥೆ, ಆಯುಷ್ ಸಚಿವಾಲಯ, ಭಾರತ ಸರ್ಕಾರ. E-mail : ibasavaraddi@yahoo.co.in


ಯುವಜನತೆ ಹಲವಾರು ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆನ್ನುವುದು. ಇದರಲ್ಲಿ ಸಾಂಕ್ರಾಮಿಕ ರೋಗಗಳು ಮತ್ತು ಸಾಂಕ್ರಾಮಿಕವಲ್ಲದ ರೋಗಗಳು ಮತ್ತು ಗಾಯಗಳು ಸೇರಿವೆ. ಯುವಜನತೆ ಎದುರಿಸುತ್ತಿರುವ ಸಮಸ್ಯೆಗಳು ಕೇವಲ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಲ್ಲ, ಮಾನಸಿಕ ಸಮಸ್ಯೆಗಳೂ ಇವೆ. ಹದಗೆಟ್ಟ ಸಂಬಂಧಗಳು ಹಾಗೂ ಏಕಾಂಗಿತನದ ನೋವು ಅವರನ್ನು ಮಾದಕ ದ್ರವ್ಯಗಳು ಹಾಗೂ ಮದ್ಯಪಾನ ಮತ್ತಿತರ ಚಟಗಳತ್ತ ಪ್ರೇರೇಪಿಸುತ್ತವೆ. ಇನ್ನಿತರ ಪ್ರಮುಖ ಸಮಸ್ಯೆಗಳೆಂದರೆ ಅಧಿಕ ಒತ್ತಡ, ಕೌಟುಂಬಿಕ ಹೊಣೆಗಾರಿಕೆ ಮತ್ತು ಅತ್ಯಧಿಕ ಕೆಲಸ. ಯುವಕರಿಗೆ ಸಮರ್ಪಕ ಮಾರ್ಗದರ್ಶನ ಮತ್ತು ಆರೈಕೆಯ ಕೊರತೆಯಿಂದಾಗಿ ಯುವಜನತೆ ತಮ್ಮ ಜೀವನವನ್ನು ತಾವೇ ಅಂತ್ಯ ಮಾಡಿಕೊಳ್ಳಲು ಮುಂದಾಗುತ್ತಾರೆ.

**ಯುವಜನತೆ ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಈ ಕೆಳಗಿನಂತಿವೆ:**

* ಅಧಿಕ ತೂಕ ಮತ್ತು ಬೊಜ್ಜು. * ಒತ್ತಡ. * ಆತಂಕ ಮತ್ತು ಮಾನಸಿಕ ಖಿನ್ನತೆ. * ಯುವಕರಲ್ಲಿನ ವೈಯಕ್ತಿಕ ಹಿಂಸಾ ಮನೋಭಾವ. * ಆತ್ಮಹತ್ಯೆ ಪ್ರವೃತ್ತಿ. * ತಂಬಾಕು ಬಳಕೆ. * ಮದ್ಯಪಾನ ಮತ್ತು ಮಾದಕದ್ರವ್ಯ ಸೇವನೆ ಚಟ. * ಸಾಂಕ್ರಾಮಿಕವಲ್ಲದ ರೋಗಗಳು.

**ಯುವ ಸಬಲೀಕರಣಕ್ಕೆ ಯೋಗ**

ಆಸನ ಮತ್ತು ಪ್ರಾಣಾಯಾಮ ವಿಶೇಷ ಭಂಗಿಗಳಾಗಿದ್ದು, ಅವು ದೈಹಿಕ ಹಾಗೂ ಮಾನಸಿಕ ಆರೋಗ್ಯ ರಕ್ಷಣೆಗೆ ಸಹಕಾರಿಯಾಗಿವೆ. ಇವುಗಳಿಂದ ದೈಹಿಕ ಸಾಮರ್ಥ್ಯ ಸುಧಾರಿಸುವುದಲ್ಲದೆ, ದೇಹದಲ್ಲಿರುವ ವಿಷಕಾರಿ ವಸ್ತುಗಳನ್ನು ಹೊರಹಾಕಲ್ಪಡುತ್ತವೆ. ದೇಹ ಮತ್ತು ಮನಸ್ಸನ್ನು ಉಲ್ಲಸಿತಗೊಳಿಸುತ್ತದೆ. ಒತ್ತಡವನ್ನು ನಿವಾರಿಸುತ್ತದೆ ಮತ್ತು ನರವ್ಯವಸ್ಥೆಯ ಮೇಲೆ ಸಮತೋಲನ ತರುವ ಮೂಲಕ ಸಾಂಕ್ರಾಮಿಕವಲ್ಲದ ರೋಗಗಳು ತಗುಲುವುದನ್ನು ನಿಯಂತ್ರಿಸುತ್ತದೆ. ಆದ್ದರಿಂದ ಆಸನ ಮತ್ತು ಪ್ರಾಣಾಯಾಮ ಈ ಎಲ್ಲ ಅಂಶಗಳಿಗೆ ನೆರವಾಗಲಿದೆ. ಅವುಗಳೆಂದರೆ




* ಒತ್ತಡವನ್ನು ನಿವಾರಿಸಿ, ಆತಂಕವನ್ನು ದೂರ ಮಾಡುತ್ತದೆ.
* ಸಕಾರಾತ್ಮಕ ಶಕ್ತಿಯನ್ನು ಉತ್ತೇಜಿಸಿ ಮನಸ್ಥಿತಿಯನ್ನು ಸಮಗೊಳಿಸುತ್ತದೆ.
* ರಕ್ತದೊತ್ತಡವನ್ನು ಸಹಜಸ್ಥಿತಿಗೆ ತರಲು ನೆರವಾಗುತ್ತದೆ.
* ಮಾಂಸಖಂಡಗಳ ಅಂಗಮರ್ಧನ–ದಿಂದಾಗಿ ಜೀರ್ಣ ಪ್ರಕ್ರಿಯೆ ಚುರುಕುಗೊಳ್ಳುತ್ತದೆ.
* ಸದಾ ಧ್ಯಾನಸ್ಥ ಮತ್ತು ಆರೋಗ್ಯಸ್ಥಿತಿಯಲ್ಲಿ ಇರುವಂತಹ ಭಾವನೆ ಮೂಡಿಸುತ್ತದೆ.
* ಒತ್ತಡವನ್ನು ತಗ್ಗಿಸುವುದರಿಂದ ಅಧಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆಗಳನ್ನು ತಗ್ಗಿಸುತ್ತದೆ.
* ಹೃದಯದ ಬಡಿತವನ್ನು ಹಾಗೂ ಉಸಿರಾಟವನ್ನು ಸುಸ್ಥಿತಿಗೆ ತಂದು ರಕ್ತದ ಒತ್ತಡವನ್ನು ಸಹಜಸ್ಥಿತಿಗೆ ತರುತ್ತದೆ.
* ಆಮ್ಲಜನಕವನ್ನು ಪರಿಣಾಮ–ಕಾರಿಯಾಗಿ ಬಳಕೆ ಮಾಡಬಹುದು.
* ಗ್ರಂಥಿಗಳಿಂದ ಕಡಿಮೆ ಕ್ರೋಸ್ಟಿಸೋಲ್ ಉತ್ಪತ್ತಿಯಾಗುತ್ತದೆ.
* ರೋಗನಿರೋಧಕ ಶಕ್ತಿ ಸುಧಾರಿಸುತ್ತದೆ.

**ಒತ್ತಡ ನಿವಾರಣೆಗೆ ಯೋಗ**

ಒತ್ತಡದಿಂದಾಗಿ ನರವ್ಯವಸ್ಥೆಯಲ್ಲಿ ಅಸಮತೋಲನ ಉಂಟಾಗಿ ಅದು ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ. ಜೊತೆಗೆ ನರ ವ್ಯವಸ್ಥೆಯಲ್ಲೂ ಸಮಸ್ಯೆಯಾಗುತ್ತವೆ. ಒಬ್ಬ ವ್ಯಕ್ತಿಯ ಸಾಮರ್ಥ್ಯ ಮತ್ತು ಸವಾಲು ನಡುವಿನ ತಪ್ಪು ಹೊಂದಾಣಿಕೆಯಿಂದ ಒತ್ತಡದ ಅನುಭವವಾಗುತ್ತದೆ. ಇದು ಒಬ್ಬರ ಭಾವನಾತ್ಮಕ ಮತ್ತು ಮಾನಸಿಕ ಕ್ರಿಯೆಯ ಮೇಲೆ ಪರಿಣಾಮಬೀರಿ ಅದು ಹೊರಗಿನ ಪರಿಸ್ಥಿತಿಯಲ್ಲೂ ಕಾಣಬಹುದು. ಒಬ್ಬ ವ್ಯಕ್ತಿ ಸತತವಾಗಿ ಒತ್ತಡ ಅನುಭವಿಸಿದರೆ, ಆತ ಅಥವಾ ಆಕೆಯ ದೇಹದಲ್ಲಿನ ನರವ್ಯವಸ್ಥೆ ಕ್ರಮೇಣ ಅಧಿಕ ಒತ್ತಡದ ಸ್ಥಿತಿಗೆ ವರ್ಗಾವಣೆಗೊಳ್ಳಬಹುದು. ಈ ಹಂತದಲ್ಲಿ ನರರೋಗ ವ್ಯವಸ್ಥೆಯ ಸಹಜ ಚಟುವಟಿಕೆಗಳು ಕುಸಿಯುತ್ತವೆ ಮತ್ತು ಆ ವ್ಯಕ್ತಿಯ ಚಟುವಟಿಕೆಗಳ ಮೇಲೆ ಪರಿಣಾಮಬೀರಿ, ಅವರು ಸಾಮಾನ್ಯ ಸ್ಥಿತಿಯಲ್ಲಿ ಇರದಂತೆ ಮಾಡುತ್ತದೆ. ಇಂತಹ ಸಂದರ್ಭದಲ್ಲಿರುವ ವ್ಯಕ್ತಿಯನ್ನು, ವೈಯಕ್ತಿಕವಾಗಿ ಕೆಲವರು ಒತ್ತಡ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಗುರುತಿಸುವುದೂ ಸಹ ಕಷ್ಟವಾಗುತ್ತದೆ.

ಯೋಗ ನಮ್ಮ ನರವ್ಯವಸ್ಥೆಯನ್ನು ಚುರುಕುಗೊಳಿಸುವುದರಿಂದ ಅದು ಆರೋಗ್ಯದಲ್ಲಿ ಸಮತೋಲನ ಕಾಯ್ದುಕೊಳ್ಳುವುದರ ಜೊತೆಗೆ ಸಹಜವಾಗಿಯೇ ಇನ್ನಷ್ಟು ಕ್ರಿಯಾಶೀಲಗೊಳಿಸುತ್ತದೆ. ನಮ್ಮ ದೇಹ ಒತ್ತಡಕ್ಕೊಳಗಾಗಿದೆ ಎಂಬ ಭಾವನೆ ಇದ್ದರೂ ಅದಕ್ಕೆ ಅವಕಾಶ ಮಾಡಿಕೊಡದೆ ದೇಹ ಹಾಗೂ ಮನಸ್ಸನ್ನು ಪ್ರಫುಲ್ಲವಾಗಿಡುತ್ತದೆ. ಸಕಾರಾತ್ಮಕ ಹಾಗೂ ನಕಾರಾತ್ಮಕ ಒತ್ತಡವಿದ್ದರೂ ಅವುಗಳಿಗೆ ಅದು ಸುಲಭವಾಗಿ ಒಳಗಾಗುವುದಿಲ್ಲ. ಜೀರ್ಣಕ್ರಿಯೆಯನ್ನು ಉತ್ತಮಗೊಳಿಸಿ ರಕ್ತಸಂಚಲನೆಯ ವೇಗವನ್ನು ತಗ್ಗಿಸಿ, ಒತ್ತಡವನ್ನು ಪರಿಣಾಮಕಾರಿಯಾಗಿ ಎದುರಿಸಲು ಸಹಕಾರಿಯಾಗುತ್ತದೆ. ಯೋಗದಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ರಕ್ಷಣೆಗೆ ಹಲವು ಪ್ರಯೋಜನಗಳಿವೆ. ನರ ವ್ಯವವಸ್ಥೆಯನ್ನು ಕ್ರಿಯಾಶೀಲಗೊಳಿಸುವ ಜೊತೆಗೆ ಗ್ರಂಥಿಗಳನ್ನು ಚುರುಕುಗೊಳಿಸುತ್ತವೆ. ಸದಾ ಉಲ್ಲಸಿತವಾಗಿರುವುದರ ಜೊತೆಗೆ ಮಾನಸಿಕವಾಗಿ ಧ್ಯಾನಸ್ಥ ಸ್ಥಿತಿಯಲ್ಲಿರುವಂತೆ ಮತ್ತು ರಕ್ತದೊತ್ತಡವನ್ನು ಪರಿಣಾಮಕಾರಿಯಾಗಿ ತಗ್ಗಿಸಿ, ಉಸಿರಾಟ ಪ್ರಕ್ರಿಯೆಯನ್ನು ಸಹಜಗೊಳಿಸುತ್ತದೆ. ಇದು ದೈಹಿಕವಾಗಿ ಒತ್ತಡ ಬೀಳದಂತೆ ತಡೆಯುತ್ತದೆ. ಇದರ ಪರಿಣಾಮ ಸಮಸ್ಯೆಗಳು ಎದುರಾದಾಗ ಮಾನಸಿಕವಾಗಿ ದ್ವಂದ್ವಕ್ಕೆ ಬೀಳದೆ, ಸಂದರ್ಭಕ್ಕೆ ತಕ್ಕಂತೆ ಸೂಕ್ಷ್ಮತೆಯಿಂದ ನಿಭಾಯಿಸುವ ಪ್ರವೃತ್ತಿಯನ್ನು ಬೆಳೆಸುತ್ತದೆ. ಯೋಗ ಪದ್ಧತಿ ಅನುಕರಣೆಯಿಂದ ಹೃದಯ ಹಾಗೂ ಉಸಿರಾಟದ ಸಮಸ್ಯೆಗಳು ಇರುವುದಿಲ್ಲ, ಮಾನಸಿಕವಾಗಿ ಸದೃಢಗೊಳಿಸುತ್ತದೆ.

## ವ್ಯಸನ ಮುಕ್ತಿಗೆ ಯೋಗ

ವ್ಯಸನಗಳ ಮುಕ್ತಿಗೆ ಯೋಗ ಪ್ರಮುಖ ಚಿಕಿತ್ಸೆಯಾಗಿ ಅಥವಾ ಚಿಕಿತ್ಸಾ ವಿಧಾನವಾಗಿ ಕೆಲಸ ಮಾಡುತ್ತದೆ. ಯೋಗ ಮನುಷ್ಯನ ಇಡೀ ದೇಹ ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ದೈಹಿಕವಾಗಿ ಸದೃಢರನ್ನಾಗಿಸುತ್ತದೆ. ಮನಸ್ಸನ್ನು ಸ್ಥಿಮಿತದಲ್ಲಿಡುತ್ತದೆ. ದೈಹಿಕ ಮತ್ತು ಆಧ್ಯಾತ್ಮಿಕ ಜಾಗೃತಿಯನ್ನು ಹೆಚ್ಚಿಸುತ್ತದೆ. ಸೂಕ್ತ ಉಸಿರಾಟದ ತಂತ್ರಗಳನ್ನು ಅನುಸರಿಸುವುದರಿಂದ ಒತ್ತಡವನ್ನು ನಿವಾರಿಸುತ್ತದೆ. ಬದ್ಧತೆ ಹಾಗೂ ಏಕಾಗ್ರತೆಯನ್ನು ಉತ್ತೇಜಿಸಿ, ದೇಹವನ್ನು ದಂಡಿಸುವುದು ಅರ್ಥಾತ್ ವಿವಿಧ ಭಂಗಿಗಳಲ್ಲಿ ಆಸನಗಳನ್ನು ಮಾಡುವುದು, ಕೌಶಲ್ಯವೃದ್ಧಿಸಿ, ದೈಹಿಕ ಬಲ ತರುತ್ತದೆ. ಯೋಗ ಪದ್ಧತಿ ಅನುಕರಣೆಯಿಂದ ಯುವಜನತೆಯಲ್ಲಿ ಜಾಗೃತಿ ಮೂಡುವುದಲ್ಲದೆ, ದೇಹ–ಮನಸ್ಸನ್ನು ಸಮಸ್ಥಿತಿಯಲ್ಲಿಟ್ಟುಕೊಳ್ಳಲು ಯೋಗ ಎಷ್ಟು ಸಹಕಾರಿ ಎಂಬ ಅರಿವು ಮೂಡುತ್ತದೆ. ಕೆಲವು ಭಂಗಿಗಳು ಅಂದರೆ ಹಿಂಭಾಗಕ್ಕೆ ಬಾಗಿದ ಭಂಗಿಯಲ್ಲಿದ್ದರೆ ಆಗ ದೇಹದ ಮುಂದಿನ ಭಾಗದಲ್ಲಿನ ಭಾವನೆಗಳ ಅರಿವಾಗುತ್ತದೆ.

## ಬೊಜ್ಜು ನಿವಾರಣೆಗೆ ಯೋಗ

ಯೋಗದಿಂದ ಸಮತೋಲಿತ ಆಹಾರ ಬಳಸಿ ಆ ಮೂಲಕ ಉತ್ತಮ ಆಸನಗಳನ್ನು ನಾನಾ ಭಂಗಿಗಳಲ್ಲಿ ಮಾಡಬಹುದು ಮತ್ತು ಉಸಿರಾಟ ತಂತ್ರಗಳನ್ನು ಅನುಸರಿಸಬಹುದು. ಕೆಲವೊಮ್ಮೆ ಬೊಜ್ಜು ಇರುವ ವ್ಯಕ್ತಿಗಳು ಸಂಧಿವಾತ ಮತ್ತಿತರ ಸಮಸ್ಯೆಗಳನ್ನು ಎದುರಿಸಬಹುದು. ಆದರೆ ಯೋಗ ಅಂತಹವರ ದೇಹದ ಊನದ ಸಮಸ್ಯೆ ಹಾಗೂ ಒತ್ತಡವನ್ನು ನಿವಾರಿಸುತ್ತದೆ, ಅಧಿಕ ತೂಕದಿಂದ ಬರುವ ಸಂಧಿವಾತಗಳನ್ನೂ ಸಹ ದೂರ ಮಾಡುತ್ತದೆ. ಇದು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವ ಜೊತೆಗೆ ದೇಹವನ್ನು ಹೇಗೆ ಬೇಕಾದರೆ ಹಾಗೆ ಬಳುಕಿಸಲು ಸಹಾಯಮಾಡುತ್ತದೆ. ಯೋಗ ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತದೆ. ಯೋಗ ದೈಹಿಕ ಕ್ಷಮತೆ ಸುಧಾರಿಸಿ, ಸದಾ ಉತ್ತಮ ಮನಸ್ಥಿತಿ ಹೊಂದಲು ನೆರವಾಗುವುದರಿಂದ ಸದಾ ಆರೋಗ್ಯದಿಂದ ಇರಬಹುದಾಗಿದೆ. ಬೊಜ್ಜು ಇರುವವರು ದಿನನಿತ್ಯ ಯೋಗ ಮಾಡುವುದರಿಂದ ಅವರ ದೇಹದ ಮೇಲೆ ಪರಿಣಾಮಬೀರಿ ಅವರು, ನೈಸರ್ಗಿಕವಾಗಿಯೇ ತೂಕವನ್ನು ಇಳಿಸಿಕೊಳ್ಳಲು ಸಹಾಯ ಮಾಡುತ್ತವೆ. ಬೊಜ್ಜುತನ ನಿವಾರಣೆಗೆ ಸೂರ್ಯ ನಮಸ್ಕಾರ ಅತ್ಯಂತ ಪ್ರಮುಖ ಚಿಕಿತ್ಸಾ ಕ್ರಮ. ಸೂರ್ಯ ನಮಸ್ಕಾರ ಸಂಪೂರ್ಣವಾದುದು, ಆ ಪದ್ಧತಿ ನರವ್ಯವಸ್ಥೆ ಹಾಗೂ ದೇಹದ ಮೇಲೆ ವಿಭಿನ್ನ ಪ್ರಭಾವ ಬೀರುವುದರ ಜೊತೆಗೆ ಬೊಜ್ಜಿಗೆ ಕಾರಣವಾದ ಅಂಶಗಳ ಅಸಮತೋಲನ ಸರಿದೂಗಿಸಲು ನೆರವಾಗುತ್ತದೆ. ಬೊಜ್ಜು ನಿವಾರಣೆಗೆ ಭಸ್ತ್ರಿಕ, ಕಪಾಲಬಾತಿ ಮತ್ತು ಸೂರ್ಯಭೇದನ ಮತ್ತಿತರ ಪ್ರಾಣಾಯಾಮ ಪದ್ಧತಿಗಳನ್ನು ಶಿಫಾರಸ್ಸು ಮಾಡಲಾಗುತ್ತದೆ. ಈ ಪದ್ಧತಿಗಳನ್ನು ಅನುಸರಿಸುವುದರಿಂದ ದೇಹದ ಅಸಮತೋಲನ ಬೆಳವಣಿಗೆಯ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತದೆ.

## ಯುವಜನತೆ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು

ಬಾಲ್ಯಾವಸ್ಥೆ ಮತ್ತು ಪ್ರೌಢಾವಸ್ಥೆ ನಡುವಿನ ವಯಸ್ಸನ್ನು ಸಾಮಾನ್ಯವಾಗಿ ಯೌವನಾವಸ್ಥೆ ಎಂದು ಹೇಳಲಾಗುವುದು. ಈ ಅವಸ್ಥೆಯಲ್ಲಿ ಯುವ ಜನಾಂಗದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಹೊಸ ರೀತಿಯಲ್ಲಿ ಕಾಣುತ್ತಾರೆ, ಅವರ ಹಾವ–ಭಾವ, ನಡೆ–ನುಡಿಯಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಸಾಂಕ್ರಾಮಿಕವಲ್ಲದ ರೋಗಗಳಲ್ಲಿ ಹಲವು ವಿಧಗಳಿವೆ. ಅವುಗಳು ನೇರವಾಗಿ ವರ್ತನೆ, ಜೀವನಶೈಲಿಗೆ ಸಂಬಂಧಿಸಿದವು. ಭಾರತದಲ್ಲಿ ವಿಶೇಷವಾಗಿ ಯುವಜನರಲ್ಲಿ ಪೌಷ್ಟಿಕಾಂಶ ಬದಲಾವಣೆ ಕಾಣಬಹುದು. ಅದರಿಂದಾಗಿ ಒತ್ತಡ, ಮಧುಮೇಹ, ತೀವ್ರ ಉಸಿರಾಟದ ತೊಂದರೆ, ಶ್ವಾಸಕೋಶದ ಸಮಸ್ಯೆ, ಅಧಿಕ ಒತ್ತಡ ಮತ್ತಿತರ ಕಾಯಿಲೆಗಳು ಬರುವುದು ಸಾಮಾನ್ಯವಾಗಿದೆ.

## ಸಾಂಕ್ರಾಮಿಕವಲ್ಲದ ರೋಗ ನಿವಾರಣೆಗೆ ಯೋಗ

ಇತ್ತೀಚಿನ ದಿನಗಳಲ್ಲಿ ಜೀವನಶೈಲಿ ಸಾಂಕ್ರಾಮಿಕವಲ್ಲದ ರೋಗ ಹರಡಲು ಪ್ರಮುಖ ಕಾರಣವಾಗಿದೆ. ತಂಬಾಕು ಬಳಕೆ, ಜೀವನಶೈಲಿ ಬದಲಾವಣೆ, ನಿಯಮಿತ ದೇಹದಂಡನೆ ಇಲ್ಲದಿರುವುದು, ಆರೋಗ್ಯಕರವಲ್ಲದ ಊಟ–ತಿಂಡಿ ಸೇವನೆ, ಮಾನಸಿಕ ಒತ್ತಡ ಹಾಗೂ ಖಿನ್ನತೆ ಮತ್ತಿತರ



ಸಮಸ್ಯೆಗಳು ಯುವಕರಲ್ಲಿ ಹೆಚ್ಚುತ್ತಿವೆ. ಈ ಸಾಂಕ್ರಾಮಿಕವಲ್ಲದ ರೋಗ ಪರಿಣಾಮಕಾರಿ ಔಷಧ. ಇತ್ತೀಚಿನ ಸಂಶೋಧನೆಯಿಂದ ತಿಳಿದುಬರುವ ವಿಷಯವೆಂದರೆ ಯೋಗ ಹಾಗೂ ಧ್ಯಾನ ಪದ್ಧತಿಗಳಿಂದಾಗಿ ದೇಹದ ಮೇಲೆ ಸಕಾರಾತ್ಮಕ ಪರಿಣಾಮಗಳು ಉಂಟಾಗಿ, ರಕ್ತದಲ್ಲಿನ ಸಕ್ಕರೆ ಅಂಶ ನಿಯಂತ್ರಣಕ್ಕೆ ಬರುವುದಲ್ಲದೆ, ಹೃದಯ ಸಂಬಂಧಿ ಸಮಸ್ಯೆಗಳು ನಿವಾರಣೆಯಾಗಿ, ಆರೋಗ್ಯದಿಂದಿರಲು ಸಹಕಾರಿಯಾಗುತ್ತದೆ. ಯೋಗದಿಂದ ಮಾನಸಿಕ ಪ್ರಯೋಜನಗಳು ಹೆಚ್ಚಿವೆ. ಯೋಗದಿಂದಾಗಿ ಸದಾ ಜಾಗೃತಾವಸ್ಥೆಯಲ್ಲಿರಲು ಸಾಧ್ಯವಾಗುತ್ತದೆ. ಯೋಗ, ವ್ಯಕ್ತಿ ತನ್ನೊಂದಿಗೆ ತಾನು ಮರುಸಂಪರ್ಕ ಹೊಂದಲು ನೆರವಾಗುತ್ತದೆ. ಅಲ್ಲದೆ ಅದು ಏಕೆ ಮತ್ತು ಹೇಗೆ ಬೇರೊಬ್ಬರು ಅನಾರೋಗ್ಯಕ್ಕೆ ಒಳಗಾಗಿದ್ದಾರೆ ಎಂಬುದನ್ನು ತಿಳಿಯಲು ಸಹಕಾರಿಯಾಗುತ್ತದೆ. ಮತ್ತು ತಾನು ಹೇಗೆ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂಬುದರತ್ತ ಗಮನಹರಿಸಲು ಪ್ರೇರೇಪಿಸುತ್ತದೆ. ಅಲ್ಲದೆ ಯೋಗ ಪದ್ಧತಿ ವಿಶ್ವದಲ್ಲಿ ತನ್ನ ಸುತ್ತಮುತ್ತಲಿನ ಆಗು–ಹೋಗುಗಳಿಗೆ ಹೇಗೆ ಪ್ರತಿಕ್ರಯಿಸಬೇಕು ಎಂಬುದನ್ನು ಕಲಿಸುತ್ತದೆ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಎದುರಾಗುವ ಜೀವನ ಸವಾಲುಗಳನ್ನು ಹೇಗೆ ನಿಭಾಯಿಸಬೇಕು ಎಂಬ ಪಾಠ ತಿಳಿಸಿಕೊಡುತ್ತದೆ. ಸದಾ ಮನಸ್ಸನ್ನು ಧ್ಯಾನಸ್ಥ ಸ್ಥಿತಿಯಲ್ಲಿಟ್ಟುಕೊಳ್ಳಲು ಮತ್ತು ಅಂತರಾತ್ಮದ ಜೊತೆ ಸಂಪರ್ಕಹೊಂದಿ ಹೇಗೆ ವಾಸ್ತವ ಸ್ಥಿತಿಗತಿಗೆ ಸ್ಪಂದಿಸಬೇಕು ಎಂಬುದರ ಅರಿವು ಮಾಡಿಕೊಡುತ್ತದೆ. ಇದರಿಂದಾಗಿ ಅಂತಿಮವಾಗಿ ಯಾವುದೇ ವ್ಯಕ್ತಿ ತಾನು ಎಷ್ಟೇ ಒತ್ತಡದ ಜಗತ್ತಿನಲ್ಲಿದ್ದರೂ ಆ ಒತ್ತಡಕ್ಕೆ ಒಳಗಾಗದೆ ಸಾಂಕ್ರಾಮಿಕವಲ್ಲದ ರೋಗಗಳನ್ನು ಅಂಟಿಸಿಕೊಳ್ಳದೆ, ಆರೋಗ್ಯವಂತ ಜೀವನ ನಡೆಸುವುದು ಯೋಗದಿಂದ ಮಾತ್ರ ಸಾಧ್ಯ. ❑

# ಕರ್ನಾಟಕದ ಯುವಜನ ಸಂಖ್ಯೆಯ ಚಿತ್ರಣ

* ಡಾ. ಸಿ.ಎಂ. ಲಕ್ಷ್ಮಣ



**ಉತ್ತರ ಕರ್ನಾಟಕದ ಬಹುತೇಕ ಭಾಗಗಳಿಂದ ಹೆಚ್ಚು ಯುವ ಜನರು ಹಾಗೂ ಕೆಲಸಗಾರರು ದಕ್ಷಿಣ ಕರ್ನಾಟಕದತ್ತ ವಲಸೆ ಬರುತ್ತಿದ್ದು, ಇವರಲ್ಲಿ ಬಹುತೇಕರು ಅಸಂಘಟಿತ ವಲಯದ ಕೆಲಸಗಾರರಾಗಿದ್ದಾರೆ.**

ಯಾವುದೇ ರಾಜ್ಯ ಅಥವಾ ದೇಶ ಅಭಿವೃದ್ಧಿ ಕಾಣಬೇಕಾದರೆ, ಅಲ್ಲಿನ ಮೂಲ ನೈಸರ್ಗಿಕ ಸಂಪತ್ತು ಹಾಗೂ ಮಾನವ ಸಂಪತ್ತು ಪ್ರಮುಖ ಪಾತ್ರ ವಹಿಸುತ್ತದೆ. ಪ್ರಪಂಚದ ವಿವಿಧ ದೇಶಗಳನ್ನು ಗಮನಿಸಿ ನೋಡುವುದಾದರೆ, ಅಮೆರಿಕ, ಸ್ವೀಡನ್, ಜರ್ಮನಿ, ಯುರೋಪ್ ದೇಶಗಳು ತಮ್ಮ ಜನಸಂಖ್ಯೆ ಬೆಳವಣಿಗೆಯನ್ನು ಬಹು ದಶಕಗಳ ಹಿಂದೆಯೇ ಹತೋಟಿಯಲ್ಲಿ ತಂದ ಪರಿಣಾಮವಾಗಿ ಆ ದೇಶಗಳು ಅಭಿವೃದ್ಧಿ ಶೀಲ ದೇಶಗಳಾಗಿ ಹೊರಹೊಮ್ಮಿವೆ, ಆದರೆ ಈ ನಿಟ್ಟಿನಲ್ಲಿ ಭಾರತವೂ ಸೇರಿ, ಆಫ್ರಿಕಾ ಖಂಡದ ಅನೇಕ ದೇಶಗಳು ಚೈನಾ, ಜಪಾನ್ ದೇಶಗಳು ಅಭಿವೃದ್ಧಿ ಹೊಂದಲು ಅನೇಕ ವರ್ಷಗಳೇ ಬೇಕಾಯಿತು. ಇದಕ್ಕೆ ಮುಖ್ಯ ಕಾರಣ ಅತಿ ಜನಸಂಖ್ಯೆ. ಪ್ರಸ್ತುತ ಭಾರತ ಆರ್ಥಿಕ ಅಭಿವೃದ್ಧಿಯಲ್ಲಿ ವಿಶ್ವದಲ್ಲೇ ಮಂಚೂಣಿಯಲ್ಲಿದ್ದು, ಅನೇಕ ಪ್ರಗತಿ ಪರ ಅಂಶಗಳು ದೇಶವನ್ನು ಮುನ್ನೆಡೆಸುತ್ತಿದೆ. ಕಳೆದ 2 ದಶಕಗಳಲ್ಲಿ ಭಾರತ ಜನಸಂಖ್ಯಾ ಸ್ಥಿತ್ಯಂತರವನ್ನು ಹೊಂದಿದ್ದು ಜನಸಂಖ್ಯೆ ರಚನೆ ಗಾತ್ರ ಮತ್ತು ಬೆಳವಣಿಗೆಯಲ್ಲಿ ಭಾರೀ ಬದಲಾವಣೆಯನ್ನು ಕಂಡಿದೆ. ಕಳೆದ 2 ದಶಕಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳ (0–14 ವಯೋಮಾನ) ಶೇಕಡಾ ಪ್ರಮಾಣ ಕಡಿಮೆಯಾಗಿದ್ದು ಇನ್ನೊಂದೆಡೆ ಯುವಕರ ಮತ್ತು ವಯಸ್ಕರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಭಾರತದ ಜನಸಂಖ್ಯಾ ಸ್ಥಿತ್ಯಂತರದಿಂದ ಒಟ್ಟು ಜನಸಂಖ್ಯೆಯಲ್ಲಿ ಯುವಕರ ಹಾಗೂ ಕೆಲಸಗಾರರ ಸಂಖ್ಯೆ ಹೆಚ್ಚಳವಾಗುತ್ತಿದೆ, ಈ ಅಂಶವನ್ನು ಸರ್ಕಾರ ಸಕಾರಾತ್ಮಕವಾಗಿ ಪರಿಗಣಿಸಿ ಸದ್ಬಳಕೆ ಮಾಡಿಕೊಳ್ಳುವ ಅವಶ್ಯಕತೆ ಇದೆ. ಇಂತಹುದೆ ಅನುಭವವನ್ನು ಪ್ರಗತಿಶೀಲ ರಾಜ್ಯ ಕರ್ನಾಟಕದಲ್ಲಿ ಇತ್ತೀಚಿನ ದಶಕಗಳಲ್ಲಿ ಮನಗಾಣಬಹುದಾಗಿದೆ. ಭಾರತದ ಒಟ್ಟು 121 ಕೋಟಿ ಜನಸಂಖ್ಯೆಯಲ್ಲಿ ಸುಮಾರು 80 ಕೋಟಿ ಜನರು ಕೆಲಸಗಾರರಿದ್ದಾರೆ ಇದು ನಿಜಕ್ಕೂ ದೇಶದ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿದ್ದು, ಈ ಸಂದರ್ಭದಲ್ಲಿ ಈ ವರ್ಗದ ಜನ ಯಾವ ತರಹದ ಕೌಶಲ್ಯತೆಯನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯುವುದು ಇಲ್ಲಿ ಬಹು ಮುಖ್ಯವಾದ ಅಂಶ. ಭಾರತದ ಒಟ್ಟು ಕೆಲಸಗಾರರ ಪೈಕಿ ಶೇ. 92 ರಷ್ಟು ಕೆಲಸಗಾರರು ಅಸಂಘಟಿತ ವಲಯದಲ್ಲಿ ಉದ್ಯೋಗಿಗಳಾಗಿದ್ದು, ಇವರಲ್ಲಿ ಕೌಶಲ್ಯತೆ ಮತ್ತು ಪರಿಣಿತಿಯನ್ನು ಹೊಂದಿರುವ ಕೆಲಸಗಾರರ ಸಂಖ್ಯೆ ಸುಮಾರು ಶೇ. 20 ಎಂಬುದು ಅಂದಾಜಿಸಬಹುದು.

### ಯುವ ಜನಸಂಖ್ಯೆಯಲ್ಲಿ ಬದಲಾವಣೆ


ಭಾರತ 1991 ರಲ್ಲಿ ಒಟ್ಟು 83.85 ಕೋಟಿ ಜನಸಂಖೆಯನ್ನು ಹೊಂದಿದ್ದು ಇದರಲ್ಲಿ ಯುವಜನತೆಯ ಪಾಲು ಶೇ 26.56 ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಯುವಜನಸಂಖ್ಯೆಯ ಗಾತ್ರ ಸುಮಾರು 22.27 ಕೋಟಿ. 2011 ರ ವೇಳೆಗೆ ಈ ಜನಸಂಖ್ಯೆ ಗಾತ್ರ 34.17 ಕೋಟಿ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಯುವಜನತೆಯ ಪಾಲು ಶೇ 28. ಇನ್ನೊಂದೆಡೆ ಕೆಲಸಗಾರರ ದೃಷ್ಟಿಯಲ್ಲಿ ಭಾರತದ ಯುವಜನತೆ ಮತ್ತು ಕೆಲಸಗಾರರ ಜನಸಂಖ್ಯೆಯನ್ನು ಒಟ್ಟಾಗಿ ಕ್ರೋಢೀಕರಿಸಿ ನೋಡಿದರೆ 1991 ರಲ್ಲಿ ಶೇ 45 ರಷ್ಟಿದ್ದ ಈ ಪ್ರಮಾಣ 2011 ರಲ್ಲಿ ಶೇ 50 ರಷ್ಟಿದೆ. ಕೆಲಸಗಾರರ ಪ್ರಮಾಣವನ್ನು ನಿರ್ದಿಷ್ಟವಾಗಿ ತಿಳಿಯುವುದಾದರೆ, ವಯೋಮಾನ ಜನಸಂಖ್ಯಾ 15–29,30–

* ಪ್ರಾಧ್ಯಾಪಕರು, ಜನಸಂಖ್ಯಾ ಸಂಶೋಧನಾ ಕೇಂದ್ರ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು. E-mail : lakshmana@isec.ac.in

44 ಮತ್ತು 45–59 ವರ್ಷದ ವಯೋಮಾನ ಜನಸಂಖ್ಯೆಯನ್ನು ಒಟ್ಟಾಗಿ ಕ್ರೋಢೀಕರಿಸಿ ನೋಡಿದರೆ 1991 ರಲ್ಲಿ ಶೇ 56 ರಷ್ಟಿದ್ದ ಈ ಪ್ರಮಾಣ 2011 ರ ಅವಧಿಯಲ್ಲಿ ಶೇ 63.64. ಈ ಕಾರಣದಿಂದಾಗಿಯೇ ಇತ್ತೀಚಿಗೆ ಭಾರತವನ್ನು ಯುವಭಾರತ ಎಂದು ಬಿಂಬಿಸಲಾಗುತ್ತಿದೆ. ಈ ನಿರ್ದಿಷ್ಟ ಅಂಶಗಳನ್ನು ಕರ್ನಾಟಕವನ್ನು ಪರಿಗಣಿಸಿ ನೋಡುವುದಾದರೆ ದೇಶದ ದಕ್ಷಿಣ ಭಾರತದ ರಾಜ್ಯಗಳ ಪೈಕಿ ಪ್ರಗತಿಪರ ರಾಜ್ಯವೆಂದು ಪರಿಗಣಿಸಿರುವ ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಪ್ರಗತಿಯಲ್ಲಿ ದೇಶದ ಸರಾಸರಿಗಿಂತ ಮುಂದಿರುವುದು ರುಜುವಾತಾಗಿದೆ. ಹಾಗೆಯೇ ಯುವ ಜನಸಂಖ್ಯೆಯ ಪಾಲಿನಲ್ಲೂ ಇದನ್ನು ಗಮನಿಸಬಹುದು, ಉದಾಹರಣೆಗೆ 1991 ನೆ ಸಾಲಿನ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಯುವ ಜನರ ಪಾಲು ಶೇ 27.33. ಈ ಪ್ರಮಾಣ 2011 ರಲ್ಲಿ ಶೇ 27.72. ನಿರ್ದಿಷ್ಟವಾಗಿ ವಯೋಮಾನ ಜನಸಂಖ್ಯೆ 15–29, 30–44 ಮತ್ತು 45–59, ಇವುಗಳನ್ನು ಕ್ರೋಢೀಕರಿಸಿ ನೋಡಿದರೆ ಈ ಜನಸಂಖ್ಯೆಯ ಪ್ರಮಾಣ ಶೇ 65. ಅಂದರೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿರುವ ಕೆಲಸಗಾರರಿಗಿಂತ (ಶೇ. 63.64) ಇದು ಹೆಚ್ಚಳವನ್ನು ಹೊಂದಿದೆ (ಶೇ. 65) ದಕ್ಷಿಣ ಭಾರತದಲ್ಲಿ ಕೇರಳ, ತಮಿಳುನಾಡು ರಾಜ್ಯಗಳ ನಂತರ ಪ್ರಗತಿ ಕಾಣುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ.

ಕರ್ನಾಟಕದ ವಿವಿಧ ವಯೋಮಾನ ಜನಸಂಖ್ಯೆಯ ರಚನೆಯನ್ನು ಶೇಕಡಾ ಪ್ರಮಾಣದಲ್ಲಿ ದಕ್ಷಿಣ ಭಾರತದ ಇತರೆ ರಾಜ್ಯಗಳೊಂದಿಗೆ ಹೋಲಿಕೆ ಮಾಡಲಾಗಿದೆ. ಕಳೆದ ಎರಡು ದಶಕಗಳಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಹೆಚ್ಚಳವಾಗಿರುವ ಯುವಜನಸಂಖ್ಯೆ ಶೇಕಡಾ ಪ್ರಮಾಣ 1 ರಷ್ಟಿದ್ದರೆ, ಈ ಪ್ರಮಾಣ ನೆರೆಯ ರಾಜ್ಯ ಆಂಧ್ರ ಪ್ರದೇಶದಲ್ಲಿ ಶೇ 2.1. ಇದಕ್ಕೆ ವ್ಯತಿರಿಕ್ತವಾಗಿ ತಮಿಳುನಾಡು ಮತ್ತು ಕೇರಳ ರಾಜ್ಯಗಳು ಯುವಜನತೆಯ ಪಾಲಿನಲ್ಲಿ ನಕಾರಾತ್ಮಕ ಪ್ರಮಾಣವನ್ನು ಹೊಂದಿದ್ದು, ಇದಕ್ಕೆ ಮುಖ್ಯ ಕಾರಣ ಈ ರಾಜ್ಯಗಳು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದೊಂದಿಗೆ ಜನಸಂಖ್ಯಾ ಬೆಳವಣಿಗೆಯಲ್ಲಿ ಹತೋಟಿ ಹೊಂದಿದ್ದು ಗಮನಾರ್ಹ. ಉದಾಹರಣೆಗೆ ಪ್ರತಿ ವಿವಾಹಿತ ಮಹಿಳೆ ಪಡೆಯುವ ಮಕ್ಕಳ ಸಂಖ್ಯೆ 2 ಕ್ಕೆ ಸೀಮಿತ ಗೊಂಡಿದ್ದು ಕೇರಳ ರಾಜ್ಯ ದೇಶದಲ್ಲೇ ಮೊದಲು (1990) ನಂತರದ ಸ್ಥಾನದಲ್ಲಿ ತಮಿಳುನಾಡು (2000), ಆಂಧ್ರ ಪ್ರದೇಶ (2002) ಕರ್ನಾಟಕ (2006) ಈ ಸಾಲಿನಲ್ಲಿ ಸೇರುತ್ತವೆ. ಒಂದು ಅಂದಾಜಿನ ಪ್ರಕಾರ 2045 ಕ್ಕೆ ವಿಶ್ವದ ಒಟ್ಟು ಕೆಲಸಗಾರರ ಪೈಕಿ ಶೇ 25 ರಷ್ಟು ಕೆಲಸಗಾರರು ಭಾರತದಲ್ಲಿ ನೆಲೆಯೂರಲಿದ್ದಾರೆ. ಇದು ಭಾರತದ ಮಟ್ಟಿಗೆ ಒಳ್ಳೆಯ ಬೆಳವಣಿಗೆ ಆದರೂ ಇನ್ನೊಂದೆಡೆ ಯುವ ಭಾರತ ನಿರ್ಮಾಣದೊಂದಿಗೆ, ವಯಸ್ಕರ ಭಾರತವೂ ಆಗಲಿದೆ ಈ ಹಿನ್ನೆಲೆಯಲ್ಲಿ ಇವೆರಡನ್ನೂ ಸರಿದೂಗಿಸಿ ಯುವಜನರಿಂದ ರಾಷ್ಟ್ರಕ್ಕೆ ಆಗಲಿರುವ ಲಾಭವನ್ನು ಮನಗಂಡು ಭಾರತ ಸರಿಯಾದ ರೀತಿಯಲ್ಲಿ, ಯೋಜನೆಯ ಕಾರ್ಯರೂಪಗಳನ್ನು ನಿರೂಪಿಸುವ ಜವಾಬ್ದಾರಿ ಹೊಂದಿದೆ. ಈ ನಿಟ್ಟಿನಲ್ಲಿ ಯುವಭಾರತದ ಮುಂದಿರುವ ಅವಕಾಶಗಳು ಮತ್ತು ಸವಾಲುಗಳನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ.

**ಚಿತ್ರ 1 : ಕರ್ನಾಟಕದಲ್ಲಿ ಯುವ ಜನಸಂಖ್ಯೆ ಶೇ. ಪ್ರಮಾಣ**



## ಜಿಲ್ಲಾವಾರು ಯುವಜನತೆ

2001 ನೇ ಜನಗಣತಿಯ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 26.62 ರಷ್ಟು ಜನಸಂಖ್ಯೆ ಯುವಕರಾಗಿದ್ದು, ಈ ಪ್ರಮಾಣ 2011 ರಲ್ಲಿ ಶೇ 27.53. ಯುವ ಜನತೆಯ ಶೇಕಡಾ ಪ್ರಮಾಣ ಕರ್ನಾಟಕದಲ್ಲಿ ದೇಶದ ಒಟ್ಟು ಯುವ ಜನತೆಯ ಶೇಕಡಾ ಪ್ರಮಾಣಕ್ಕಿಂತಲೂ ತುಸು ಹೆಚ್ಚು. 2001 ರಲ್ಲಿ ಶೇಕಡಾ 28.09 ರಷ್ಟಿದ್ದು ಯುವಜನತೆ 2011 ರಲ್ಲಿ ಶೇ 28.89 ಕ್ಕೆ ದಾಖಲಿಸಿದೆ. ಈ ಅಂಶವನ್ನು ಚಿತ್ರ 1 ರಿಂದ ದೃಢಪಡಿಸಿಕೊಳ್ಳಬಹುದು. ಯುವ ಜನಸಂಖ್ಯೆಯ ವಿಷಯದಲ್ಲಿ ಕರ್ನಾಟಕದ ಜಿಲ್ಲಾವಾರು ಅಂಕಿ ಅಂಶಗಳನ್ನು ಪರಿಶೀಲಿಸಿದರೆ, 2011 ರಲ್ಲಿ ಬೆಂಗಳೂರು ನಗರ ಜಿಲ್ಲೆ (ಶೇ 31.89) ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಯುವಕರ ಸಂಖ್ಯೆ ಶೇಕಡಾ ಪ್ರಮಾಣ ರಾಜ್ಯದ ಸರಾಸರಿ ಶೇಕಡಾ ಪ್ರಮಾಣದಲ್ಲಿ ಹೆಚ್ಚು. ನಗರದಲ್ಲಿ ಬೆಂಗಳೂರು ಗ್ರಾಮೀಣ, (ಶೇ 29.87) ರಾಯಚೂರು (ಶೇ 29.7) ಹಾವೇರಿ, ದಾವಣಗೆರೆ, ಗುಲ್ಬರ್ಗಾ ತಲಾ ಶೇ 29.26 ರಷ್ಟು ಯುವ ಜನಸಂಖ್ಯೆಯನ್ನು ಹೊಂದಿವೆ. ಗದಗ, ಮೈಸೂರು ಮತ್ತು ಬೀದರ್ ಜಿಲ್ಲೆಗಳು ಕೂಡಾ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಗಳಾಗಿವೆ. ಉಳಿದೆಲ್ಲಾ ಜಿಲ್ಲೆಗಳು ಯುವ ಜನಸಂಖ್ಯೆಯು ಶೇಕಡಾ ಪ್ರಮಾಣದಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಶೇಕಡಾ ಪ್ರಮಾಣವನ್ನು ದಾಖಲಿಸಿವೆ. (ಚಿತ್ರ 1 ನ್ನು ನೋಡಿ). ಇದರಿಂದ ತಿಳಿಯಬಹುದಾದ ಅಂಶವೆಂದರೆ, ಕರ್ನಾಟಕದ ರಾಜಧಾನಿ ಬೆಂಗಳೂರು ನಗರ ಜಿಲ್ಲೆ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು ಉದಾ ಜಿಲ್ಲೆ ಕೈಗಾರಿಕೆ, ಮಾಹಿತಿ ಮತ್ತು ತಂತ್ರಜ್ಞಾನದ ನೆಲೆಯಾಗಿದೆ. ಅತಿ ಹೆಚ್ಚು ಯುವ ಉದ್ಯೋಗಿಗಳನ್ನೂ ಒಳಗೊಂಡಿದೆ. ಇನ್ನೊಂದೆಡೆ ಉನ್ನತ ಶಿಕ್ಷಣ ಪಡೆಯಲು ರಾಜ್ಯದ ವಿವಿಧ ಭಾಗಗಳಿಂದಲೂ ಹಾಗೂ ದೇಶದ ಇತರೆ ಭಾಗಗಳಿಂದಲೂ ಅತಿ ಹೆಚ್ಚು ಯುವಕರು ಬಂದು ಬೆಂಗಳೂರಲ್ಲಿ ನೆಲೆಸಿದ್ದಾರೆ. ಹೀಗೆ ಹತ್ತು ಹಲವಾರು ಅಂಶಗಳು ಬೆಂಗಳೂರು ಜಿಲ್ಲೆ ರಾಜ್ಯದಲ್ಲೇ ಅತಿ ಹೆಚ್ಚು ಯುವ ಶಕ್ತಿಯನ್ನು ಹೊಂದಲು ಕಾರಣವಾಗಿದೆ. ಈ ಅಂಶವನ್ನು ಪರಿಗಣಿಸಿ ಈ ಯುವ ಸಂಪತ್ತನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ರಾಜ್ಯದ ಬೆಳವಣಿಗೆಗೆ ಉತ್ತೇಜನ ನೀಡಬೇಕಾದ ಅನಿವಾರ್ಯತೆ ಇದೆ. ಇನ್ನೊಂದೆಡೆ ನಗರೀಕರಣ, ಮತ್ತು ವಲಸಿಗರಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಗಮನಿಸಿದರೆ, ನಿರುದ್ಯೋಗಿ ಯುವಕರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ಉದಾಹರಣೆಗಳಿವೆ. ಒಟ್ಟಾರೆ ಬೆಂಗಳೂರಿನಲ್ಲಿ ನೆಲೆಯೂರಿರುವ ಯುವ ಜನಸಂಖ್ಯೆ ಮುಖ್ಯವಾಗಿ ವಲಸೆ ಪ್ರವೃತ್ತಿಯಿಂದ ಹೆಚ್ಚಳವಾಗುತ್ತಿರುವುದು ತಿಳಿಯುತ್ತದೆ. ರಾಜ್ಯದ ಇತರೆ ಜಿಲ್ಲೆಗಳಾದ ಬಳ್ಳಾರಿ, ಬೆಂಗಳೂರು ಗ್ರಾಮೀಣ, ರಾಯಚೂರು, ಹಾವೇರಿ, ದಾವಣಗೆರೆ, ಕಲ್ಬುರ್ಗಿ ಗದಗ, ಮೈಸೂರು ಮತ್ತು ಬೀದರ್ ಜಿಲ್ಲೆಗಳು ಕೂಡಾ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ 10 ಜಿಲ್ಲೆಗಳ ಪೈಕಿ ಇವು ಕೂಡಾ ಒಂದಾಗಿವೆ. (ಪಟ್ಟಿ – 1) ಉದ್ಯೋಗ ಅರಸಿ ಬರುವವರ ಸಂಖ್ಯೆ ಮೇಲ್ಕಂಡ ಜಿಲ್ಲೆಗಳಲ್ಲಿ ಹೆಚ್ಚು. ಈ ಅಂಶ ಆ ಜಿಲ್ಲೆಗಳ ಒಟ್ಟು ಜನಸಂಖ್ಯೆ ವಯೋಮಾನ ಜನಸಂಖ್ಯೆಯ ಮೇಲೆ ಪ್ರಭಾವ ಬೀರಿದೆ. ಏಕೆಂದರೆ ಮಧ್ಯಮ ವಯಸ್ಸಿನ ಗಂಡಸರು ಮತ್ತು ಹೆಂಗಸರು ಹೆಚ್ಚಾಗಿ ರಾಜ್ಯದ ಉತ್ತರ ಜಿಲ್ಲೆಗಳಾದ ಬೀದರ್, ಕಲ್ಬುರ್ಗಿ, ರಾಯಚೂರು, ಹಾವೇರಿ , ಬಳ್ಳಾರಿ ಇತ್ಯಾದಿ ಜಿಲ್ಲೆಗಳಿಂದ ಬೆಂಗಳೂರಿಗೆ ವಲಸೆ ಬಂದು ವಿವಿಧ ಕೆಲಸಗಳಲ್ಲಿ ತೊಡಗಿದ್ದಾರೆ. ಅವರಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಯಲ್ಲಿ ಇವರ ಪಾಲು ಬಹು ದೊಡ್ಡದು. ಈ ಅಂಶ ಆ ಭಾಗದ ಒಟ್ಟು ಜನಸಂಖ್ಯೆಯಲ್ಲಿ ಯುವಕರ ಸಂಖ್ಯೆ ಹೆಚ್ಚಳವಾಗಲೂ ಕಾರಣವಾಗಿದೆ. ರಾಜ್ಯದ ಇತರೆ ಜಿಲ್ಲೆಗಳ ಯುವ ಜನಸಂಖ್ಯೆಯು ಅಂಕಿಅಂಶಗಳನ್ನು ಪಟ್ಟಿ 2 ರಲ್ಲಿ ನೀಡಲಾಗಿದೆ.

**ಪಟ್ಟಿ 1 : ಕರ್ನಾಟಕದಲ್ಲಿ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಗಳು**

| ಕ್ರಮ ಸಂಖ್ಯೆ | 2001 ಜಿಲ್ಲೆ | ಶೇ | 2011 ಜಿಲ್ಲೆ | ಶೇ |
|---|---|---|---|---|
| 1 | ಬೆಂಗಳೂರು | 32.78 | ಬೆಂಗಳೂರು | 31.89 |
| 2 | ದಕ್ಷಿಣ ಕನ್ನಡ | 30.33 | ಬಳ್ಳಾರಿ | 30.21 |
| 3 | ಉಡುಪಿ | 29.66 | ಬೆಂಗಳೂರು (ಗ್ರಾ.) | 29.87 |
| 4 | ಶಿವಮೊಗ್ಗ | 29.25 | ರಾಯಚೂರು | 29.7 |
| 5 | ಉತ್ತರ ಕನ್ನಡ | 28.94 | ಹಾವೇರಿ | 29.26 |
| 6 | ದಾವಣಗೆರೆ | 28.92 | ದಾವಣಗೆರೆ | |
| 7 | ಧಾರವಾಡ | 28.76 | ಕಲಬುರಗಿ | 29.26 |
| 8 | ಚಿಕ್ಕಮಗಳೂರು | 28.75 | ಗದಗ | 29.07 |
| 9 | ಹಾಸನ | 28.48 | ಮೈಸೂರು | 29.03 |
| 10 | ಬೆಂಗಳೂರು (ಗ್ರಾ.) | 28.47 | ಬೀದರ್ | 29.01 |

## ನಗರೀಕರಣ ಮತ್ತು ಯುವಜನತೆ

ನಗರೀಕರಣದ ಹಾದಿಯನ್ನು ಭಾರತದ ಮಟ್ಟಿಗೆ ವಿಶ್ಲೇಷಿಸುವುದಾದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಶೇ 15 ರಷ್ಟಿದ್ದು ನಗರ ಜನಸಂಖ್ಯೆ ಜಾಗತೀಕರಣ, ಖಾಸಗೀಕರಣ, ಹಾಗೂ ಉದಾರೀಕರಣಗಳ ಹಿನ್ನೆಲೆಯಲ್ಲಿ 2001 ರಲ್ಲಿ 27 ರಷ್ಟು ನಗರ ಜನಸಂಖ್ಯೆಯನ್ನು ಹೊಂದಿ, ಇದರ ಶೇಕಡಾ ಪ್ರಮಾಣ 2011ಕ್ಕೆ 31 ರಷ್ಟಿತ್ತು. ರಾಜ್ಯವಾರು ನಗರ ಜನಸಂಖ್ಯೆಯಲ್ಲಿ ಪಶ್ಚಿಮ ವಲಯದ ಮಹಾರಾಷ್ಟ್ರ ಗೋವಾ, ಗುಜರಾತ್ ಹಾಗೂ ಉತ್ತರ ಪ್ರದೇಶ, ದಕ್ಷಿಣದಲ್ಲಿ ತಮಿಳುನಾಡು ಹಾಗೂ ಕರ್ನಾಟಕ, ನಗರ ಜನಸಂಖ್ಯೆಯಲ್ಲಿ ರಾಷ್ಟ್ರದ ಸರಾಸರಿಗಿಂತ ಹೆಚ್ಚಾಗಿವೆ. 2011ರ ಪ್ರಕಾರ ಕರ್ನಾಟಕ ನಗರ ಜನಸಂಖ್ಯೆಯ ಶೇಕಡಾ ಪ್ರಮಾಣ 38. ವಿಪರ್ಯಾಸವೆಂದರೆ ರಾಜ್ಯದ ರಾಜಧಾನಿ ಬೆಂಗಳೂರು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 40ರಷ್ಟು ನಗರ ಜನಸಂಖ್ಯೆಯನ್ನು ಹೊಂದಿದ್ದು, ಉಳಿದ ಶೇ

| ಪಟ್ಟಿ : 2 ಕರ್ನಾಟಕದಲ್ಲಿ ಯುವ ಜನಸಂಖ್ಯೆ ಜಿಲ್ಲಾವಾರು ಶೇಕಡಾವಾರು | | | | | | | |
|---|---|---|---|---|---|---|---|
| ಕ್ರ. ಸಂ. | ಜಿಲ್ಲೆ | ಒಟ್ಟು ಜನಸಂಖ್ಯೆ | | ಒಟ್ಟು ಯುವ ಜನಸಂಖ್ಯೆ | | ಯುವ ಜನರ ಶೇ.ವಾರು | |
| | | 2001 | 2011 | 2001 | 2011 | 2001 | 2011 |
| 1 | ಬೆಳಗಾವಿ | 4214505 | 4779661 | 1,104,833 | 1,302,967 | 26.22 | 27.26 |
| 2 | ಬಾಗಲಕೋಟೆ | 1651892 | 1889752 | 439,758 | 535,855 | 26.62 | 28.36 |
| 3 | ವಿಜಯಪುರ | 1806918 | 2177331 | 454,637 | 603481 | 25.16 | 27.72 |
| 4 | ಬೀದರ್ | 1502373 | 1703300 | 378,088 | 494185 | 25.17 | 29.01 |
| 5 | ರಾಯಚೂರು | 1669762 | 1928812 | 420,765 | 572776 | 25.2 | 29.7 |
| 6 | ಕೊಪ್ಪಳ | 1196089 | 1389920 | 303,706 | 212161 | 25.39 | 15.26 |
| 7 | ಗದಗ | 971835 | 1064570 | 266,658 | 309497 | 27.44 | 29.07 |
| 8 | ಧಾರವಾಡ | 1604253 | 1847023 | 461,350 | 529308 | 28.76 | 28.66 |
| 9 | ಉತ್ತರ ಕನ್ನಡ | 1353644 | 1437169 | 391,751 | 395071 | 28.94 | 27.49 |
| 10 | ಹಾವೇರಿ | 1439116 | 1597668 | 404,425 | 467,473 | 28.1 | 29.26 |
| 11 | ಬಳ್ಳಾರಿ | 2027140 | 2452595 | 545,683 | 740863 | 26.92 | 30.21 |
| 12 | ಚಿತ್ರದುರ್ಗ | 1517896 | 1659456 | 412,349 | 468842 | 27.17 | 28.25 |
| 13 | ದಾವಣಗೆರೆ | 1790952 | 1945497 | 517,926 | 569330 | 28.92 | 29.26 |
| 14 | ಶಿವಮೊಗ್ಗ | 1642545 | 1752753 | 480,495 | 483382 | 29.25 | 27.58 |
| 15 | ಉಡುಪಿ | 1112243 | 1177361 | 329,846 | 319234 | 29.66 | 27.11 |
| 16 | ಚಿಕ್ಕಮಗಳೂರು | 1140905 | 1137961 | 327,964 | 306330 | 28.75 | 26.92 |
| 17 | ತುಮಕೂರು | 2584711 | 2678980 | 702,640 | 727234 | 27.18 | 27.15 |
| 18 | ಬೆಂಗಳೂರು | 6537124 | 9621551 | 2,142,578 | 3068743 | 32.78 | 31.89 |
| 19 | ಮಂಡ್ಯ | 1763705 | 1805769 | 499,305 | 496986 | 28.31 | 27.52 |
| 20 | ಹಾಸನ | 1721669 | 1776421 | 490,310 | 481073 | 28.48 | 27.08 |
| 21 | ದಕ್ಷಿಣ ಕನ್ನಡ | 1897730 | 2089649 | 575,670 | 594167 | 30.33 | 28.43 |
| 22 | ಕೊಡಗು | 548561 | 554519 | 152,779 | 142911 | 27.85 | 25.77 |
| 23 | ಮೈಸೂರು | 2641027 | 3001127 | 774,775 | 871243 | 29.34 | 29.03 |
| 24 | ಚಾಮರಾಜನಗರ | 965462 | 1020791 | 274,775 | 285395 | 28.46 | 27.96 |
| 25 | ಕಲಬುರಗಿ | 3130922 | 2566326 | 769,436 | 750782 | 24.58 | 29.26 |
| 26 | ಯಾದಗೀರ್ | * | 1174271 | * | 325347 | * | 27.71 |
| 27 | ಕೋಲಾರ | 2536069 | 1536401 | 687,939 | 442482 | 27.13 | 28.8 |
| 28 | ಚಿಕ್ಕಮಗಳೂರು | * | 1255104 | * | 350807 | * | 27.95 |
| 29 | ಬೆಂಗಳೂರು | 1881514 | 990923 | 535,675 | 295960 | 28.47 | 29.87 |
| 30 | ರಾಮನಗರ | * | 1082636 | * | 309036 | * | 28.54 |
| 31 | ಕರ್ನಾಟಕ | 52850562 | 61095297 | 14,846,116 | 17,651,441 | 28.09 | 28.89 |
| 32 | ಭಾರತ | 1027015247 | 1210854977 | 273402415 | 333364636 | 26.62 | 27.53 |

60 ರಷ್ಟು ನಗರ ಜನಸಂಖ್ಯೆ ಉಳಿದ ಭಾಗಗಳಲ್ಲಿ ಹಂಚಿಕೆಯಾಗಿದೆ. ಉತ್ತರ ಕರ್ನಾಟಕದ ಬಹುತೇಕ ಭಾಗಗಳಿಂದ ಹೆಚ್ಚು ಯುವ ಜನಸಂಖ್ಯೆ ಹಾಗೂ ಕೆಲಸಗಾರರು ದಕ್ಷಿಣ ಕರ್ನಾಟಕದತ್ತ ವಲಸೆ ಬರುತ್ತಿದ್ದು, ಇವರಲ್ಲಿ ಮುಖ್ಯವಾಗಿ ಅಸಂಘಟಿತ ವಲಯದಲ್ಲಿ ಕೆಲಸಗಾರರಾಗಿದ್ದಾರೆ, ಬಹುತೇಕ ಯುವಕರು, ನಿರುದ್ಯೋಗಿಗಳಾಗಿದ್ದು ಕೌಶಲ್ಯ ನೈಪುಣ್ಯತೆ ಇಲ್ಲದವರಾಗಿರುತ್ತಾರೆ. ಕರ್ನಾಟಕದ ದಕ್ಷಿಣ ಜಿಲ್ಲೆಗಳು ಅದರಲ್ಲೂ ರಾಜಧಾನಿ ಬೆಂಗಳೂರು ಅತಿಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿದ್ದು ಇವರ ಜೀವನೋಪಾಯಕ್ಕೆ ವಿವಿಧ ವಲಯಗಳಲ್ಲಿ ಉದ್ಯೋಗ ಅವಲಂಬಿಸಿದ್ದಾರೆ. ಹೆಚ್ಚಳವಾಗುತ್ತಿರುವ ನಗರ ಜನಸಂಖ್ಯೆ ವಲಸಿಗರಿಂದ ಕೂಡಿದೆ

### ಸವಾಲುಗಳು ಮತ್ತು ಸಲಹೆಗಳು

2025 ರ ಅವಧಿಗೆ ವಿಶ್ವದ ಕಾರ್ಮಿಕ ವಲಯದಲ್ಲಿ ಭಾರತದ ಯುವಕರ ಪಾಲು 1/4 ಭಾಗ ಎಂಬುದು ಇಲ್ಲಿ ಗಮನಾರ್ಹ. ಕರ್ನಾಟಕದಲ್ಲಿ ಹೆಚ್ಚಳವಾಗುತ್ತಿರುವ ಯುವಕರ ಸಂಖ್ಯೆ ದೇಶದ ಸರಾಸರಿಗಿಂತಲೂ ಹೆಚ್ಚಿದ್ದು, ಇವರನ್ನು ಸಾಮಾನ್ಯ ವಿದ್ಯಾವಂತರನ್ನಾಗಿಸುವ ಜೊತೆಗೆ ಕೌಶಲ್ಯ ಪೂರಿತ ವಿದ್ಯಾವಂತರನ್ನಾಗಿ ಮಾಡುವುದು ಆದ್ಯತೆ ಪಡೆಯಬೇಕು. ಹೆಚ್ಚಾಗುತ್ತಿರುವ ಯುವ ಜನಾಂಗಕ್ಕೆ ಸರಿಸಮವಾಗಿ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಇವರ ಸದುಪಯೋಗ ಪಡೆದುಕೊಳ್ಳುವ ಅನಿವಾರ್ಯತೆ ಇದೆ. ಹೆಚ್ಚು ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕತೆ, ನೈಪುಣ್ಯತೆ, ಕೌಶಲ್ಯ ಪೂರಿತ ಹಾಗೂ ವಿಷಯಾಧರಿತ ಶಿಕ್ಷಣವನ್ನು ನೀಡುವ ಮೂಲಕ ಯುವಕರ ಪಾಲಿಗೆ ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡಬೇಕಾದ ಅನಿವಾರ್ಯತೆ ಇದೆ. ❑

# ನೆಹರೂ ಯುವ ಕೇಂದ್ರ : ಸಬಲೀಕರಣದ ಆಶಾಕಿರಣ

* ಎಸ್. ಸಿದ್ದರಾಮಪ್ಪ



ಯುವಜನರ ಮುಖವಾಣಿಯಾಗಿರುವ ನೆಹರೂ ಯುವ ಕೇಂದ್ರಗಳು ಕಲೆ, ಸಂಸ್ಕೃತಿ, ಭಾಷೆ, ಗ್ರಾಮೀಣ ಕ್ರೀಡೆ, ಯುವಜನರಲ್ಲಿ ಸಚ್ಚಾರಿತ್ರ ಮೂಡಿಸುವುದರೊಂದಿಗೆ, ಬದಲಾಗುತ್ತಿರುವ ಪ್ರಪಂಚದ ಆಗು–ಹೋಗುಗಳನ್ನು ಅವರಿಗೆ ತಿಳಿಸುವುದರೊಂದಿಗೆ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸವನ್ನು ಮಾಡುತ್ತಿವೆ.

ಭಾರತ ಸರ್ಕಾರವು ದೇಶದ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬದ ವರ್ಷಾಚರಣೆಯ ಸಂದರ್ಭದಲ್ಲಿ ಅಂದರೆ 1972 ನೇ ಇಸವಿಯಲ್ಲಿ ದೇಶದ ಹಲವು ಜಿಲ್ಲೆಗಳಲ್ಲಿ ನೆಹರೂ ಯುವ ಕೇಂದ್ರಗಳನ್ನು ಸ್ಥಾಪಿಸಿತು. ನಾಡಿನ ಗ್ರಾಮೀಣ ಭಾಗದ ಬಹುಸಂಖ್ಯಾತ ಯುವಜನರನ್ನು ಯುವಕ ಸಂಘ, ಯುವತಿ ಮಂಡಳಿ ಹಾಗೂ ಮಹಿಳಾ ಮಂಡಳಿಗಳಾಗಿ ಸಂಘಟಿಸುವುದರೊಂದಿಗೆ ಅವರನ್ನು ಜವಾಬ್ದಾರಿಯುತ ಪ್ರಜೆಗಳಾಗಿಸುವ ನಿಟ್ಟಿನಲ್ಲಿ ವ್ಯಕ್ತಿತ್ವ ವಿಕಸನ, ಕೌಶಲ್ಯ ಬಲವರ್ಧನೆ ಹಾಗೂ ಧನಾತ್ಮಕ ದೃಷ್ಟಿಕೋನವನ್ನು ಮೂಡಿಸುವ ಸಲುವಾಗಿ ವಿವಿಧ ಪ್ರಕಾರದ ರಚನಾತ್ಮಕ ತರಬೇತಿಗಳನ್ನು ನೀಡುವುದರೊಂದಿಗೆ ಅವರು ಸಮುದಾಯ ಮತ್ತು ರಾಷ್ಟ್ರಾಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗುವಂತೆ ಮಾಡುವುದು ಈ ಸ್ಥಾಪನೆಯ ಉದ್ದೇಶ. ಈ ಕೇಂದ್ರಗಳ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನ, ಸೂಕ್ತ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗಾಗಿ 1987–88 ನೇ ಇಸವಿಯಲ್ಲಿ ನೆಹರೂ ಯುವ ಕೇಂದ್ರ ಸಂಘಟನೆಯನ್ನು ಒಂದು ಸ್ವಾಯತ್ತ ಸಂಘಟನೆಯನ್ನಾಗಿ ರೂಪಿಸಿದ ಕೇಂದ್ರ ಸರ್ಕಾರವು ದೇಶದ 623 ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದರೊಂದಿಗೆ ಬಹುಸಂಖ್ಯೆಯ ಯುವಜನರನ್ನು ಮುಖ್ಯವಾಹಿನಿಗೆ ತರುವ ಪ್ರಕ್ರಿಯೆಯಲ್ಲಿ ತೊಡಗಿಸಿದೆ. ಇಂದು ದೇಶದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ನೆಹರೂ ಯುವ ಕೇಂದ್ರಗಳು ತಮ್ಮ ವ್ಯಾಪ್ತಿಯ ಯುವಜನರನ್ನು ಈ ಮುಂದಿನ ರಾಷ್ಟ್ರೀಯ ಗುರಿಗಳನ್ನು ತಲುಪಲು ಸಹಕಾರಿಯಾಗುವಂತೆ ಕಾರ್ಯಕ್ರಮ ಸಂಘಟಿಸುತ್ತಿವೆ. ಅವುಗಳೆಂದರೆ, * ರಾಷ್ಟ್ರಾಭಿವೃದ್ಧಿ ಪ್ರಕ್ರಿಯೆಯಲ್ಲಿ ಯುವಜನರನ್ನು ಸಕ್ರಿಯವಾಗಿ ತೊಡಗಿಸುವುದು. * ಯುವಜನರಿಗೆ ವಿವಿಧ ಅಗತ್ಯಾಧರಿತ ಮತ್ತು ಸ್ಥಳಾಧರಿತ ತರಬೇತಿಗಳನ್ನು ನೀಡುವುದರೊಂದಿಗೆ, ಅವರು ಆಧುನಿಕರನ್ನು, ಜಾತ್ಯತೀತ ಮತ್ತು ತಾಂತ್ರಿಕ ಉನ್ನತಿಯ ಪ್ರಗತಿಶೀಲ ನಾಡಿನ ಮುಖಂಡರುಗಳನ್ನಾಗಿ ರೂಪಿಸುವುದು. * ಜಾತಿ–ಧರ್ಮ–ಭಾಷೆಗಳ ನಡುವಣ ಸೌಹಾರ್ದತೆ ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಪ್ರಕ್ರಿಯೆಯಲ್ಲಿ ಅವರನ್ನು ತೊಡಗಿಸುವುದು.

ಮೇಲಿನ ರಾಷ್ಟ್ರೀಯ ಗುರಿ–ಉದ್ದೇಶಗಳನ್ನು ತಲುಪುವ ಸಲುವಾಗಿ ನೆಹರೂ ಯುವ ಕೇಂದ್ರ ಸಂಘಟನೆಯು ಭಾರತ ಸರ್ಕಾರದ ಯುವ ಕಾರ್ಯಕ್ರಮ ಹಾಗೂ ಕ್ರೀಡಾ ಸಚಿವಾಲಯದ ಹಲವಾರು ಕಾರ್ಯಕ್ರಮಗಳ ಜೊತೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳ ಯುವಜನ ಕೇಂದ್ರಿತ ಕಾರ್ಯಕ್ರಮಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಸಮುದಾಯವನ್ನು ತೊಡಗಿಸುವ ಕೆಲಸವನ್ನು ಮಾಡುತ್ತಲಿದೆ.

ಇದೇ ಜನವರಿ ತಿಂಗಳ 12ನೇ ತಾರೀಖಿನಿಂದ 16ನೇ ತಾರೀಖಿನವರೆಗೆ ಹರಿಯಾಣ ರಾಜ್ಯದ ರೋಹಟಕ್ ನಗರದಲ್ಲಿ ಜರುಗಿದ 21ನೇ "ರಾಷ್ಟ್ರೀಯ ಯುವ ಮಹೋತ್ಸವ"ದ ಭಾಗೀದಾರ ಯುವಜನರನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸಿಂಗ್ ಮುಖೇನ ಮಾತನಾಡಿದ ಸನ್ಮಾನ್ಯ ಪ್ರಧಾನ ಮಂತ್ರಿಗಳು "ಮೂರು–ಸಿ"ಗಳಾದ "Collectivity-Connectivity-Creativity" (ಒಗ್ಗಟ್ಟು

* ಜಿಲ್ಲಾ ಯುವಜನ ಸಮನ್ವಯಾಧಿಕಾರಿಗಳು, ನೆಹರೂ ಯುವ ಕೇಂದ್ರ, ಮಂಡ್ಯ

ಸಂಪರ್ಕ ಕ್ರಿಯಾಶೀಲತೆ)ಗಳ ಮೂಲಕ ನಾಡು ಕಟ್ಟುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು. ಈ ಉದ್ದೇಶಕ್ಕಾಗಿ ನೆಹರೂ ಯುವ ಕೇಂದ್ರಗಳು ದೇಶದಾದ್ಯಂತ 2016-17 ನೇ ಸಾಲಿನಲ್ಲಿ ಈ ಮುಂದಿನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿವೆ.

* ಯುವ ಸಂಘಗಳ ಅಭಿವೃದ್ಧಿ ಕಾರ್ಯಕ್ರಮ
* ಯುವ ಮುಂದಾಳತ್ವ ಹಾಗೂ ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರ
* ಯುವ ಸಂಘಗಳಿಗೆ ಕ್ರೀಡಾ ಸಾಮಗ್ರಿ ವಿತರಣೆ
* ತಾಲೂಕು ಮಟ್ಟದ ಕ್ರೀಡಾ ಕೂಟಗಳು
* ಜಿಲ್ಲಾ ಮಟ್ಟದ ಕ್ರೀಡಾಕೂಟ
* ಅಲ್ಪಾವಧಿ ಮತ್ತು ದೀರ್ಘಾವಧಿಯ ವೃತ್ತಿ ತರಬೇತಿ ಕಾರ್ಯಕ್ರಮಗಳು
* ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ
* ರಾಷ್ಟ್ರೀಯ/ಅಂತಾರಾಷ್ಟ್ರೀಯ ದಿನ-ಸಪ್ತಾಹ ಆಚರಣೆ
* ರಾಷ್ಟ್ರೀಯ ಯುವ ದಿನ ಮತ್ತು ಸಪ್ತಾಹ ಆಚರಣೆ
* ಜಿಲ್ಲಾ ಯುವಜನ ಸಮಾವೇಶ ಮತ್ತು ಯುವಕೃತಿ ಕಾರ್ಯಕ್ರಮ
* ಅತ್ಯುತ್ತಮ ಯುವಸಂಘ/ಮಹಿಳಾ ಮಂಡಳಿಗೆ ಜಿಲ್ಲಾ ಪ್ರಶಸ್ತಿ

ಮೇಲಿನ ಕಾರ್ಯಕ್ರಮಗಳ ಮೂಲಕ ಯುವಜನರನ್ನು ಹೋಬಳಿ-ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಂಘಟಿಸುವುದರೊಂದಿಗೆ ಯುವ ಕಾರ್ಯಕ್ರಮ ಹಾಗೂ ಕ್ರೀಡಾ ಸಚಿವಾಲಯದ ಹಲವು ಕಾರ್ಯಕ್ರಮಗಳ ಅನುಷ್ಠಾನದಲ್ಲಿಯೂ ಸಹ ನೆಹರೂ ಯುವ ಕೇಂದ್ರಗಳು ಸಹಭಾಗಿತ್ವವನ್ನು ವಹಿಸುತ್ತಲಿವೆ. ಜೊತೆಗೆ ಕೇಂದ್ರ ಪುರಸ್ಕೃತ ಯೋಜನೆಗಳಾದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಪ್ರಧಾನ ಮಂತ್ರಿ ಜನ-ಧನ ಯೋಜನೆ, ಸ್ವಚ್ಛ ಭಾರತ ಅಭಿಯಾನ, ಫಸಲು ಬಿಮಾ ಯೋಜನೆ, ಪ್ರಧಾನ ಮಂತ್ರಿ ಗ್ರಾಮೀಣ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ, ಮೇಕ್ ಇನ್ ಇಂಡಿಯಾ, ಸ್ಕಿಲ್ ಇಂಡಿಯಾ, ಬೇಟಿ ಬಚಾವೊ ಬೇಟಿ ಪಢಾವೊ, ಪ್ರಧಾನ



ಮಂತ್ರಿ ಉಜ್ವಲ ಯೋಜನೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಜ್ಯೋತಿ ಯೋಜನೆ, ವರಿಷ್ಠ ಬೀಮಾ ಯೋಜನೆ, ಉಡಾನ್-ಸಾಗರ ಮಾಲಾ ಯೋಜನೆಗಳು ಹಾಗೂ ಸ್ಟಾರ್ಟ-ಅಪ್ ಇಂಡಿಯಾ, ಸ್ಟ್ಯಾಂಡ್-ಅಪ್ ಇಂಡಿಯಾ ಯೋಜನೆಗಳ ಕುರಿತು ಜನಸಮುದಾಯಕ್ಕೆ ಅದರಲ್ಲಿಯೂ ಯುವಜನತೆಗೆ ಮಾಹಿತಿಯನ್ನು ತಿಳಿಯಪಡಿಸುವ ಕೆಲಸವನ್ನು ಸಹ ಮಾಡುತ್ತಲಿವೆ.

ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ನೆಹರೂ ಯುವ ಕೇಂದ್ರಗಳು ವಿಶೇಷ ಕೆಲಸವನ್ನು ಮಾಡುತ್ತಲಿವೆ. ಉದಾಹರಣೆಗೆ, ಮಂಡ್ಯದ ನೆಹರೂ ಯುವ ಕೇಂದ್ರವು ರಾಜ್ಯದ ಅರಣ್ಯ ಇಲಾಖೆಯ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಅನುಷ್ಠಾನದ ಭಾಗೀದಾರ ಸಂಸ್ಥೆಯಾಗಿದ್ದು, ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ 200 ಜನ ರೈತರನ್ನು ಒಗ್ಗೂಡಿಸಿ, ಅವರುಗಳ ಜಮೀನಿನಲ್ಲಿ ಒಟ್ಟು 68,000 ಸಸಿಗಳನ್ನು ನೆಡಲಾಗಿದೆ. ಈ ಮಹತ್ಕಾರ್ಯದ ಜವಾಬ್ದಾರಿಯನ್ನು ಕೆ. ಆರ್. ಪೇಟೆಯ ಯುವ ಮುಖಂಡ ಹಾಗೂ ಇಲಾಖೆ ಮಾಜಿ ಸ್ವಯಂ-ಸೇವಕರೂ ಆದ ಶ್ರೀ. ಎನ್. ಪರಮೇಶ್ ವಹಿಸಿಕೊಂಡು ನಿರ್ವಹಿದ್ದಾರಲ್ಲದೆ, ಪರಿಸರ ಮಿತ್ರ ಪ್ರಶಸ್ತಿಗೂ ಭಾಜನರಾಗಿರುತ್ತಾರೆ. ಇಂತಹ ಹತ್ತು-ಹಲವು ಕಾರ್ಯಕ್ರಮಗಳ ಮೂಲಕ ಜಿಲ್ಲೆಯಾದ್ಯಂತ ಯುವಜನರ ಮುಖವಾಣಿಯಾಗಿರುವ ನೆಹರೂ ಯುವ ಕೇಂದ್ರಗಳು ಕಲೆ, ಸಂಸ್ಕೃತಿ, ಭಾಷೆ, ಗ್ರಾಮೀಣ ಕ್ರೀಡೆ, ಯುವಜನರಲ್ಲಿ ಸಚ್ಚಾರಿತ್ರ ಮೂಡಿಸುವುದರೊಂದಿಗೆ, ಬದಲಾಗುತ್ತಿರುವ ಪ್ರಪಂಚದ ಆಗು-ಹೋಗುಗಳನ್ನು ಅವರಿಗೆ ತಿಳಿಸುವುದರೊಂದಿಗೆ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸವನ್ನು ಮಾಡುತ್ತಲಿವೆ. (ಇಲಾಖೆಯ ಹೆಚ್ಚು ಮಾಹಿತಿಗಾಗಿ www.nyks.org ಯನ್ನು ಸಂಪರ್ಕಿಸಬಹುದು.)

ಕರ್ನಾಟಕದ 27 ಜಿಲ್ಲೆಗಳಲ್ಲಿ ನೆಹರೂ ಯುವ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು ಅವುಗಳ ವಿವರಗಳು ಮುಂದಿನಂತಿವೆ.

1. ಕೋಲಾರ. 2. ಬೆಂಗಳೂರು ಗ್ರಾಮಾಂತರ. 3. ಬೆಂಗಳೂರು ನಗರ. 4. ಮಂಡ್ಯ. 5. ಮೈಸೂರು. 6. ಚಾಮರಾಜನಗರ. 7. ಹಾಸನ. 8. ಕೊಡಗು. 9. ದಕ್ಷಿಣ ಕನ್ನಡ. 10. ಉಡುಪಿ. 11. ಚಿಕ್ಕಮಗಳೂರು. 12. ಶಿವಮೊಗ್ಗ. 13. ಉತ್ತರ ಕನ್ನಡ. 14. ಬೆಳಗಾವಿ. 15. ಧಾರವಾಡ. 16. ಹಾವೇರಿ. 17. ಗದಗ. 18. ಚಿತ್ರದುರ್ಗ. 19. ದಾವಣಗೆರೆ. 20. ತುಮಕೂರು. 21. ಬಳ್ಳಾರಿ. 22. ರಾಯಚೂರು. 23. ಕೊಪ್ಪಳ. 24. ಕಲಬುರ್ಗಿ. 25. ಬೀದರ್. 26. ವಿಜಯಪುರ. 27. ಬಾಗಲಕೋಟೆ.

ನೆಹರೂ ಯುವ ಕೇಂದ್ರಗಳು ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳು.

**01. ಯುವ ಸಂಘಗಳ ಅಭಿವೃದ್ಧಿ ಕಾರ್ಯಕ್ರಮ:** ಜಿಲ್ಲೆಯ ವ್ಯಾಪ್ತಿಯ ಪ್ರತೀ ಗ್ರಾಮವೂ ಸಹ ಒಂದು ಯುವ ಸಂಘ ಮತ್ತು ಒಂದು ಯುವ ಮಂಡಳಿಯನ್ನು ಹೊಂದಬೇಕು ಹಾಗೂ ಈ ಸಂಘಗಳು ನೆಹರೂ ಯುವ ಕೇಂದ್ರಗಳಲ್ಲಿ ಸಂಯೋಜನೆಗೊಂಡು ಗ್ರಾಮಗಳ ವಿಕಾಸ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂಬ ಭಾರತ ಸರ್ಕಾರದ ಹಾಗೂ ಸಚಿವಾಲಯದ ಉದ್ದೇಶವನ್ನು ಸಾಕಾರಗೊಳಿಸಲು ರೂಪುಗೊಂಡ ಕಾರ್ಯಕ್ರಮವು ಇದಾಗಿದೆ. ಈ ಕಾರ್ಯಕ್ರಮದಲ್ಲಿ ನೆಹರೂ ಯುವ ಕೇಂದ್ರಗಳ ಸ್ವಯಂ-ಸೇವಕರು ಹಾಗೂ ಯುವ ಮುಖಂಡರುಗಳನ್ನೊಳಗೊಂಡ 10 ಜನರ ತಂಡವು 05 ಗುಂಪುಗಳಾಗಿ ಆಯ್ಕೆ ಮಾಡಿದ ಒಂದು ತಾಲೂಕಿನ 50 ಗ್ರಾಮಗಳನ್ನು 05 ದಿನಗಳ ಅವಧಿಯಲ್ಲಿ ಭೇಟಿ ಮಾಡಿ ಅಲ್ಲಿನ ಯುವಜನರೊಂದಿಗೆ ಸಂಘದ ರಚನೆ, ನೊಂದಣಿ, ಅನುಷ್ಠಾನ ಮಾಡಬಹುದಾದ ಕಾರ್ಯಕ್ರಮಗಳ ಕುರಿತು ಚರ್ಚಿಸುವುದರೊಂದಿಗೆ ಅವರ ಮಾಹಿತಿಯನ್ನು ನೆಹರೂ ಯುವ ಕೇಂದ್ರ ಸಂಘಟನೆಯ ಅಂತರ್ಜಾಲದಲ್ಲಿ ದಾಖಲಿಸುತ್ತಾರೆ. ಈ ಮೂಲಕವಾಗಿ ಒಂದು ನಿರ್ದಿಷ್ಟ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯುವ/ಯುವತಿ/

ಮಹಿಳಾ ಸಂಘಟನೆಗಳ ಸಂಪೂರ್ಣ ಚಿತ್ರಣವನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ.

**02. ಯುವ ಮುಂದಾಳತ್ವ ಹಾಗೂ ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರ:** ಇದೊಂದು ವಿಶಿಷ್ಠವಾದ ವಸತಿಯುತ ತರಬೇತಿ ಶಿಬಿರವಾಗಿದ್ದು, ಇದರಲ್ಲಿ ಒಂದು ತಾಲೂಕಿನಿಂದ ಆಯ್ಕೆಯಾದ ಕನಿಷ್ಠ 40 ಯುವಜನರು 03 ದಿನಗಳ ಅವಧಿಗೆ ವಿವಿಧ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಪರಿಸರ, ಆರೋಗ್ಯ ಮುಂತಾದ ವಿಷಯಗಳ ಕುರಿತು ಸಹಭಾಗಿತ್ವ ತರಬೇತಿಯನ್ನು ಪಡೆಯುತ್ತಾರೆ. ತರಬೇತಿಯುದ್ದಕ್ಕೂ ಅವರ ವ್ಯಕ್ತಿತ್ವ ವಿಕಸನ, ಮುಂದಾಳತ್ವ ಹಾಗೂ ಭಾಷಣ ಕಲೆಯ ಕುರಿತು ತರಬೇತಿಯನ್ನು ನೀಡುವುದರೊಂದಿಗೆ ಅವರು ಸಚ್ಚಾರಿತ್ರ್ಯದೊಂದಿಗೆ ಸಮಾಜಮುಖಿಗಳಾಗಿ ಕಾರ್ಯನಿರ್ವಹಿಸುವಂತೆ ತಯಾರು ಮಾಡಲಾಗುತ್ತದೆ.

**03. ತಾಲೂಕು ಮತ್ತು ಜಿಲ್ಲಾ ಮಟ್ಟದ ಕ್ರೀಡಾ ಕೂಟಗಳು:** ಗ್ರಾಮೀಣ ಭಾಗಗಳಲ್ಲಿ ವಾಸ ಮಾಡುವ ವಿದ್ಯಾರ್ಥಿಗಳಲ್ಲದ ಹೆಚ್ಚು ತರಬೇತಿಯನ್ನೂ ಪಡೆಯದ ಯುವಜನರೂ ಕೂಡ ಕ್ರೀಡಾಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಈ ಕೂಟಗಳನ್ನು ಸಂಘಟಿಸುತ್ತಿದ್ದು, ಇವುಗಳಲ್ಲಿ ಗ್ರಾಮಗಳ ಹೆಚ್ಚಿನ ಸಂಖ್ಯೆಯ ಯುವಕ/ಯುವತಿಯರು ಭಾಗವಹಿಸುತ್ತಿದ್ದಾರೆ.

**04. ಅಲ್ಪಾವಧಿ ಮತ್ತು ದೀರ್ಘಾವಧಿಯ ವೃತ್ತಿ ತರಬೇತಿ ಕಾರ್ಯಕ್ರಮಗಳು:** ಸೌಲಭ್ಯವಂಚಿತ ಗ್ರಾಮಗಳ ಯುವಜನತೆಗೂ ಕೂಡ ಅವರ ಆಸಕ್ತಿಗನುಗುಣವಾಗಿ ವೃತ್ತಿ ತರಬೇತಿಯು ಸಿಗಬೇಕು ಹಾಗೂ ಅದು ಅವರ ಆದಾಯ ವೃದ್ಧಿಗೆ ಸಹಾಯಕವಾಗಬೇಕು ಎಂಬ ಸದುದ್ದೇಶದಿಂದ 2/4 ತಿಂಗಳ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದ್ದು, ಈ ತರಬೇತಿಗಳ ಶಿಕ್ಷಕರಾಗಿ ಈ ಮೊದಲು ನಮ್ಮಲ್ಲಿಯೇ ತರಬೇತಿ ಪಡೆದ ಯುವಕರು/ಯುವತಿಯರು ಕಾರ್ಯನಿರ್ವಹಿಸುತ್ತಾರೆ.

**05. ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ:** ಹಲವಾರು ಕಾರಣಗಳಿಂದ ಗ್ರಾಮೀಣ ಸಾಂಸ್ಕೃತಿಕ ಕಲೆಗಳು ಮರೆಯಾಗುತ್ತಿರುವ ಈ ಸಂದಿಗ್ಧ ಸಮಯದಲ್ಲಿ ಈ ಕಲೆಗಳ ಕಡೆಗೆ ಯುವಜನರನ್ನು ಆಕರ್ಷಿಸುವ ಸಲುವಾಗಿ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೇಶದಾದ್ಯಂತ ಸಂಘಟಿಸುತ್ತಿದ್ದು, ಇಲ್ಲಿ ಯುವಜನರಿಗೆ ತಮ್ಮ ಜನಪದ ಕಲೆಗಳ ಪ್ರದರ್ಶನ ಮತ್ತು ಕಲಿಕೆಗೆ ಅವಕಾಶ ಮಾಡಿಕೊಡಲಾಗುತ್ತದೆ.

**06. ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಹತ್ವದ ದಿನ/ಸಪ್ತಾಹ ಆಚರಣೆ:** ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಹತ್ವದ ದಿನಗಳು ಹಾಗೂ ಸಪ್ತಾಹಗಳನ್ನು ಗ್ರಾಮ ಮಟ್ಟದಲ್ಲಿ ಆಚರಿಸುವ ಮೂಲಕವಾಗಿ ಯುವಜನರಿಗೆ ಅವುಗಳ ಮಹತ್ವವನ್ನು ತಿಳಿಸಿ ಹೇಳುವುದು ಹಾಗೂ ಅವರ ಜೀವನ ಸಂದೇಶವನ್ನು ಯುವಜನರು ಅನುಸರಿಸುವಂತೆ ಮಾಡುವುದು ಇದರ ಉದ್ದೇಶವಾಗಿದೆ. ಈ ಕಾರ್ಯಕ್ರಮಗಳಿಗೆ ಯುವವಜನರಿಂದ ಅತ್ಯುತ್ತಮ ಪ್ರತಿಕ್ರಿಯೆಯು ವ್ಯಕ್ತವಾಗುತ್ತಲಿದೆ.

**07. ರಾಷ್ಟ್ರೀಯ ಯುವ ದಿನ ಮತ್ತು ಸಪ್ತಾಹ ಆಚರಣೆ:** ದಿವ್ಯ ಚೇತನ ಸ್ವಾಮಿ ವಿವೇಕಾನಂದರ ಜೀವನಾದರ್ಶಗಳ ಕಡೆಗೆ ಯುವ ಜನರನ್ನು ಆಕರ್ಷಿಸಬೇಕೆಂಬ ಸದುದ್ದೇಶದಿಂದ ಪ್ರತೀ ವರ್ಷ ಜನವರಿ 12ನೇ ತಾರೀಖಿನಿಂದ 19ನೇ ತಾರೀಖಿನವರೆಗೆ ದೇಶದೆಲ್ಲೆಡೆ ಸಂಘಟಿಸುವ ಕಾರ್ಯಕ್ರಮಗಳಂತೂ ಅರ್ಥಪೂರ್ಣ. ಈ ಅವಧಿಯಲ್ಲಿ, ಉಪನ್ಯಾಸ, ಚರ್ಚಾಗೋಷ್ಠಿ, ಶ್ರಮದಾನ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಆರೋಗ್ಯ ಶಿಬಿರಗಳು ಮತ್ತಿತರೆ ಹತ್ತು-ಹಲವು ಕಾರ್ಯಚಟುವಟಿಕೆಗಳ ಮೂಲಕವಾಗಿ ಯುವಜನರಲ್ಲಿ ಸಮಾಜ ಮತ್ತು ದೇಶದ ಕುರಿತು ಜವಾಬ್ದಾರಿಯನ್ನು ಮೂಡಿಸುವ ಕೆಲಸವಾಗುತ್ತಲಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ದೇಶದ ಒಂದು ಪ್ರಮುಖ ಕಾರ್ಯಕ್ರಮವಾಗಿ ಜನವರಿ 12 ರಿಂದ 16ರವರೆಗೆ ಭಾರತ ಸರ್ಕಾರವು ಸಂಘಟಿಸುತ್ತದೆ.

**08. ಜಿಲ್ಲಾ ಯುವಜನ ಸಮಾವೇಶ:** ಜಿಲ್ಲೆಯ ಯುವಜನರನ್ನು ಹಲವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಪರಿಸರ, ಆರೋಗ್ಯ ಮುಂತಾದ ವಿಷಯಗಳ ಕುರಿತು ಸಂಘಟಿಸಲು ತಯಾರು ಮಾಡುವ ಉದ್ದೇಶವನ್ನು ಹೊಂದಿರುವ



ಈ ಕಾರ್ಯಕ್ರಮವು ಹಲವು ಪ್ರಮುಖ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಯುವಜನರು ಸಮಾಗಮ ಹೊಂದುವ ಕಾರ್ಯಕ್ರಮವಾಗಿದೆ. ದಿನವಿಡೀ ಜರುಗುವ ಈ ಸಮಾವೇಶವು ಹಲವು ಉತ್ತಮ ಚರ್ಚೆಗಳಿಗೆ ಹಾಗೂ ಮನೋಬದಲಾವಣೆಯ ಒಂದು ಉತ್ತಮ ವೇದಿಕೆಯಾಗಿದೆ.

**09. ಅತ್ಯುತ್ತಮ ಯುವ ಸಂಘಗಳಿಗೆ ಪ್ರಶಸ್ತಿ:** ಜಿಲ್ಲೆಯ ವ್ಯಾಪ್ತಿಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಯುವಸಂಘಗಳಿಗೆ ಪ್ರೋತ್ಸಾಹ ನೀಡುವ ಒಂದು ಯೋಜನೆಯು ಇದಾಗಿದ್ದು, ಇದು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿಯೂ ಅನುಷ್ಠಾನಗೊಳ್ಳುತ್ತಲಿದೆ.

ಈ ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ, ಹಲವು ವಿಶೇಷ ಕಾರ್ಯಕ್ರಮಗಳನ್ನೂ ಸಹ ನೆಹರೂ ಯುವ ಕೇಂದ್ರಗಳು ಸಂಘಟಿಸುತ್ತಿದ್ದು, ಅವುಗಳ ವಿವರಗಳು ಮುಂದಿನಂತಿವೆ.

01. ಜೀವನ ನಿರ್ವಹಣಾ ಕೌಶಲ್ಯ ತರಬೇತಿ ಶಿಬಿರ. 02. ಯುವ ಮುಂದಾಳತ್ವ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ. 03. ಮಹಾತ್ಮಾ ಗಾಂಧಿ ಯುವ ಸ್ವಚ್ಛತಾ ಅಭಿಯಾನ ಹಾಗೂ ಶ್ರಮದಾನ ಕಾರ್ಯಕ್ರಮ. 04. ಯುವ ಆದರ್ಶ ಗ್ರಾಮ ವಿಕಾಸ ಕಾರ್ಯಕ್ರಮ. 05. ರಾಷ್ಟ್ರೀಯ ಭಾವೈಕ್ಯ ಶಿಬಿರಗಳು. 06. ಸಾಹಸ ಕಾರ್ಯಕ್ರಮಗಳು (ನೆಲ-ಜಲ-ವಾಯು ಸಾಹಸ ಕಾರ್ಯಕ್ರಮಗಳು. 07. ಅಂತಾರಾಷ್ಟ್ರೀಯ ಯೋಗ ದಿವಸ. ಈ ಕಾರ್ಯಕ್ರಮಗಳೊಂದಿಗೆ, ಕೇಂದ್ರ ಮತ್ತು ಆಯಾ ರಾಜ್ಯ ಸರ್ಕಾರಗಳು ಅನುಷ್ಠಾನ ಮಾಡುವ ವಿವಿಧ ಗ್ರಾಮ ವಿಕಾಸ ಕಾರ್ಯಕ್ರಮಗಳಿಗೆ ಯುವಜನರನ್ನು ಸಜ್ಜುಗೊಳಿಸುವ ಕಾರ್ಯವನ್ನು ನೆಹರೂ ಯುವ ಕೇಂದ್ರಗಳು ಯುವಜನರು ಹಾಗೂ ಸ್ವಯಂ-ಸೇವಕರುಗಳ ನೆರವಿನೊಂದಿಗೆ ಮಾಡುತ್ತಲಿವೆ. ❑

# ಕಲಬುರಗಿಯಲ್ಲಿ ಕೊನರಿದ "ಕೂಸು"

* ಹೆಪ್ಸಿಬಾ ರಾಣಿ ಕೋರ್ಲಪಟಿ



**ಸ್ವಚ್ಛ ಭಾರತ್ ಮಿಷನ್ ಅಡಿ ಬಯಲು ಬಹಿರ್ದೆಸೆ ಮುಕ್ತಗೊಳಿಸುವ ಉದ್ದೇಶದಿಂದ ಮಹಿಳೆಯರನ್ನು ಗಮನದಲ್ಲಿರಿಸಿ ಕಲಬುರಗಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ರೂಪಿಸಲಾಗಿರುವ "ಕೂಸು" ಮೊದಲ ಹಂತದಲ್ಲಿ ಗರ್ಭಿಣಿಯರು ಇರುವ ಕುಟುಂಬಗಳನ್ನು ಗುರಿಯಾಗಿರಿಸಿಕೊಂಡಿದೆ. ವೈಯಕ್ತಿಕ ಶೌಚಾಲಯ ಕಟ್ಟಿಸಿಕೊಳ್ಳುವ ಇಂತಹ ಕುಟುಂಬಗಳ ಗರ್ಭಿಣಿಯರಿಗೆ ಸೀಮಂತ ಮಾಡಲಾಗುತ್ತಿದೆ.**

"ಗ್ರಾಮಗಳನ್ನು ಶೋಷಣೆ ಮುಕ್ತ, ಭಯಮುಕ್ತ, ತ್ಯಾಜ್ಯಮುಕ್ತದ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಪರಿವರ್ತಿಸುವ ಮೂಲಕ ಗ್ರಾಮೀಣ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಉದ್ದೇಶದ ಪಂಚಾಯತ ರಾಜ್ ಕಾಯ್ದೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರುತ್ತದೆ. ಕೆಳಹಂತದಿಂದ ಯೋಜನೆಗಳನ್ನು ರೂಪುಗೊಳಿಸುವ ಗ್ರಾಮೀಣ ಬದುಕಿನ ನೈಜ ಅಗತ್ಯಗಳನ್ನು ಪರಿಗಣಿಸುವ ವ್ಯವಸ್ಥೆ ಜಾರಿಗೆ ತರಲು ಈ ಕಾಯ್ದೆ ಉಪಕರಣವಾಗಿ ಕಾರ್ಯನಿರ್ವಹಿಸುತ್ತದೆ". "ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ–ಘನತೆ ಕಾಪಾಡುವ ಸಮಾನತೆಯನ್ನು ಸುನಿಶ್ಚಿತಗೊಳಿಸುವ ಪಾರದರ್ಶಕ ವ್ಯವಸ್ಥೆಯನ್ನು ಪಾಲ್ಗೊಳ್ಳುವಿಕೆಯ ಮೂಲಕ ಅನುಷ್ಠಾನಗೊಳಿಸುವ ಮತ್ತು ಕುಂದುಕೊರತೆ ನಿವಾರಣೆಗೆ ಸ್ಪಂದನಶೀಲ ಕಾರ್ಯವಿಧಾನ ಕಲ್ಪಿಸುವ ವ್ಯವಸ್ಥೆ ರೂಪಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ದಿಸೆಯಲ್ಲಿ ಈ ತಿದ್ದುಪಡಿ ಅಸ್ತ್ರವಾಗಲಿದೆ" (ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ವಿಧೇಯಕ – 2015ರ ಪುಟ 10, 24).

ಕರ್ನಾಟಕ ಸರ್ಕಾರದ ಈ ಉದ್ದೇಶಗಳ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಪ್ರತಿ ಒಂದು ಕುಟುಂಬಕ್ಕೆ ಸ್ವಚ್ಛ ಭಾರತ ಮಿಷನ್ ಯೋಜನೆಯನ್ನು ತಲುಪಿಸಲು ಕಲಬುರಗಿ ಜಿಲ್ಲಾ ಪಂಚಾಯತ್ "ಕೂಸು" ಎಂಬ ಕಾರ್ಯಕ್ರಮ ರೂಪಿಸಿದೆ. ಜಿಲ್ಲೆಯಲ್ಲಿ ಬರುವ ಎಲ್ಲಾ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸುವಲ್ಲಿ "ಕೂಸು" ಎಂಬ ಹೊಸ ಶೀರ್ಷಿಕೆಯೊಂದಿಗೆ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಬಯಲು ಬಹಿರ್ದೆಸೆಗೆ ಹೋದಾಗ ಅನುಭವಿಸುತ್ತಿರುವ ತೊಂದರೆಗಳಿಂದ ಮುಕ್ತ ಮಾಡುವುದು, ಗ್ರಾಮೀಣ ಜನರ ದಿನನಿತ್ಯದ ಜೀವನದಲ್ಲಿ ಪರಸ್ಪರ ಗೌರವ–ಘನತೆ ಕಾಪಾಡಿಕೊಂಡು ಗೌರವಯುತ ಹಾಗೂ ಆರೋಗ್ಯಕರವಾದ ಸುಸಜ್ಜಿತ ಜೀವನವನ್ನು ನಡೆಸುವುದು, ಗ್ರಾಮಗಳು ಶೋಷಣೆ ಮುಕ್ತ, ಭಯಮುಕ್ತ ಮತ್ತು ರೋಗ–ರುಜನೆಗಳಿಂದ ಹಾಗೂ ತ್ಯಾಜ್ಯ ಮುಕ್ತ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ಮಾಡುವಲ್ಲಿ ಗಣನೀಯವಾಗಿ ಶ್ರಮಿಸುವ ಉದ್ದೇಶವನ್ನು ಹೊಂದಿದೆ. ಈ ಉದ್ದೇಶದಿಂದ ಕಲಬುರಗಿ ಜಿಲ್ಲಾ ಪಂಚಾಯತ, ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳಿಗೂ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಸುವ ಗುರಿ ಹೊಂದಿದ್ದು, ದಿನಾಂಕ 01-05-2017ರಿಂದ 10–05–2017 ರವರೆಗೆ ಕುಟುಂಬ ಸಮೀಕ್ಷೆ ಮಾಡಲಾಗಿದೆ. ಸದರಿ ಸಮೀಕ್ಷೆಯಲ್ಲಿ ಫಲಾನುಭವಿ ಶೌಚಾಲಯ ಹೊಂದಿರುವ ಹಾಗೂ ಹೊಂದಿರದೇ ಇರುವ ಕುರಿತು ಮಾಹಿತಿ ಹಾಗೂ ಶೌಚಾಲಯ ನಿರ್ಮಾಣಕ್ಕೆ ಸ್ಥಳಾವಕಾಶ ಇದೆ/ಇಲ್ಲ ಎನ್ನುವ ಕುರಿತು ಮಾಹಿತಿಯನ್ನು ಸಿದ್ಧಪಡಿಸಲಾಗಿದೆ.

**"ಕೂಸು ಕಾರ್ಯಕ್ರಮ"**

ಈ ಭಾಗದಲ್ಲಿ ಪ್ರೀತಿಯ ಸಂಕೇತವಾಗಿ ಕೂಸು ಎಂದು ಕರೆಯುವುದು ವಾಡಿಕೆಯಾಗಿರುತ್ತದೆ. ಅದರಂತೆ ಸಂತೋಷದ ಹಾಗೂ ಉತ್ತಮ ಭವಿಷ್ಯದ ಒಂದು ಸಂಕೇತವಾಗಿ, ಶುಚಿತ್ವ ಹಾಗೂ ಆರೋಗ್ಯದ ಕಡೆ ಮಹಿಳೆಯರ ದಿಟ್ಟ

* ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ, ಕಲಬುರಗಿ. E-mail : ceogulbarga@gmail.com

ಹೆಜ್ಜೆಯನ್ನು ಬಿಂಬಿಸುವ ಈ ಕಾರ್ಯಕ್ರಮಕ್ಕೆ ಕೂಸು ಎಂಬ ಹೆಸರನ್ನು ಇಡಲಾಗಿದೆ. ಸಾಮಾಜಿಕ ನ್ಯಾಯ ಒದಗಿಸುವಲ್ಲಿ "ಕೂಸು" ಕಾರ್ಯಕ್ರಮವು ಮಹತ್ವದ ಘಟ್ಟವಾಗಿದೆ. ಸಮಾಜದಲ್ಲಿರುವ ಯಾವುದೇ ತರಹದ ಜಾತಿ, ಧರ್ಮ ಹಾಗೂ ಪಂಥಗಳ ತಾರತಮ್ಯವಿಲ್ಲದೇ ಸರ್ಕಾರವು ಈ ಯೋಜನೆಯ ಮೂಲಕ ಎಲ್ಲಾ ಮಹಿಳೆಯರು ಸಮಾನರೆಂದು ಪರಿಗಣಿಸಿ ಕರ್ನಾಟಕ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಗರ್ಭಿಣಿ ಮಹಿಳೆಯರಿಗೆ ನೀಡಲಾಗುವುದು. "ಕೂಸು" ಕಾರ್ಯಕ್ರಮವು ಸಂಪ್ರದಾಯಯುತವಾಗಿ ಬಂದಂತಹ ಬಯಲು ಬಹಿರ್ದೆಸೆ ಎಂಬ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಿ ಹೊಸ ತಲೆಮಾರಿನ ಆಧುನಿಕ ಶೈಲಿಯನ್ನು ಅಳವಡಿಸಿಕೊಳ್ಳಲು ಬುನಾದಿಯಾಗಿದೆ.

### ಅನುಷ್ಠಾನದ ವಿಧಾನ

ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಡಿ "ಕೂಸು" ಶೀರ್ಷಿಕೆಯಡಿ ಜಿಲ್ಲೆಯಲ್ಲಿರುವ ಗ್ರಾಮೀಣ ಪ್ರದೇಶದ ಎಲ್ಲಾ ಗರ್ಭಿಣಿ ಮಹಿಳೆಯರ ಮನೆಯಲ್ಲಿ ಶೌಚಾಲಯ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಕೂಸು ಎಂದರೆ ಪ್ರತಿಯೊಬ್ಬರಲ್ಲೂ ಮಮತೆಯ, ಮಾತೃತ್ವ ಹಾಗೂ ಮುಗ್ಧ ಭಾವನೆಗಳು ಮೂಡುವದು. ಈ ಎಲ್ಲಾ ಅಂಶಗಳಿಗೆ ಪಾತ್ರಧಾರಿ ಹೆಣ್ಣು ಆಗಿರುವುದರಿಂದ ಅಂತಹ ಹೆಣ್ಣಿಗೆ ಗೌರವಾರ್ಥವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆ ಒದಗಿಸುವುದು ಹಾಗೂ ಆರೋಗ್ಯದ ಹಿತದೃಷ್ಟಿಯಿಂದ ಶೌಚಾಲಯ ಮತ್ತು ಆರೋಗ್ಯ ಕೇಂದ್ರಗಳಂತಹ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಸ್ತ್ರೀಯರಿಗೆ ಸಮಾಜದಲ್ಲಿ ರಕ್ಷಣೆಯನ್ನು ಒದಗಿಸಿ ಸುರಕ್ಷತೆಯಿಂದ ಜೀವನವನ್ನು ಮಾಡಲು ಅನುವು ಮಾಡಿಕೊಡುವುದು "ಕೂಸು" ಕಾರ್ಯಕ್ರಮದ ಉದ್ದೇಶವಾಗಿದೆ.

### ಪ್ರಾಯೋಗಿಕ ಕಾರ್ಯಕ್ರಮ

ಮೂರು ತಿಂಗಳ ಗರ್ಭಿಣಿ ಮಹಿಳೆಯರು ANC ತಪಾಸಣೆಗೆ ಬಂದಾಗ ಸದರಿ ಮಹಿಳೆಯರ ಮನೆಯಲ್ಲಿ ಶೌಚಾಲಯ ನಿರ್ಮಾಣ ಕುರಿತು ವೈದ್ಯರು ತಿಳಿವಳಿಕೆ ನೀಡುತ್ತಾರೆ. ಆಗ ಶೌಚಾಲಯ ನಿರ್ಮಾಣದ ಅರ್ಜಿ ತುಂಬಿಸಿಕೊಂಡು



ತದನಂತರ ಶೌಚಾಲಯ ನಿರ್ಮಾಣ ಕಾಮಗಾರಿಯನ್ನು ಆರಂಭಿಸುವುದೇ "ಕೂಸು" ಕಾರ್ಯಕ್ರಮದ ಉದ್ದೇಶ.

"ಮಾಡುವುದರ ಮೂಲಕ ಕಲಿ" ಎನ್ನುತ್ತಾರೆ. ಈ ಕಾರ್ಯಕ್ರಮದಡಿ ಮೊದಲನೇ ಹಂತದಲ್ಲಿ ಜಿಲ್ಲೆಯಲ್ಲಿ ಪ್ರತಿಯೊಂದು ತಾಲೂಕಿನಿಂದ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಸದರಿ ಗ್ರಾಮಗಳಲ್ಲಿ ಗರ್ಭಿಣಿ ಮಹಿಳೆಯರ ಮನೆಗಳಲ್ಲಿ ಶೌಚಾಲಯ ಇದೆ/ಇಲ್ಲ ಎಂಬುವುದರ ಕುರಿತು ಸಮೀಕ್ಷೆ ಮಾಡಿಸಿ ಅದರಲ್ಲಿ ಶೌಚಾಲಯ ಹೊಂದದ ಒಟ್ಟು 127 ಗರ್ಭಿಣಿ ಮಹಿಳೆಯರ ಮನೆಗಳಲ್ಲಿ ವೈಯಕ್ತಿಕ ಶೌಚಾಲಯ ಕಟ್ಟಿಕೊಳ್ಳಲು ಕೂಸು ಕಾರ್ಯಕ್ರಮದ ಮೂಲಕ ಆರಂಭಿಸಲಾಗಿದೆ. ತದನಂತರ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡಿರುವ ಪ್ರತಿ ತಾಲ್ಲೂಕಿನಿಂದ ಒಬ್ಬರು ಗರ್ಭಿಣಿ ಮಹಿಳೆಯನ್ನು ಜಿಲ್ಲಾ ಮಟ್ಟದಲ್ಲಿ ಕರೆಯಿಸಿ ಬೃಹತ್ ಸೀಮಂತ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಬಾಕಿ ಉಳಿದ ಗರ್ಭಿಣಿ ಮಹಿಳೆಯರಿಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯಲ್ಲಿಯೇ ಸೀಮಂತ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

### ಕೂಸು ವಿವಿಧ ಆಯಾಮ

✓ ಕರ್ನಾಟಕದಲ್ಲಿ ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಸದಸ್ಯರ ಚುನಾವಣೆಯಲ್ಲಿ 50% ರಷ್ಟು ಸ್ಥಾನ ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಸದರಿ ಮೀಸಲಾತಿಯ ಸದುಪಯೋಗವನ್ನು "ಕೂಸು" ಕಾರ್ಯಕ್ರಮದಂತಹ ಯೋಜನೆಗಳ ಮೂಲಕ ನಮ್ಮ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸಶಕ್ತಗೊಳಿಸಬೇಕಿದೆ. ಸಮಾಜದಲ್ಲಿ ಎಲ್ಲಾ ಮಹಿಳೆಯರು ಒಂದೇ ಎಂಬುವ ಒಂದು ಭಾವನೆ ಮೂಡಿಸಿ ಸ್ವಚ್ಛ ಭಾರತದಂತಹ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ಭಾಗವಹಿಸಿ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತವಾಗಿಸಲು ಎಲ್ಲಾ ಮಹಿಳಾ ಸದಸ್ಯರು ಪಣತೊಡಬೇಕೆನ್ನುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

✓ಕೂಸು ಕಾರ್ಯಕ್ರಮದಿಂದ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮವನ್ನು ಐ.ಇ.ಸಿ ಮೂಲಕ ಪ್ರತಿ ಮನೆ–ಮನೆಗೂ ತಲುಪುವ ಗುರಿ ಹೊಂದಲಾಗಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಶೌಚಾಲಯದ ಅವಶ್ಯಕತೆ ತೀವ್ರವಾಗಿದೆ. ಮಹಿಳೆಯರಿಗೆ ನಾಚಿಕೆ ಸ್ವಭಾವ ಹೆಚ್ಚಿದ್ದು, ಬಯಲಲ್ಲಿ ಮಲವಿಸರ್ಜನೆಗೆ ಹೋದಾಗ ಎದುರಾಗುವಂತಹ ಸಮಸ್ಯೆಗಳ ಕುರಿತು ಮನೆಯ ಪುರುಷರ ಮುಂದೆಯೇ ಹೇಳಲು ಹೆಣ್ಣುಮಕ್ಕಳು ಹಿಂಜರಿಯುತ್ತಾರೆ. ಹಾಗಿದ್ದ ಮೇಲೆ ಗ್ರಾಮ ಪಂಚಾಯತಿಗೆ ಬಂದು ಶೌಚಾಲಯ ನಿರ್ಮಾಣ ಮಾಡಿಸಿಕೊಡಿ ಅಂತಹ ಕೇಳುವುದು ಬಹಳ ವಿರಳ.

ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಗುಂಡಗರ್ತಿ ಗ್ರಾಮ ಪಂಚಾಯತಿಗೆ ಅಕಸ್ಮಿಕ ಭೇಟಿ ನೀಡಿದಾಗ ಆಶಾ ಕಾರ್ಯಕರ್ತೆ ಶ್ರೀಮತಿ ಇಂದ್ರಾ ಬಾಯಿ ಮನೆಯಲ್ಲಿ ಶೌಚಾಲಯ ಇಲ್ಲದಿರುವರು ಕಂಡುಬಂದಿತು. ಈ ಬಗ್ಗೆ ಪ್ರಶ್ನಿಸಿದಾಗ ಇಂದ್ರಾ ಬಾಯಿ ಮತ್ತು ಅವರ ತಾಯಿ ಯವರಿಂದ ಸಿಕ್ಕ ಉತ್ತರ "ನಮ್ಮ ಮನೆಯಲ್ಲಿ ಮಹಾಪೂರ ತಾಯಿ ದೇವಿ ಇರುವುದರಿಂದ ಹಾಗೂ ನಮ್ಮ ಮೊಮ್ಮಗಳು ಗರ್ಭಿಣಿ ಇರುವುದರಿಂದ ವೈಯಕ್ತಿಕ ಶೌಚಾಲಯ ಕಟ್ಟಿಕೊಂಡರೆ ನಮಗೆ ಏನಾದರೂ ಅಪಶಕುನ ಉಂಟಾಗಿ ನಮ್ಮ ಜೀವಕ್ಕೆ ತೊಂದರೆಯಾಗುವುದು ಹಾಗೂ ದೇವರು ಇದ್ದಲ್ಲಿ ಅದು ಹ್ಯಾಂಗ್ ನಾವ್ ಸಂಡಾಸ್ ಕಟ್ಕೊಳ್ಳೋಮ್ರಿ?"

ಆಗ ಅಜ್ಜಿಗೆ ಮೂಢನಂಬಿಕೆ ತೊರೆಯುವಂತೆ ಮನವೊಲಿಸಿ ಆಶಾ ಕಾರ್ಯಕರ್ತೆಗೆ ಮೊದಲು ಶೌಚಾಲಯ ಕಟ್ಟಿಸಿಕೊಳ್ಳುವ ಅಗತ್ಯ ಮನವರಿಕೆ ಮಾಡಲಾಯಿತು. ಶಿಸ್ತಿನ ನಿರ್ದೇಶನ ನೀಡಲಾಯಿತು. ಎರಡೇ ದಿನಗಳಲ್ಲಿ ಶೌಚಾಲಯ ನಿರ್ಮಿಸಿಕೊಂಡ ನಂತರ ಅವರ ಮನೆಯಲ್ಲೇ ಗರ್ಭಿಣಿಗೆ ಜಿಲ್ಲಾ ಪಂಚಾಯತ್ ವತಿಯಿಂದ ಸೀಮಂತ ನಡೆಸಲಾಯಿತು. ಈಗ ಶೌಚಾಲಯ ಸೌಕರ್ಯದಿಂದಾಗಿ ಗರ್ಭಿಣಿ ಮೊಮ್ಮಗಳ ಮುಖದಲ್ಲಿ ನಿರಾಳ ಭಾವ ವಯಸ್ಸಾದ ಅಜ್ಜಿ, ಮಗಳಿಗೆ ಹರ್ಷ! ಈಗ ಶೌಚಾಲಯ ಕಟ್ಟಿಸಿಕೊಳ್ಳಲು ಅವರೂ ಪ್ರೇರಕರು!

ಈ ಸಂದರ್ಭದಲ್ಲಿ "ಕೂಸು" ಎಂಬ ಸುಂದರ ಕಾರ್ಯಕ್ರಮದ ಮೂಲಕ ಆಶಾ ಕಾರ್ಯಕರ್ತೆಯರು ಗರ್ಭಿಣಿ ಮಹಿಳೆಯರ ಮನೆಗೆ ಭೇಟಿ ನೀಡಿ ಮಹಿಳೆಯರಿಗೆ ಹಾಗೂ ಮನೆಯ ಪುರುಷರಿಗೆ ಹಾಗೂ ಮನೆಯ ಇನ್ನುಳಿದ ವಯೋವೃದ್ಧರಿಗೆ/ಹಿರಿಯ ಜೀವಿಗಳಿಗೆ ಶೌಚಾಲಯದ ಅವಶ್ಯಕತೆ ಕುರಿತು ತಿಳಿವಳಿಕೆ ನೀಡಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗುತ್ತಿದೆ.

✓"ಕೂಸು" ಕಾರ್ಯಕ್ರಮದಿಂದ ಗ್ರಾಮೀಣ ಪ್ರದೇಶದ ಗರ್ಭಿಣಿ ಮಹಿಳೆಯರಿಗೆ ಒಂದೇ ವೇದಿಕೆಯಲ್ಲಿ ಗಣ್ಯ ವ್ಯಕ್ತಿಗಳಿಂದ ಸೀಮಂತ ಕಾರ್ಯಕ್ರಮವನ್ನು ಸರ್ಕಾರದ ಮಟ್ಟದಲ್ಲಿ ಹಮ್ಮಿಕೊಳ್ಳುವುದರಿಂದ ಗರ್ಭಿಣಿ ಮಹಿಳೆಯರಿಗೆ ಸಮಾನತೆಯ ಭಾವನೆ ಮೂಡುವುದು ಹಾಗೂ ಮುಕ್ತವಾಗಿ ಸಮಾಜದಲ್ಲಿ ಬೆರೆಯಲು ಅವಕಾಶ ಕಲ್ಪಿಸಿದಂತಾಗುವುದು. ಇದರಿಂದ ಹೆಣ್ಣುಮಕ್ಕಳು ಸಬಲೀಕರಣಗೊಂಡು ಸಮಾಜದಲ್ಲಿ ಮುಂದುವರೆಯಲು ಅನುಕೂಲವಾಗುವುದು.

✓ಸಾಮಾಜಿಕ ಹೊಣೆಗಾರಿಕೆಗಳ ಶಾಸನಾತ್ಮಕ ಸ್ಪಂದನೆ ಕೆಳಗೆ ಅಸ್ಪೃಶ್ಯತೆ ನಿಯಂತ್ರಣ ಮತ್ತು ಮಹಿಳೆಯರ ಲೈಂಗಿಕ ಕಿರುಕುಳ ತಡೆಗೆ ಕ್ರಮ ಮುಖ್ಯವಾಗಿರುತ್ತದೆ. ಈ ಅಂಶಗಳನ್ನು ಸೇರಿಸಿಕೊಂಡು ಆಯೋಜಿಸಿದ ಕೂಸು ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶದಲ್ಲಿ ಕ್ರಿಯಾತ್ಮಕ ಅನುಷ್ಠಾನ ಮಾಡುವುದರಿಂದ ಮಾನಸಿಕ, ಸಾಮಾಜಿಕ ಕೌಟುಂಬಿಕ ಸ್ಥೈರ್ಯ ಸುಧಾರಿಸುವುದು.

✓"ಕೂಸು" ಕಾರ್ಯಕ್ರಮಕ್ಕೆ ಆರೋಗ್ಯಕ್ಕೆ ಬಹಳ ನಿಕಟವಾದ ಸಂಬಂಧವಿದ್ದು, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಬಯಲಲ್ಲಿ ಮಲವಿಸರ್ಜನೆಗೆ ಹೋಗುವುದರಿಂದ ಶೇ 80% ರಷ್ಟು ರೋಗಗಳು ಹರಡುತ್ತವೆ. ಮತ್ತು ಗ್ರಾಮೀಣ ಪ್ರದೇಶದಲ್ಲಿ ಬಯಲಲ್ಲಿ ಮಲವಿಸರ್ಜನೆ ಮಾಡುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತವೆ. ಗ್ರಾಮೀಣ ಜನರ ದುಡಿತದ ಶೇ 50% ರಷ್ಟು ಭಾಗವನ್ನು ಆರೋಗ್ಯ ಸಮಸ್ಯೆಗಳಿಗಾಗಿ ಖರ್ಚು ಮಾಡುತ್ತಿರುವುದರಿಂದ ಅವರ ಜೀವನ ಗುಣಮಟ್ಟ ಕುಗ್ಗುತ್ತಿದೆ. ಕಾರಣ ಅವರ ಮನೆಯಲ್ಲಿಯೇ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಿಸಿಕೊಂಡರೆ



ಈ ಎಲ್ಲಾ ಸಮಸ್ಯೆಗಳಿಗೆ ಮುಕ್ತಿ ಸಿಗುವುದು ಹಾಗೂ ಅವರ ಜೀವನ ಮಟ್ಟ ಕೂಡ ಸುಧಾರಿಸುವುದು.

✓"ಕೂಸು" ಕಾರ್ಯಕ್ರಮದಿಂದ ಗ್ರಾಮೀಣ ಪ್ರದೇಶದ ಗರ್ಭಿಣಿ ಮಹಿಳೆಯರ ಆರೋಗ್ಯ ಕಾಪಾಡುವಲ್ಲಿ ವಿಶೇಷ ಪಾತ್ರ ವಹಿಸುತ್ತದೆ. ಹೇಗೆಂದರೆ ಒಬ್ಬ ಗರ್ಭಿಣಿ ಮಹಿಳೆಗೆ ತನ್ನದೇ ಆದಂತಹ ಭಾವನೆಗಳು ಹಾಗೂ ದೈಹಿಕ ತೊಂದರೆಗಳು ಇರುತ್ತವೆ. ಇಂತಹ ಸಂದರ್ಭದಲ್ಲಿ ಗರ್ಭಿಣಿ ಮಹಿಳೆಗೆ ಸರಿಯಾದ ಪೋಷಕಾಂಶಗಳು ದೊರೆಯದಿದ್ದಲ್ಲೀ ರಕ್ತಹೀನತೆಗೆ ಹಾಗೂ ಹುಟ್ಟುವ ಮಗುವಿನ ಮೇಲೆ ಹಲವಾರು ರೀತಿಯ ಪರಿಣಾಮಗಳು ಉಂಟಾಗಬಹುದು. ಕಾರಣ ಆಶಾ ಕಾರ್ಯಕರ್ತೆ ಮನೆ-ಮನೆಗೆ ಭೇಟಿ ನೀಡಿ ಪ್ರತಿ ತಿಂಗಳಿಗೊಮ್ಮೆ ಗರ್ಭಿಣಿ ಮಹಿಳೆಯರ ಮನೆಗೆ ಭೇಟಿ ನೀಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಪಾಸಣೆ ಮಾಡಿಸುವುದು ಹಾಗೂ ಸರ್ಕಾರಿ ಸಮುದಾಯ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆರಿಗೆ ಮಾಡಿಸುವಂತೆ ಗರ್ಭಿಣಿ ಮಹಿಳೆಯರಿಗೆ ಮನವೊಲಿಸುವುದು ಹಾಗೂ ಪ್ರಸೂತಿಯ ನಂತರ ಮಗುವಿಗೆ ಲಸಿಕೆ ಹಾಕಿಸುವುದರ ಮೂಲಕ ತಾಯಿ ಮತ್ತು ಮಗುವಿನ ಆರೋಗ್ಯ ಕಾಪಾಡುವುದರಲ್ಲಿ "ಕೂಸು" ಕಾರ್ಯಕ್ರಮ ಬಹುಮುಖ್ಯ ಪಾತ್ರ ವಹಿಸುವುದು.

**ಮಗಳಿಗಾಗಿ ಶೌಚಾಲಯ**

ಸಮಾಜದಲ್ಲಿ ಹಾಗೂ ಮನೆಯಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನ-ಮಾನ, ಗೌರವದಿಂದ ಕಾಣುವ ನಾವು ನಮ್ಮ ಮನೆಯಲ್ಲಿ ನಮ್ಮ ಮಗಳಿಗಾಗಿ ಬೇಕು-ಬೇಡಿಕೆಗಳನ್ನು ಈಡೇರಿಸುವ ನಾವೇ ಪ್ರತ್ಯಕ್ಷ-ಪರೋಕ್ಷವಾಗಿ ರಕ್ಷಣೆಯಿಲ್ಲದ ಸ್ಥಳದಲ್ಲಿ ಹಾಗೂ ಕೆಟ್ಟ ಪರಿಸರದಲ್ಲಿ ಬಯಲು ಬಹಿರ್ದೆಸೆಗೆ ಕಳುಹಿಸುವುದು ಎಷ್ಟು ಸಮಂಜಸ? ಆದ್ದದರಿಂದ ಇಂತಹ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಿ ಹೆಣ್ಣುಮಕ್ಕಳ ಮಾನ-ಪ್ರಾಣ ಕಾಪಾಡುವ ಉದ್ದೇಶದಿಂದ ಕಲಬುರಗಿ ಜಿಲ್ಲಾ ಪಂಚಾಯತ, ಜಿಲ್ಲೆಯ ಪ್ರತಿಯೊಂದು ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಯಲ್ಲಿ ವಿದ್ಯಾರ್ಥಿನಿಯರ ಮನೆಯಲ್ಲಿ ಹಾಗೂ ಗ್ರಾಮೀಣ ಪ್ರದೇಶದ ವಸತಿ ನಿಲಯದಲ್ಲಿ ವಾಸಿಸುತ್ತಿರುವ ಬಾಲಕಿಯರ ಮನೆಯಲ್ಲಿಯೂ ಕೂಡ ಶೌಚಾಲಯ ನಿರ್ಮಾಣ ಮಾಡಿಸಿ ಬಳಕೆ ಮಾಡುವಂತೆ ಪ್ರೇರೇಪಿಸುತ್ತಿದೆ. ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಡಿ ಈ ಯೋಜನೆಗೆ ಸಂಬಂಧಿಸಿದಂತೆ ಶಾಲಾ ಶಿಕ್ಷಕರು ಹಾಗೂ ವಸತಿ ನಿಲಯದ ವಾರ್ಡ್‌ನ್‌ಗಳಿಗೆ ಶಾಲಾ ಮುಖ್ಯ ಗುರುಗಳು ಹಾಗೂ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಿಗೂ ಸ್ವಚ್ಛ ಭಾರತ ಮಿಷನ್ ಕಾರ್ಯಗಾರ ಆಯೋಜಿಸಲಾಗುತ್ತಿದೆ. ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಿಲ್ಲೆಯನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯಡಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಾದ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡುವುದಕ್ಕೆ ಈಗಾಗಲೇ ಕ್ರಮವಹಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಚುನಾಯಿತ ಜನ ಪ್ರತಿನಿಧಿಗಳ ಮನೆಯಲ್ಲಿ ಕಡ್ಡಾಯವಾಗಿ ಶೌಚಾಲಯ ಹೊಂದುವ ಗುರಿ ಹೊಂದಿದೆ. ಶೌಚಾಲಯ ಹೊಂದದ ಎಲ್ಲಾ ತಾಲೂಕ ಪಂಚಾಯತ ಹಾಗೂ ಗ್ರಾಮ ಪಂಚಾಯತ್ ಸದಸ್ಯರುಗಳ ಮನೆಯಲ್ಲಿ ಹಾಗೂ ಜೂನ್-2017 ರೊಳಗಾಗಿ ಶೌಚಾಲಯ ನಿರ್ಮಾಣ ಮಾಡಿಸುವುದಕ್ಕೆ ಯೋಜನೆ ರೂಪಿಸಿ ಸಮಯ ನಿಗದಿಪಡಿಸಿಕೊಳ್ಳಲಾಗಿದೆ. ❑

# ನಮ್ಮ ಬೆಳೆ – ನಮ್ಮ ಬೆಲೆ

* ಮನೋಜ್ ರಾಜನ್



ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಜನವರಿ–2016ರಲ್ಲಿ ಸಿಕ್ಕಿಂ ರಾಜ್ಯದಲ್ಲಿ ಜರುಗಿದ ಕೃಷಿ ವಿಷಯಕ್ಕೆ ಸಂಬಂಧಿಸಿದ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯವನ್ನು ಕೃಷಿ ಮಾರಾಟ ಕ್ಷೇತ್ರದಲ್ಲಿನ ಸುಧಾರಣೆ ಸಂಬಂಧ ಮಾದರಿ ರಾಜ್ಯವೆಂದು ಪ್ರತಿಬಿಂಬಿಸಲಾಗಿದೆ.

ಕರ್ನಾಟಕದ ಕೃಷಿ ಉತ್ಪನ್ನ ಮಾರುಕಟ್ಟೆಗಳು ತಂತ್ರಜ್ಞಾನ ಅಳವಡಿಕೆಯೊಂದಿಗೆ ಏಕೀಕೃತ ಕೃಷಿ ಉತ್ಪನ್ನ ಮಾರುಕಟ್ಟೆಗಳಾಗಿ ಮಾರ್ಪಟ್ಟಿವೆ.

ಈ ಹಿಂದೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸೀಮಿತ ಮೂಲ ಸೌಕರ್ಯಗಳುಳ್ಳ ಪ್ರಾಂಗಣಗಳಲ್ಲೇ ಉತ್ಪನ್ನಗಳನ್ನು ರೈತರು ಮಾರಾಟ ಮಾಡಬೇಕಾದ ಅನಿವಾರ್ಯವಿತ್ತು.

ರೈತರಿಗೆ ಅನಾನುಕೂಲ ಮಾರುಕಟ್ಟೆ ಸ್ಥಿತಿ, ಏಕಸೌಮ್ಯ ಪದ್ಧತಿಗಳಿಂದಾಗಿ ಖರೀದಿಯಲ್ಲಿ ಸೀಮಿತ ಸ್ಪರ್ಧೆ ಮತ್ತು ಇನ್ನಿತರೇ ಅಂಶಗಳು ಈ ಹಿಂದಿನ ನಿಯಂತ್ರಿತ ಮಾರುಕಟ್ಟೆಗಳ ಸ್ಥಿತಿಯಾಗಿತ್ತು.

ಬೆಳೆ ಕೊಯ್ಲಾದ ಬಳಿಕ ರೈತರು ಉತ್ಪನ್ನವನ್ನು ಪ್ಯಾಕ್ ಮಾಡಿ, ಮಾರುಕಟ್ಟೆಗೆ ಸಾಗಿಸಲು ಸೂಕ್ತ ಸಾಗಾಣಿಕಾ ವ್ಯವಸ್ಥೆಗಾಗಿ ಪ್ರಾರಂಭಿಕ ಬಂಡವಾಳದ ಅವಶ್ಯಕತೆ ಇತ್ತು. ಇದರಿಂದಾಗಿಯೇ, ಅನೇಕ ಸಣ್ಣ ರೈತರು ಪ್ರತಿ ಉತ್ಪನ್ನಗಳ ಸಾಗಾಣಿಕಾ ವೆಚ್ಚ ಕೂಡ ಭರಿಸುವುದು ಗಣನೀಯವಾಗಿ ಹೆಚ್ಚಾಗುತ್ತಿತ್ತು.

ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ತೆಗೆದುಕೊಂಡು ಮಾರುಕಟ್ಟೆಗೆ ಹೋಗಲು ಇದು ಕೂಡ ಪ್ರಮುಖ ಅಡಚಣೆಯಾಗಿತ್ತು. ಒಂದೊಮ್ಮೆ ರೈತರು ವೆಚ್ಚವನ್ನು ಭರಿಸಿ ಮಾರುಕಟ್ಟೆಯನ್ನು ತಲುಪಿದರೂ, ಉತ್ಪನ್ನಕ್ಕೆ ನೈಜ ಬೆಲೆ ದೊರೆಯುತ್ತಿರಲಿಲ್ಲ, ಅಲ್ಲದೇ ಮಾರುಕಟ್ಟೆ ಉತ್ಪನ್ನಗಳನ್ನು ಸಾಗಣಿಕೆ ಮಾಡುವ ವೇಳೆ ಸ್ವಲ್ಪ ಮಟ್ಟಿನ ನಷ್ಟ ಕೂಡ ಉಂಟಾಗುತ್ತಿತ್ತು.



**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಪರಿಸರ ವ್ಯವಸ್ಥೆ**

1. 7ನೇ ದೊಡ್ಡ ರಾಜ್ಯ
2. 62 ಮಿಲಿಯನ್ ಜನಸಂಖ್ಯೆ
3. 92 ಅನುಸೂಚಿತ ಉತ್ಪನ್ನಗಳು
4. 161 ಪ್ರಮುಖ ಮಾರುಕಟ್ಟೆಗಳು ಮತ್ತು 351 ಉಪ ಮಾರುಕಟ್ಟೆಗಳು
5. 35,000 ಕೋಟಿ ವಾರ್ಷಿಕ ವಹಿವಾಟು
6. 32 ಸಾವಿರ ವರ್ತಕರು
7. 17 ಸಾವಿರ ದಲ್ಲಾಲರು
8. 161 ಪ್ರಮುಖ ಮಾರುಕಟ್ಟೆಗಳಲ್ಲಿ ಈಗ ಆನ್‌ಲೈನ್ ಸೇವೆ.

**ಹಿನ್ನೆಲೆ :** ಕರ್ನಾಟಕ ರಾಜ್ಯ 3.5 ಕೋಟಿ ಜನಸಂಖ್ಯೆಯು ಕೃಷಿಯ ಮೇಲೆ

* ವ್ಯವಸ್ಥಾಪಕ ನಿರ್ದೇಶಕರು / ಮುಖ್ಯಕಾರ್ಯ ನಿರ್ವಹಣಾಧಿಕಾರಿ, ರಾಷ್ಟ್ರೀಯ ಇ–ಮಾರ್ಕೆಟ್ ಸರ್ವೀಸಸ್, ಅಪರ ಕಾರ್ಯದರ್ಶಿ (ಮಾರುಕಟ್ಟೆ ಸುಧಾರಣೆ), ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ನೇರವಾಗಿ ಅವಲಂಬಿಸಿರುತ್ತದೆ. ಈ ಪೈಕಿ ಸರಾಸರಿ ಭೂಮಿ ಹಿಡುವಳಿ ಗಾತ್ರವು 1.55 ಹೆಕ್ಟೇರ್ ಆಗಿದೆ. ರೈತರು ತುರ್ತು ಆರ್ಥಿಕ ನಿರ್ವಹಣೆಗಾಗಿ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಕಡಿಮೆ ಧಾರಣೆಗೆ ಮಾರಾಟ ಮಾಡುವ ಅನಿವಾರ್ಯತೆ ಎದುರಾಗುತ್ತಿತ್ತು. ಉತ್ಪನ್ನಗಳಿಗೆ ಗ್ರಾಹಕರು ನೀಡುವ ಪಾಲಿನಲ್ಲಿ ರೈತರಿಗೆ ಸರಾಸರಿ ಶೇಕಡ 45ರಿಂದ 68% ಆಹಾರ ಧಾನ್ಯಗಳಲ್ಲಿ ಎಣ್ಣೆ ಬೀಜಗಳಲ್ಲಿ ಮತ್ತು ದ್ವಿದಳ ಧಾನ್ಯಗಳಲ್ಲಿ ಶೇಕಡ 45ರಿಂದ 68% ರಷ್ಟು ವ್ಯತ್ಯಾಸ ಕಂಡು ಬಂದಿರುವುದು ಸಾಮಾನ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿನ ಮಾರಾಟ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಹೋಗಲಾಡಿಸುವುದು, ರೈತರು ಹಾಗೂ ಗ್ರಾಹಕರಿಗೆ ಅನುಕೂಲವಾಗುವಂತೆ ನಿರ್ಬಂಧರಹಿತ ಮಾರುಕಟ್ಟೆ ಪದ್ಧತಿಯನ್ನು ಜಾರಿಗೆ ತಂದು ಪರಿಣಾಮಕಾರಿಯಾಗಿ ನಿರ್ವಹಿಸುವುದು ಹೇಗೆ ಎನ್ನುವುದು ದೊಡ್ಡ ಪ್ರಶ್ನೆಯಾಗಿತ್ತು.

ಕೃಷಿ ಉತ್ಪನ್ನ ಮಾರುಕಟ್ಟೆಯ ಕ್ಷಮತೆ ಮತ್ತು ಉತ್ಪನ್ನಗಳ ಖರೀದಿಯಲ್ಲಿ ಸ್ಪರ್ಧೆ ಹಾಗೂ ಮಾರಾಟದ ಎಲ್ಲಾ ಚಟುವಟಿಕೆಗಳಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ತಂತ್ರಜ್ಞಾನ ಅಳವಡಿಸಿ, ನಿರ್ವಹಿಸುವುದು ಸೇರಿದಂತೆ ಇತರೇ ಅಗತ್ಯ ಅಂಶಗಳ ಕುರಿತು ಸುಧಾರಣಾ ವರದಿ ಸಿದ್ಧಪಡಿಸಲು ನಮ್ಮ ಅಧ್ಯಕ್ಷತೆಯಲ್ಲಿ ಕೃಷಿ ಮಾರಾಟ ಸುಧಾರಣಾ ಸಮಿತಿಯನ್ನು 2013 ರಲ್ಲಿ ಸರ್ಕಾರ ರಚಿಸಿತು.

ಕೃಷಿ ಉತ್ಪನ್ನ ಮಾರಾಟ ಕ್ಷೇತ್ರದಲ್ಲಿ ಅಮೂಲಾಗ್ರ್ಯ ಬದಲಾವಣೆ ತರುವ ನಿಟ್ಟಿನಲ್ಲಿ ಮಾರ್ಚ್ 2013 ರಿಂದ ಮೂರು ತಿಂಗಳ ಅವಧಿಯ ಸಮಗ್ರ ಅಧ್ಯಯನ ನಡೆಸಿ, ಕೃಷಿ ಮಾರಾಟ ಕ್ಷೇತ್ರವನ್ನು ಸಮೃದ್ಧಗೊಳಿಸುವ ಮೂಲಕ ರೈತರ ಸಬಲೀಕರಣಕ್ಕಾಗಿ ಸರ್ಕಾರ ಮಹತ್ವದ ಯೋಜನೆ ಕೈಗೊಂಡಿರುವುದನ್ನು ಮನಗಂಡು ನಿಗದಿತ ಸಮಯದಲ್ಲಿ ಕೃಷಿ ಉತ್ಪನ್ನ ಮಾರಾಟ ಕ್ಷೇತ್ರಕ್ಕೆ ಉಪಯುಕ್ತವಾಗುವಂತಹ ಸುಧಾರಣಾ ವರದಿಯನ್ನು ಸಿದ್ಧಪಡಿಸಿ, ಮಾರುಕಟ್ಟೆಗಳಲ್ಲಿ ಕೈಗೊಳ್ಳಬೇಕಾದ ಆಧುನಿಕ ಕ್ರಮಗಳು ಮತ್ತು ಇದಕ್ಕೆ ಬೇಕಾದ ಶಾಸನ ನಿಯಮಗಳ ತಿದ್ದುಪಡಿ ಕುರಿತು ಶಿಫಾರಸುಗಳೊಂದಿಗೆ ಮೇ 2013 ರಲ್ಲಿ ಸರ್ಕಾರಕ್ಕೆ ಕೃಷಿ ಮಾರಾಟ ಸುಧಾರಣಾ ಸಮಿತಿಯು ವರದಿಯನ್ನು ಸಲ್ಲಿಸಲಾಯಿತು.




ಸರ್ಕಾರ ಕೃಷಿ ಮಾರಾಟ ಸುಧಾರಣಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಒಪ್ಪಿ, ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕ ಕೃಷಿ ಮಾರಾಟ ನೀತಿ–2013ನ್ನು ಸೆಪ್ಟಂಬರ್ 2013ರಲ್ಲಿ ಘೋಷಿಸಿ, ಅನುಷ್ಠಾನಗೊಳಿಸಲಾಯಿತು. ಕೃಷಿಕರು ಮತ್ತು ಖರೀದಿದಾರರ ಹಿತದೃಷ್ಟಿಗಾಗಿ ವರ್ತಕರಿಗೆ ಏಕೀಕೃತ ಲೈಸೆನ್ಸ್ ನೀಡುವುದು, ಕೃಷಿ ಉತ್ಪನ್ನಗಳ ಪ್ರಾಥಮಿಕ ಮೌಲ್ಯವರ್ಧನೆ ಹಾಗೂ ರೈತರ ಗುಂಪುಗಳ ಸ್ಥಾಪನೆಯ ಮೂಲಕ ಸಂಘಟಿತ ವ್ಯಾಪಾರ ವ್ಯವಸ್ಥೆಗೆ ಪ್ರೋತ್ಸಾಹ ನೀಡುವುದು. ನೇರ ಖರೀದಿ ಕೇಂದ್ರಗಳ ಸ್ಥಾಪನೆಯಿಂದಾಗಿ ಉತ್ಪಾದನಾ ಹಂತದಲ್ಲಿಯೇ ಮಾರಾಟ ಸೌಲಭ್ಯಕ್ಕೂ ಅನುಕೂಲ ಕಲ್ಪಿಸಲಾಯಿತು. ಎಫ್.ಪಿ.ಓ.ಗಳಿಗೆ ಒಪ್ಪಂದದ ಕೃಷಿ ವ್ಯವಸ್ಥೆಯನ್ನು ಏಕೀಕೃತಗೊಳಿಸಲಾಯಿತು. ಆನ್‌ಲೈನ್ ಟೆಂಡರ್ ಮತ್ತು ಆನ್‌ಲೈನ್ ಹಣ ಪಾವತಿ ವ್ಯವಸ್ಥೆಯನ್ನು ಕೂಡ ಅನುಷ್ಠಾನ ಮಾಡಲಾಗಿದೆ. ಆನ್‌ಲೈನ್ ವ್ಯವಹಾರಕ್ಕೆ ಸಂಬಂಧಿಸಿದ ವಿವಾದಗಳಿಗೆ ಪರಿಹಾರ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕೃಷಿ ಮಾರಾಟ ಸುಧಾರಣಾ ವರದಿ ಅನ್ವಯ ನಿಯಂತ್ರಣಾತ್ಮಕ ಮತ್ತು ಶಾಸನಾತ್ಮಕ ತಿದ್ದುಪಡಿಗಳು: ರಾಜ್ಯದಲ್ಲಿ ಪಾರದರ್ಶಕ ಮತ್ತು ಸಮರ್ಥ ಕೃಷಿ ಮಾರುಕಟ್ಟೆಗಳ ಕಾರ್ಯ ನಿರ್ವಹಣೆಗಾಗಿ ವಿಶಿಷ್ಟವಾದ, ಎಲ್ಲರಿಗೂ ಸಮಾನ ಅವಕಾಶ ಇರುವ ನಿಯಂತ್ರಣ ವಾತಾವರಣವನ್ನು ನಿರ್ಮಿಸುವುದಕ್ಕಾಗಿ ಮತ್ತು ನೀತಿಯ ಉದ್ದೇಶಗಳನ್ನು ಹಾಗೂ ಕ್ರಮಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ನ್ನು ಪುನರ್ ಪರಿಶೀಲಿಸಿ, 2013ನೇ ಡಿಸೆಂಬರ್ ಮತ್ತು ಫೆಬ್ರವರಿ 2014ರಲ್ಲಿ ಪೂರಕ ಶಾಸನ ಮತ್ತು ನಿಯಮಗಳಿಗೆ ಸರ್ಕಾರ ತಿದ್ದುಪಡಿ ಮಾಡಿದೆ.

### ವಿಶೇಷ ಸಾಂಸ್ಥಿಕ ಸಂಸ್ಥೆ

ಕರ್ನಾಟಕ ಸರ್ಕಾರ ಮತ್ತು ಎನ್ ಇ ಎಂ ಎಲ್ ಸಹಭಾಗಿತ್ವದಲ್ಲಿ ರಾಷ್ಟ್ರೀಯ ಇ–ಮಾರ್ಕೆಟ್ ಸರ್ವೀಸಸ್ ಸಂಸ್ಥೆ 2014ರ ಜನವರಿಯಲ್ಲಿ ಸ್ಥಾಪನೆಯಾಯಿತು. ಈ ಸಂಸ್ಥೆಯು ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಗೆ ಅಗತ್ಯವಿರುವ ತಂತ್ರಜ್ಞಾನದ ತಂತ್ರಾಂಶವನ್ನು ಒದಗಿಸಿ ಏಕೀಕೃತ ಮಾರುಕಟ್ಟೆ ವೇದಿಕೆಯನ್ನು ಸ್ಥಾಪಿಸಿದೆ. ರೈತರು ಮತ್ತು ಖರೀದಿದಾರರ ನಡುವೆ ಉತ್ತಮ ವ್ಯವಹಾರ ಚಟುವಟಿಕೆಗಳನ್ನು ಸಡಿಲಿಸಲು ವಿದ್ಯುನ್ಮಾನ ಇ–ಟೆಂಡರ್ ವೇದಿಕೆಯ ನಿರ್ವಹಣೆ, ತರಬೇತಿ, ಮಾರುಕಟ್ಟೆಗಳ ಸಾಮರ್ಥ್ಯವೃದ್ಧಿ, ಮಾರುಕಟ್ಟೆ ಧಾರಣೆ ಮಾಹಿತಿ ರೈತರ ಮೊಬೈಲ್‌ಗೆ ಎಸ್.ಎಂ.ಎಸ್ ಮಾಹಿತಿ ನೀಡುವುದು ಸೇರಿದಂತೆ, ಏಕೀಕೃತ ಮಾರುಕಟ್ಟೆ ವೇದಿಕೆಯ ನಿರ್ವಹಣೆಯನ್ನು ವಿಶೇಷ ಸಾಂಸ್ಥಿಕ ಸಂಸ್ಥೆ ನಿರ್ವಹಿಸುತ್ತಿದೆ.

ಏಕೀಕೃತ ಮಾರುಕಟ್ಟೆ ವೇದಿಕೆ ಸ್ವಯಂಚಾಲಿತ ಬೆಲೆ ಶೋಧಕ ವ್ಯವಸ್ಥೆಯನ್ನು ಶಕ್ತಗೊಳಿಸಿದೆ ಮತ್ತು ಟೆಂಡರ್ ಬಳಿಕ ನಡೆಯುವ ಪ್ರಕ್ರಿಯೆಗಳಾ ವಿದ್ಯುನ್ಮಾನ ತೂಕ, ಗಣಕೀಕೃತ ಲೆಕ್ಕ ಪಟ್ಟಿ, ಮಾರುಕಟ್ಟೆ ಶುಲ್ಕ ಪಾವತಿ, ಆನ್ ಲೈನ್ ಹಣ ಪಾವತಿ, ಇ–ಪರ್ಮಿಟ್ ಪಡೆಯುವ ವ್ಯವಸ್ಥೆ ಪಾರದರ್ಶಕವಾಗಿದೆ. ಏಕೀಕೃತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಉತ್ಪನ್ನಗಳಿಗೆ ಉಚಿತ ಗುಣವಿಶ್ಲೇಷಣೆ ಸವಿವೆ ಮತ್ತು ಉಗ್ರಾಣ ಆಧರಿತ ಮಾರಾಟ ಅಥವಾ ಸಾಲ ಪಡೆಯಲು ಅನುಕೂಲ ಕಲ್ಪಿಸಲಾಗಿದೆ.

ಏಕೀಕೃತ ಮಾರುಕಟ್ಟೆ ವೇದಿಕೆಯು ಉತ್ಪನ್ನಗಳ ನೈಜ ಮಾಹಿತಿ ಕಲ್ಪಿಸುವುದರ ಮೂಲಕ ಮಾರುಕಟ್ಟೆಯ

ಕಾರ್ಯಚರಣೆಯಲ್ಲಿ ಪಾರದರ್ಶಕತೆಯನ್ನು ತಂದಿದೆ ಮತ್ತು ಖರೀದಿದಾರರ ಸ್ಪರ್ಧಾತ್ಮಕ ಭಾಗವಹಿಸುವಿಕೆಯಿಂದ ಉತ್ಪನ್ನಗಳಿಗೆ ಬಿಡ್ ಮಾಡಲು ಪ್ರತಿಯೊಂದು ಲಾಟ್ ಗೂ ಸಮಾನ ಅವಕಾಶವನ್ನು ಒದಗಿಸಲಾಗುತ್ತಿದೆ. ಏಕೀಕೃತ ಮಾರುಕಟ್ಟೆಯ ಕಾರ್ಯಾಚರಣೆಗಳು ಎಪಿಎಂಸಿ ಪ್ರವೇಶಿಸುವ ಸರಕುಗಳಿಂದ ಪ್ರಾರಂಭವಾಗಿ ಮಾರುಕಟ್ಟೆಯಿಂದ ಹೊರಬರುವವರೆಗೂ ಸುಗಮ ವ್ಯವಸ್ಥೆ ರೂಪುಗೊಂಡಿದೆ.

ಪ್ರಮುಖವಾಗಿ ಕೃಷಿ ಉತ್ಪನ್ನ ಮಾರಾಟ ಸುಧಾರಣಾ ಕಾರ್ಯಸೂಚಿ ಅನ್ವಯ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಖರೀದಿಯಲ್ಲಿ ಸ್ಪರ್ಧೆ ಹೆಚ್ಚಿಸುವುದು. ಈ ಹಿಂದೆ ಅಸ್ತಿತ್ವದಲ್ಲಿದ್ದ ಸೀಮಿತ ಅಥವಾ ಸ್ಥಳೀಯ ಖರೀದಿದಾರರ ಹಿಡಿತದಲ್ಲಿದ್ದ ಖರೀದಿ ವ್ಯವಸ್ಥೆಯನ್ನು ವೃದ್ಧಿಗೊಳಿಸುವುದು ಕೂಡ ಸುಧಾರಣೆಯ ಉದ್ದೇಶವಾಗಿತ್ತು.

ಈ ಹಿನ್ನೆಲೆಯಲ್ಲಿ ಖರೀದಿದಾರರಿಗೆ ಏಕೀಕೃತ ಲೈಸೆನ್ಸ್ ನೀಡಲಾಗಿದೆ. ಇದೀಗ 34,000 ಖರೀದಿದಾರರು ಏಕೀಕೃತ ಲೈಸೆನ್ಸ್ ಹೊಂದಿದ್ದಾರೆ. ಅವರಿಗೆ ಪ್ರತ್ಯೇಕ ಯುಸರ್ ಐ.ಡಿ ಮತ್ತು ಪಾಸ್ ವರ್ಡ್‌ನ್ನು ನೀಡಲಾಗಿದೆ. ಈ ವ್ಯವಸ್ಥೆಯ ಬಳಕೆಯಿಂದ ಖರೀದಿದಾರರು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಯಾವುದೇ ಮಾರುಕಟ್ಟೆಗಳಲ್ಲಿ ತಮಗೆ ಬೇಕಾದ ಉತ್ಪನ್ನವನ್ನು ಆನ್‌ಲೈನ್ ಮೂಲಕ ಖರೀದಿಸಬಹುದಾಗಿದೆ.


**ಏಕೀಕೃತ ಮಾರುಕಟ್ಟೆ ವೇದಿಕೆ ಕಾರ್ಯವಿಧಾನ**

ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಅನ್ನದಾತರ ಕೃಷಿ ಉತ್ಪನ್ನಗಳಿಗೆ ಅತ್ಯುತ್ತಮ ಬೆಲೆ ಪಡೆಯಲು ಸಹಕಾರಿಯಾಗುವಂತೆ ತೊಂದರೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ.

ಪ್ರಮುಖ 161 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ (ವಿದ್ಯುನ್ಮಾನ ವೇದಿಕೆ)ಯನ್ನು ಸ್ಥಾಪಿಸಲಾಗಿದೆ. ಈ ಮಾರುಕಟ್ಟೆ ವೇದಿಕೆಯಲ್ಲಿನ ಕಾರ್ಯವಿಧಾನದ ಕ್ರಮಗಳು ಏನು? ಈ ವ್ಯವಸ್ಥೆಯಿಂದ ರೈತರಿಗೆ, ಸ್ಥಳೀಯ ಮತ್ತು ಪ್ರಾದೇಶಿಕ ಹಾಗೂ ಹೊರರಾಜ್ಯದ ಖರೀದಿದಾರರಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂಬ ಎಲ್ಲಾ ಪ್ರಶ್ನೆಗಳಿಗೆ ಸಮಗ್ರ ವಿವರ ಇಲ್ಲಿದೆ.




ರೈತರು ಸಕಾಲದಲ್ಲಿ ಬೆಳೆ ಕೊಯ್ಲು ಮಾಡುವುದು ಬಹು ಮುಖ್ಯವಾದ ಅಂಶ,ಈ ವಿಧಾನದಿಂದ ಉತ್ಪನ್ನದ ಗುಣಮಟ್ಟ ಕಾಪಾಡಲು ಅನುಕೂಲವಾಗಲಿದೆ.



ಕೊಯ್ಲು ಮಾಡಿದ ಬೆಳೆಯನ್ನು ಅಗತ್ಯಕ್ಕೆ ಅನುಗುಣವಾಗಿ ಒಣಗಿಸುವುದು ಬಹಳ ಮುಖ್ಯ, ಸರಿಯಾಗಿ ಒಣಗಿಸಿದ ಉತ್ಪನ್ನದಲ್ಲಿನ ಕಸಕಡ್ಡಿಯನ್ನು ಸ್ವಚ್ಛ ಮಾಡಿ, ಗುಣಪ್ರಮಾಣಕ್ಕೆ ಅನುಗುಣವಾಗಿ ವಿಂಗಡಣೆ ಮಾಡಬೇಕು. ಈ ರೀತಿಯಲ್ಲಿ ಉತ್ಪನ್ನವನ್ನು ಉಸ್ತುವಾರಿ ಮಾಡುವುದರಿಂದ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಪಡೆಯಬಹುದಾಗಿದೆ.




ಉತ್ಪನ್ನವನ್ನು ಸ್ವಚ್ಛಗೊಳಿಸಿ, ವಿಂಗಡಿಸಿ, ಗುಣ ಮಟ್ಟದ ಚೀಲಗಳಲ್ಲಿ ತುಂಬಿ(ಪ್ಯಾಕ್) ಮಾಡುವುದು. ಬೆಳೆಯನ್ನು ಮಾರಾಟಕ್ಕಾಗಿ ಮಾರುಕಟ್ಟೆಗೆ ತೆರಳಲು ರೈತರು ಸಿದ್ಧ ಪಡಿಸಬೇಕಾದ ಕ್ರಮಗಳ ಬಗ್ಗೆ ಈ ಚಿತ್ರದಲ್ಲಿ ಗಮನಿಸಬಹುದು.





ರೈತರು ಪ್ಯಾಕ್ ಮಾಡಿದ ಉತ್ಪನ್ನವನ್ನು ಮಾರುಕಟ್ಟೆಗೆ ತಂದ ವೇಳೆ ಮಾರುಕಟ್ಟೆ ಪ್ರಾಂಗಣದ ಮುಖ್ಯ ದ್ವಾರದಲ್ಲಿ ಉತ್ಪನ್ನದ ಮಾಹಿತಿ ನೀಡಿ (ಗೇಟ್ ಎಂಟ್ರಿ) ಮಾಡಿಸಿ, ಪ್ರವೇಶ ಪಡೆಯಬೇಕು.

**ಉತ್ಪನ್ನಕ್ಕೆ ಪ್ರತ್ಯೇಕ ಲಾಟ್ ಸಂಖ್ಯೆ**





ಗೇಟ್ ಎಂಟ್ರಿ ಬಳಿಕ ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟಕ್ಕೆ ಉತ್ಪನ್ನ ಸಿದ್ಧಪಡಿಸಬಹುದು ಅಥವಾ ದಲ್ಲಾಲರ ಅಥವಾ ವರ್ತಕರ ಅಂಗಡಿಗಳ ಮುಂದೆ ಲಾಟ್ ಮಾಡಬಹುದು. ಒಂದು ವೇಳೆ ಗೇಟ್ ಎಂಟ್ರಿ ಮಾಡಿಸಲು ಸಾಧ್ಯವಾಗದೆ ಹೋದರೆ, ಇಲ್ಲಿ ತಮ್ಮ ಉತ್ಪನ್ನಗಳ ಲಾಟ್ ಎಂಟ್ರಿ ಮಾಡಿಸುವುದು ಕಡ್ಡಾಯವಾಗಿದೆ. ಈ ಪ್ರಕ್ರಿಯೆಯ ಬಳಕ ಉತ್ಪನ್ನಗಳ ಗುಣವಿಶ್ಲೇಷಣೆ ಮಾಡಿಸಲು ಏಕೀಕೃತ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಯೋಗಾಲಯದ ವ್ಯವಸ್ಥೆಯೂ ಇದೆ. ಇದರ ಲಾಭವನ್ನು ರೈತರು ತಪ್ಪದೇ ಪಡೆಯಬೇಕು. ಈ ಸೇವೆ ರೈತರಿಗೆ ಉಚಿತವಾಗಿರುತ್ತದೆ. ಉತ್ಪನ್ನಗಳ ಗುಣ ವಿಶ್ಲೇಷಣೆ ಪ್ರಮಾಣ ಪತ್ರವನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡಲಾಗುವುದು.




ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟಕ್ಕೆ ಸಿದ್ಧಪಡಿಸಿರುವ ಉತ್ಪನ್ನಗಳನ್ನು ಸ್ಥಳೀಯ ಖರೀದಿದಾರರು ಪರಿಶೀಲಿಸುತ್ತಾರೆ. ಗುಣವಿಶ್ಲೇಷಣೆ ಮಾಡಿಸಿದ ಉತ್ಪನ್ನಕ್ಕೆ ಬೇಡಿಕೆ ಸಹಜವಾಗಿ ಹೆಚ್ಚಿರುತ್ತದೆ, ಜೊತೆಗೆ ಆನ್‌ಲೈನ್ ಉತ್ಪನ್ನಗಳ ಮಾಹಿತಿ ಸಂಗ್ರಹಿಸುವ ಹೊರಗಿನ ಖರೀದಿದಾರರಿಂದಲೂ ಬೇಡಿಕೆ ಹೆಚ್ಚಾಗಿರುತ್ತದೆ. ಉತ್ಪನ್ನಗಳ ಗುಣವಿಶ್ಲೇಷಣೆ ಮಾಡಿದ ಗಣಕೀಕೃತ ಮಾಹಿತಿಯನ್ನು ರೈತರ ಲಾಟ್‌ಗಳ ಮುಂದೆ ಪ್ರದರ್ಶನ ಮಾಡಲಾಗುವುದು. ಇದರಿಂದ ಆನ್‌ಲೈನ್ ಟೆಂಡರ್‌ನಲ್ಲಿ ಗುಣವಿಶ್ಲೇಷಣೆ ಮಾಡಿದ ಉತ್ಪನ್ನಕ್ಕೆ ಸ್ಪರ್ಧೆ ಹೆಚ್ಚಾಗಿ, ಸ್ಪರ್ಧಾತ್ಮಕ ಬೆಲೆ ಪಡೆಯಬಹುದು.

**ಇ–ಮಾರ್ಕೆಟ್ :**




ಮಾರುಕಟ್ಟೆಯ ಸ್ಥಳೀಯ ಖರೀದಿದಾರರು ಉತ್ಪನ್ನಗಳನ್ನು ಖುದ್ದು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಬಿಡ್ ಮಾಡುತ್ತಾರೆ. ಹೊರ ಮಾರುಕಟ್ಟೆ ಮತ್ತು ಹೊರ ರಾಜ್ಯಗಳ ಖರೀದಿದಾರರು ಉತ್ಪನ್ನಗಳ ಗುಣಧರ್ಮಗಳನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡಿದ ಗಣಕೀಕೃತ ಪ್ರಮಾಣ ಪತ್ರವನ್ನು ಪರಿಶೀಲಿಸಿ, ಅಗತ್ಯ ಉತ್ಪನ್ನಗಳಿಗೆ ಖರೀದಿದಾರರು ಇದ್ದ ಸ್ಥಳದಿಂದಲೇ ಆನ್‌ಲೈನ್‌ನಲ್ಲಿ ಬಿಡ್ಡಿಂಗ್ ಮಾಡುತ್ತಾರೆ.ಈ ವ್ಯವಸ್ಥೆಯಿಂದಾಗಿ ಖರೀದಿಯಲ್ಲಿ ಸ್ಪರ್ಧೆ ಹೆಚ್ಚಲಿದೆ.

**ಟೆಂಡರ್ ಡಿಕ್ಲರೇಷನ್:**




ಏಕೀಕೃತ ಮಾರುಕಟ್ಟೆ–ಗಳಲ್ಲಿ ಆನ್‌ಲೈನ್ ಬಿಡ್ಡಿಂಗ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮಧ್ಯಾಹ್ನ 3 ಗಂಟೆ ನಂತರ ಮಾರುಕಟ್ಟೆ ಪ್ರಾಂಗಣದ ಕಛೇರಿ ಮುಂಭಾಗದಲ್ಲಿನ ಟಿ.ವಿ. ಪರದೆಗಳಲ್ಲಿ ಬಿಡ್ ವಿಜೇತರ ಪಟ್ಟಿ ಪ್ರಕಟಿಸಿ ಅವರವರ ಉತ್ಪನ್ನಕ್ಕೆ ದೊರೆತ ಧಾರಣೆ ಮಾಹಿತಿಯನ್ನು ರೈತರ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ಸಂದೇಶ ಕಳಿಸಲಾಗುತ್ತಿದೆ.ನಿಗದಿತ ಸಮಯದಲ್ಲಿ ರೈತರ ಧಾರಣೆ ಸಮ್ಮತಿ ಸೂಚಿಸಿದರೆ ಮುಂದಿನ ಪ್ರಕ್ರಿಯೆ ನಡೆಸಲಾಗುವುದು.

ರೈತರ ಉತ್ಪನ್ನಗಳ ತೂಕದಲ್ಲಿ ಯಾವುದೇ ರೀತಿಯ ವ್ಯತ್ಯಾಸ ಎದುರಾಗದಂತೆ ಎಲ್ಲಾ ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಎಲೆಕ್ಟ್ರಾನಿಕ್ ತೂಕ ಯಂತ್ರಗಳನ್ನು ಅಳವಡಿಸಲಾಗಿದೆ.

**ಪಾರದರ್ಶಕತೆ:**



ಉತ್ಪನ್ನದ ತೂಕದ ಬಳಿಕ ಗಣಕೀಕೃತ ವಿಕ್ರೀಪಟ್ಟಿಯನ್ನು ಉತ್ಪನ್ನದ ಮಾಲೀಕರಿಗೆ ನೀಡಲಾಗುತ್ತಿದೆ. ಈ ವ್ಯವಸ್ಥೆಯಿಂದಾಗಿ ಮಾರುಕಟ್ಟೆಯಲ್ಲಿ ಪಾರದರ್ಶಕತೆ ಹೆಚ್ಚಾಗಿದೆ.

**ಇ–ಪರ್ಮಿಟ್:**




ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಉತ್ಪನ್ನ–ಗಳ ಖರೀದಿ ಪ್ರಕ್ರಿಯೆ ಪೂರ್ಣಗೊಂಡು ಉತ್ಪನ್ನಗಳ ಮೊತ್ತವನ್ನು ಸಂದಾಯ ಮಾಡಿದ ಕೂಡಲೇ ಖರೀದಿದಾರರು ಖರೀದಿಸಿದ ಉತ್ಪನ್ನವನ್ನು ಸಾಗಾಟ ಮಾಡಲು ಯಾವುದೇ ಸಮಯದಲ್ಲಿಯಾದರೂ, ಎಲ್ಲಿಂದಲಾದರೂ ಇ–ಪರ್ಮಿಟ್ ಪಡೆಯುವ ವ್ಯವಸ್ಥೆ ಮಾಡಲಾಗಿದೆ.




ರಾಜ್ಯದ 157 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಖರೀದಿಯಲ್ಲಿ ಭಾಗಿಯಾಗುವ ಖರೀದಿದಾರರು ಅವರು ಇದ್ದ ಸ್ಥಳದಿಂದಲೇ ಇ–ಪರ್ಮಿಟ್ ಪಡೆಯಬಹುದು.

**ನವೀನತೆಯ ಹೊಸ ಮಾರುಕಟ್ಟೆ ನಿರ್ಮಾಣ**

**ಸ್ಪರ್ಧೆ ಹೆಚ್ಚಳ :**

- ಕರ್ನಾಟಕ ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿನ ಉತ್ಪನ್ನಗಳ ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈ ಹಿಂದೆ ಲೈಸನ್ಸ್ ನೀಡಿಕೆಯಲ್ಲಿನ ಪದ್ಧತಿಗಳನ್ನು ಸರಳಗೊಳಿಸಿ, ಮಾರುಕಟ್ಟೆ ಭಾಗೀದಾರರಿಗೆ ಏಕೀಕೃತ ಲೈಸನ್ಸ್ ನೀಡಲಾಗಿದೆ. ಇದರಿಂದ ಖರೀದಿದಾರರು ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ಬೇಕಾದರೂ ಏಕಕಾಲದಲ್ಲಿ ಉತ್ಪನ್ನಗಳ ಖರೀದಿಯಲ್ಲಿ ಭಾಗವಹಿಸಬಹುದಾಗಿದೆ.
- ಉತ್ಪನ್ನಗಳ ಖರೀದಿ ಪ್ರಕ್ರಿಯೆಯಲ್ಲಿ ಸಣ್ಣ ವರ್ತಕರಿಂದ ಹಿಡಿದು ದೊಡ್ಡ ದೊಡ್ಡ ಸಂಸ್ಥೆಗಳು ಕೂಡ ಭಾಗವಹಿಸಲು ಅವಕಾಶವಿದೆ.
- ಮಾರುಕಟ್ಟೆಗಳಲ್ಲಿ ಗುಣ ಪ್ರಮಾಣವಲ್ಲದ ಉತ್ಪನ್ನಗಳಿಂದ ಹಿಡಿದು ಪರೀಕ್ಷೆಗೊಳಪಡಿಸಿದ ಉತ್ತಮ ಗುಣಮಟ್ಟದ ಉತ್ಪನ್ನಗಳ ಲಭ್ಯತೆ ಬಗ್ಗೆ ಮಾಹಿತಿ ಆನ್‌ಲೈನ್‌ನಲ್ಲಿ ಮಾಹಿತಿ ನೀಡಲಾಗುತ್ತದೆ.

**ಪಾರದರ್ಶಕತೆ :**

- ಏಕೀಕೃತ ಮಾರುಕಟ್ಟೆ ವೇದಿಕೆಯಿಂದ ಮಾರುಕಟ್ಟೆಯ ಕಾರ್ಯ ನಿರ್ವಹಣೆಯಲ್ಲಿ ಹೆಚ್ಚಿದ ಪಾರದರ್ಶಕತೆ.
- ಎಲ್ಲಾ ಬಿಡ್‌ಗಳಿಗೂ ಸಮಾನ ಅವಕಾಶ ಏಕೀಕೃತ ಮಾರುಕಟ್ಟೆಗಳಲ್ಲಿ ಕಲ್ಪಿಸಲಾಗಿದೆ.


- ಏಕೀಕೃತ ಮಾರುಕಟ್ಟೆಯಲ್ಲಿ ಗೌಪ್ಯವಾಗಿ ಉತ್ಪನ್ನಗಳಿಗೆ ಬೆಲೆ ನಿರ್ಧಾರಣೆ ಮಾಡುವ ವ್ಯವಸ್ಥೆಯೂ ಇದೆ.
- ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಉತ್ಪನ್ನಗಳಿಗೆ ವಿದ್ಯುನ್ಮಾನ ತೂಕದ ವ್ಯವಸ್ಥೆ.
- ರೈತರ ಉತ್ಪನ್ನಗಳಿಗೆ ಗಣಕೀಕೃತ ಲೆಕ್ಕ ತೀರುವಳಿ ಪಟ್ಟಿಯನ್ನು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ನೀಡಲಾಗುತ್ತಿದೆ ಮತ್ತು ಸಕಾಲದಲ್ಲಿ ಹಣ ಪಾವತಿ ವ್ಯವಸ್ಥೆ ಮಾಡಲಾಗುತ್ತಿದೆ.
- ಮಾರುಕಟ್ಟೆಯ ಎಲ್ಲಾ ಭಾಗೀದಾರರ ಪ್ರಯೋಜನಕ್ಕಾಗಿ ದಕ್ಷ ಹಾಗೂ ಪರಿಣಾಮಕಾರಿಯಾದ ಕೃಷಿ ಮಾರಾಟ ಮಾಹಿತಿ ನೀಡಲಾಗಿತ್ತಿದೆ.

**ಹೆಚ್ಚಿದ ಮಾರುಕಟ್ಟೆ ಸಂಪರ್ಕ :**

- ವೈಜ್ಞಾನಿಕ ಉಗ್ರಾಣಗಳನ್ನು ಉಪಮಾರುಕಟ್ಟೆಗಳೆಂದು ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಿಂದ ಘೋಷಣೆ.
- ರೈತರಿಗೆ ಮಾರುಕಟ್ಟೆಗಳ ಧಾರಣೆ ಮಾಹಿತಿ ಅವರವರ ಮೊಬೈಲ್‌ಗೆ ಎಸ್‌ಎಂಎಸ್ ಮತ್ತು ರೈತರಿಗಾಗಿ ಉಚಿತ ಸಹಾಯವಾಣಿ ಮೂಲಕ ಮಾರುಕಟ್ಟೆ ಧಾರಣೆ ಮಾಹಿತಿ ಲಭ್ಯವಾಗುತ್ತಿದೆ.
- ಉಗ್ರಾಣ ಆಧಾರಿತ ಉತ್ಪನ್ನಕ್ಕೆ ಬ್ಯಾಂಕ್‌ಗಳಿಂದ ಹಣಕಾಸಿನ ಸಾಲ ಸೌಲಭ್ಯ ಪಡೆಯುವ ಅನುಕೂಲವಿದೆ.

**ಪರ್ಯಾಯ ಮಾರುಕಟ್ಟೆಗಳು :**

- ಕೃಷಿಉತ್ಪನ್ನಮಾರುಕಟ್ಟೆಪ್ರಾಂಗಣಗಳು ವೈಜ್ಞಾನಿಕ ದಾಸ್ತಾನು ವ್ಯವಸ್ಥೆ ಇರವು ಘೋಷಿತ ಉಗ್ರಾಣಗಳು ಉಪಮಾರುಕಟ್ಟೆಗಳಾಗಿವೆ.
- ಖಾಸಗಿ ಮಾರುಕಟ್ಟೆಗಳು
- ನೇರ ಖರೀದಿ ಕೇಂದ್ರಗಳು
- ಒಪ್ಪಂದ ಕೃಷಿ ವ್ಯವಸ್ಥೆಗಳು
- ಎಫ್‌ಪಿಓ ಮತ್ತು ಕೃಷಿ ಉತ್ನನ್ನ ಸಹಕಾರ ಸಂಘಗಳು



**ಮಾರುಕಟ್ಟೆ ಪ್ರಾಂಗಣಗಳಲ್ಲಿ ಕಾರ್ಯಗಳ ಹರಿವು**

- ರೈತರ ಉತ್ಪನ್ನಗಳ ವಿವರಗಳನ್ನು ಪ್ರತ್ಯೇಕವಾಗಿ ಪ್ರವೇಶ ದ್ವಾರದಲ್ಲಿ ದಾಖಲಿಸಿ ಪ್ರತ್ಯೇಕ ಗುರುತಿನ ಸಂಖ್ಯೆಯನ್ನು ನೀಡಲಾಗುವುದು.
- ದಲ್ಲಾಲರ ಅಂಗಡಿಯ ಮುಂದೆ ಉತ್ಪನ್ನವನ್ನು ಇಳಿಸುವುದು.
- ದಲ್ಲಾಲರಲ್ಲಿರುವ ಉತ್ಪನ್ನಗಳ ಸಂಗ್ರಹದ ದಾಖಲೆ
- ಉತ್ಪನ್ನಗಳನ್ನು ರಾಶಿ ಹಾಕುವುದು, ಸ್ಯಾಂಪಲ್ (ಮಾದರಿ) ಪ್ರದರ್ಶಿಸುವುದು.
- ಪ್ರತ್ಯೇಕ ಉತ್ಪನ್ನದ ಗುರುತಿನ ಸಂಖ್ಯೆಗೆ ಅನುಗುಣವಾಗಿ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಧಾರಣೆ ನಮೂದಿಸುವುದು.
- ಅತೀ ಹೆಚ್ಚಿನ ಧಾರಣೆ ತಿಳಿಯುವುದು/ಖರೀದಿದಾರರು ಮತ್ತು ರೈತರಿಗೆ ಎಸ್ ಎಂ ಎಸ್ ಮೂಲಕ ಮಾಹಿತಿ ನೀಡುವುದು.
- ವಿದ್ಯುನ್ಮಾನ ತೂಕ ಯಂತ್ರದ ಮೂಲಕ ಉತ್ಪನ್ನವನ್ನು ತೂಕ ಮಾಡುವುದು.
- ಗಣಕೀಕೃತ ಮಾರಾಟ ರಸೀದಿ ದಾಖಲೆ ತಯಾರಿಸುವುದು.
- ಖರೀದಿದಾರು/ದಲ್ಲಾಲರಿಂದ ಹಣ ಪಾವತಿ.
- ರೈತರು ಹಣ ಪಡೆದ ಬಗ್ಗೆ ರಶೀತಿ ದಾಖಲೆ ಸಿದ್ಧಪಡಿಸುವುದು.
- ರೈತರ ಖಾತೆಗೆ ಹಣ ವರ್ಗಾವಣೆ.
- ಖರೀದಿದಾರರಲ್ಲಿರುವ ದಾಸ್ತಾನು ಪ್ರಮಾಣವನ್ನು ತಿಳಿಯುವುದು.
- ಉತ್ಪನ್ನಗಳು ಮಾರುಕಟ್ಟೆಯಿಂದ ಹೊರ ಹೋಗುವುದನ್ನು ದಾಖಲಿಸುವುದು

**ರೈತ ಜಾಗೃತಿ ಸಭೆಗಳು :**

- 156 ಏಕೀಕೃತ ಮಾರುಕಟ್ಟೆಗಳ ವ್ಯಾಪ್ತಿಯಲ್ಲಿ ರೈತ ಶಿಕ್ಷಣ ಅಭಿಯಾನ.
- 20,000 ಹಳ್ಳಿಗಳಲ್ಲಿ ರೈತರ ಭಾಗೀದಾರರ ಸಭೆಗಳಲ್ಲಿ ರೈತ ಜಾಗೃತಿ ಶಿಕ್ಷಣ.
- 40 ಲಕ್ಷ ರೈತ ಬಾಂಧವರಿಗೆ ಏಕೀಕೃತ ಮಾರುಕಟ್ಟೆಯ ಆನ್‌ಲೈನ್ ಟೆಂಡರ್ ಅನುಕೂಲಗಳ ಕುರಿತು ಮಾಹಿತಿ.

**ಏಕೀಕೃತ ಮಾರುಕಟ್ಟೆ ಪ್ರಗತಿ :**

- 2014ರ ಫೆಬ್ರವರಿ 22ರಂದು ಪ್ರಾರಂಭಿಕವಾಗಿ ತುಮಕೂರು,ತಿಪಟೂರು ಹಾಗೂ ಚಾಮರಾಜನಗರದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿನ ಏಕೀಕೃತ ಮಾರುಕಟ್ಟೆ ವೇದಿಕೆಯ ಉತ್ಪನ್ನಗಳ ಆನ್‌ಲೈನ್ ಟೆಂಡರ್ ಸೇವೆಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಸನ್ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಚಾಲನೆ ನೀಡಿದರು, ಇದೀಗ ರಾಜ್ಯದ 161 ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ (ವಿದ್ಯುನ್ಮಾನ ವೇದಿಕೆ)ಯನ್ನು ವಿಸ್ತರಿಸಲಾಗಿದೆ.
- ರಾಜ್ಯದ 161 ಪ್ರಮುಖ ಎಪಿಎಂಸಿಗಳಲ್ಲಿ ಖರೀದಿದಾರರು ಖರೀದಿಸಿದ ಉತ್ಪನ್ನಗಳ ಸಾಗಾಟಕ್ಕೆ ಇ–ಪರ್ಮಿಟ್ ಪಡೆಯಬಹುದಾಗಿದೆ. 40 ಏಕೀಕೃತ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ಗುಣವಿಶ್ಲೇಷಣೆ ಮಾಡುವ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಇನ್ನೂ ಉತ್ಪನ್ನಗಳ ಸ್ವಚ್ಛತೆ, ವರ್ಗೀಕರಣ ಮತ್ತು ಪ್ಯಾಕ್ ಮಾಡಲು ಆಧುನಿಕ ಯಂತ್ರ ಉಪಕರಣಗಳನ್ನು ಸ್ಥಾಪಿಸಲಾಗುತ್ತಿದೆ.
- ಪ್ರಸ್ತುತ ಈ ಮಾರುಕಟ್ಟೆಗಳಲ್ಲಿ ಆನ್‌ಲೈನ್ ಟೆಂಡರ್ ಮೂಲಕ



77 ಲಕ್ಷಕ್ಕೂ ಹೆಚ್ಚು ಲಾಟ್‌ಗಳ ವ್ಯವಹಾರ ವಹಿವಾಟು ನಡೆದಿದ್ದು, ಇದರ ಒಟ್ಟು ಮೌಲ್ಯ ಸುಮಾರು ರೂ.52,000 ಕೋಟಿಗಳಾಗಿದೆ. ಹಂತ ಹಂತವಾಗಿ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸ್ಥಾಪಿತವಾದ ಏಕೀಕೃತ ಮಾರುಕಟ್ಟೆಗಳಲ್ಲಿ ರೈತರ ಉತ್ಪನ್ನಗಳ ಖರೀದಿಗೆ ಆನ್‌ಲೈನ್‌ನಲ್ಲಿ ಸ್ಪರ್ಧೆ ಹೆಚ್ಚಾಗಿ, ಸ್ಪರ್ಧಾತ್ಮಕ ಬೆಲೆ ಲಭ್ಯವಾಗುತ್ತಿರುವುದು ಹರ್ಷತಂದಿದೆ.

**ಜ್ಞಾನ ವರ್ಗಾವಣೆ :**

- 2014ರಲ್ಲಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಎನ್.ಚಂದ್ರಬಾಬು ನಾಯ್ಡು ಮತ್ತು ಅವರ ಸಚಿವ ಸಂಪುಟದ ಸಚಿವರು ರಾಜ್ಯಕ್ಕೆ ಭೇಟಿ ನೀಡಿ, ಕರ್ನಾಟಕ ರಾಜ್ಯದ ಮುಖ್ಯಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಇ–ಮಾರ್ಕೆಟ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಕೃಷಿ ಉತ್ಪನ್ನ ಮಾರಾಟ ಸುಧಾರಣೆ ಮತ್ತು ಏಕೀಕೃತ ಮಾರುಕಟ್ಟೆ ಪ್ರಕ್ರಿಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿರುತ್ತಾರೆ. ಕರ್ನಾಟಕ ಮಾದರಿಯನ್ನೇ ನೆರೆ ರಾಜ್ಯ ಆಂಧ್ರಪ್ರದೇಶ ಸರ್ಕಾರ ತನ್ನ 10 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಅಳವಡಿಸಿಕೊಂಡಿದೆ. ಈ ಮಾರುಕಟ್ಟೆಗಳಿಗೆ ಬೇಕಾದ ತಂತ್ರಜ್ಞಾನದ ಸೌಲಭ್ಯವನ್ನು ಕರ್ನಾಟಕ ಸರ್ಕಾರ ಪೂರೈಸುತ್ತಿದೆ.
- ವಿಶ್ವ ಬ್ಯಾಂಕಿನ ಆರ್ಥಿಕ ಸಲಹೆಗಾರರು ಮತ್ತು ತಾಂಜೇನಿಯಾ ಸರ್ಕಾರದ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿ, ಕೃಷಿ ಉತ್ಪನ್ನ ನಿಯಂತ್ರಣ ಮಾರುಕಟ್ಟೆಗಳ ಆಧುನಿಕರಣಕ್ಕೆ ಸರ್ಕಾರ ಜಾರಿಗೆ ತಂದಿದ್ದ ಕೃಷಿ ಮಾರಾಟ ನೀತಿ–2013 ಮತ್ತು ಉತ್ಪನ್ನಗಳ ಆನ್‌ಲೈನ್ ಮಾರಾಟ ಪದ್ಧತಿಯ ಪ್ರಕ್ರಿಯೆಗಳ ಕುರಿತು ಅಧ್ಯಯನ ನಡೆಸಿರುತ್ತಾರೆ.



- 2014ರಲ್ಲಿ ಭಾರತ ಸರ್ಕಾರದ ಕೃಷಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳಾದ ಶ್ರೀ ಡಿ.ಕೆ.ಜೈನ್ ನೇತೃತ್ವದಲ್ಲಿ ಜಾರ್ಖಂಡ್, ಒಡಿಶಾ, ಗುಜರಾತ್, ಪಶ್ಚಿಮ ಬಂಗಾಳ, ಉತ್ತರಖಂಡ್, ರಾಜಸ್ಥಾನ ಮತ್ತು ಛತ್ತೀಸ್‌ಗಢ ರಾಜ್ಯಗಳ ಕೃಷಿ ಮಾರಾಟ ನಿರ್ದೇಶನಾಲಯದ ಅಧಿಕಾರಿಗಳು ಕಲಬುರಗಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಭೇಟಿ ನೀಡಿ ಒಂದು ದಿನದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಕೃಷಿ ಮಾರಾಟ ಸುಧಾರಣೆ, ಕೃಷಿ ಮಾರಾಟ ನೀತಿ ಮತ್ತು ಏಕೀಕೃತ ಮಾರುಕಟ್ಟೆ ಕಾರ್ಯವಿಧಾನದ ಬಗ್ಗೆ ಮಾಹಿತಿ ಪಡೆದರು.
- 2015ರಲ್ಲಿ ಭಾರತ ಸರ್ಕಾರದ ಕೃಷಿ ಮಾರಾಟ ಸುಧಾರಣಾ ಪರಿಣಿತ ತಂಡದ ಅಧ್ಯಕ್ಷರಾದ ಡಾ. ಅಶೋಕ ಗುಲಾಟಿ, ಎಸ್.ಎಫ್.ಎ.ಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪ್ರವೇಶ್ ಶರ್ಮ ಮತ್ತು ಕೇಂದ್ರ ಸರ್ಕಾರದ ಸಹಕಾರ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಆಶೀಶ್ ಕುಮಾರ್ ಭುತಾನಿ ಇವರು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಏಕೀಕೃತ ಮಾರುಕಟ್ಟೆ ಜಾರಿಗೊಳಿಸಿರುವ ಕೃಷಿ ಉತ್ಪನ್ನ ಮಾರುಕಟ್ಟೆಗಳಿಗೆ ಭೇಟಿ ನೀಡಿ ಆನ್‌ಲೈನ್ ಟೆಂಡರ್ ಪ್ರಕಿಯೆಗಳ ಕುರಿತು ಮಾಹಿತಿ ಪಡೆದರು.
- 2015 ಜುಲೈ 09–10ರಂದು, ಕರ್ನಾಟಕ ರಾಜ್ಯದ ಕೃಷಿ ಉತ್ಪನ್ನ ಮಾರಾಟ ಕ್ಷೇತ್ರದಲ್ಲಿನ ಕ್ರಾಂತಿಕಾರಿ ವ್ಯವಸ್ಥೆಯ ಬಗ್ಗೆ ಮಾಹಿತಿಯನ್ನು ಪಡೆಯಲು ಹುಬ್ಬಳ್ಳಿಯಲ್ಲಿ ಎರಡು ದಿನಗಳ ಕಾಲ ರಾಷ್ಟ್ರೀಯ ಕಾರ್ಯಗಾರ ನಡೆಸಲಾಯಿತು. ಈ ಕಾರ್ಯಗಾರದ ಬಹುಮುಖ್ಯದ ಉದ್ದೇಶ ರಾಷ್ಟ್ರವ್ಯಾಪ್ತಿ ಕೃಷಿ ಉತ್ಪನ್ನಗಳಿಗೆ ಆನ್‌ಲೈನ್ ಮಾರ್ಕೆಟ್ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿತ್ತು. ಕಾರ್ಯಗಾರದಲ್ಲಿ ಕೇಂದ್ರ ಕೃಷಿ ಸಚಿವರಾದ ಶ್ರೀ ರಾಧಮೋಹನ್‌ಸಿಂಗ್ ಮತ್ತು 26 ರಾಜ್ಯಗಳ ಕೃಷಿ ಸಚಿವರುಗಳು ಹಾಗೂ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಗಾರದಲ್ಲಿ ಏಕೀಕೃತ ಮಾರುಕಟ್ಟೆ ಕಾರ್ಯನಿರ್ವಹಣೆ, ತಂತ್ರಜ್ಞಾನ ಅಳವಡಿಕೆ, ಮಾರುಕಟ್ಟೆಯಲ್ಲಿನ ವಹಿವಾಟಿನ ಸಂಪೂರ್ಣ ಗಣಿಕೀಕರಣ, ಉತ್ಪನ್ನಗಳ ಗುಣವಿಶ್ಲೇಷಣೆ, ಉಗ್ರಾಣಾಧಾರಿತ ಮಾರಾಟ ವ್ಯವಸ್ಥೆ, ರೈತರ ನೊಂದಣಿ, ರೈತರ ಅನುಕೂಲಕ್ಕಾಗಿ ಪ್ರಾಂಗಣದಲ್ಲಿ ಬ್ಯಾಂಕರ್ಸ್ ಕೋರ್ಟ್ ಬಗ್ಗೆ ಪ್ರಾತ್ಯಕ್ಷಿಕೆಗಳ ಮೂಲಕ ಗಣ್ಯರಿಗೆ ಸನ್ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಮತ್ತು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿರುತ್ತಾರೆ.
- ಸನ್ಮಾನ್ಯ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಜನವರಿ–2016ರಲ್ಲಿ ಸಿಕ್ಕಿಂ ರಾಜ್ಯದಲ್ಲಿ ಜರುಗಿದ ಕೃಷಿ ವಿಷಯಕ್ಕೆ ಸಂಬಂಧಿಸಿದ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯವನ್ನು ಕೃಷಿ ಮಾರಾಟ ಕ್ಷೇತ್ರದಲ್ಲಿನ ಸುಧಾರಣೆ ಸಂಬಂಧ ಮಾದರಿ ರಾಜ್ಯವೆಂದು ಪ್ರತಿಬಿಂಬಿಸಲಾಗಿದೆ. ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ರಂಗದಲ್ಲಿ ಮುಂಚೂಣಿಯಲ್ಲಿರುವ ರಾಜ್ಯವೆಂದು ಸಮ್ಮೇಳನದಲ್ಲಿ ಪರಿಗಣಿಸಲಾಯಿತು. ❑



ಆಶಯ

# ಮನ್ ಕೀ ಬಾತ್




**ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 28-05-2017ರಂದು ಮಾಡಿದ 'ಮನ್ ಕಿ ಬಾತ್' – 32 ನೇ ಭಾಷಣದ ಕನ್ನಡಾನುವಾದದ ಆಯ್ದ ಅವತರಣಿಕೆ.**

ನನ್ನ ಪ್ರೀತಿಯ ದೇಶ ಬಾಂಧವರೇ, ನಮಸ್ಕಾರ. ಈ ವರ್ಷದ ಬಿಸಿಲ ಬೇಗೆಯನ್ನು ನಾವು ಮರೆಯಲಾಗದು. ಆದರೆ, ಮಳೆಯ ನಿರೀಕ್ಷೆಯಂತೂ ಇದೆ. ಇಂದು ನಾನು ನಿಮ್ಮ ಜೊತೆ ಮಾತಾಡುತ್ತಿರುವ ಸಂದರ್ಭದಲ್ಲಿ ರಂಜಾನ್ ಪವಿತ್ರ ತಿಂಗಳ ಆರಂಭವಾಗಿದೆ. ಪವಿತ್ರ ರಂಜಾನ್ ತಿಂಗಳ ಆಗಮನಕ್ಕಾಗಿ ನಾನು ಭಾರತದ ಮತ್ತು ವಿಶ್ವದ ಎಲ್ಲ ಜನರಿಗೆ ಅದರಲ್ಲೂ ವಿಶೇಷವಾಗಿ ಮುಸ್ಲಿಂ ಬಾಂಧವರಿಗೆ ಈ ಪವಿತ್ರ ತಿಂಗಳ ಶುಭಾಶಯಗಳನ್ನು ಕೋರುತ್ತೇನೆ. ರಂಜಾನ್ ತಿಂಗಳಲ್ಲಿ ಪ್ರಾರ್ಥನೆ, ಆಧ್ಯಾತ್ಮಿಕತೆ ಮತ್ತು ದಾನಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಭಾರತೀಯರಾದ ನಾವು ತುಂಬಾ ಭಾಗ್ಯವಂತರು, ನಮ್ಮ ಪೂರ್ವಜರು ಎಂಥ ಪರಂಪರೆಯನ್ನು ಹುಟ್ಟುಹಾಕಿದ್ದಾರೆಂದರೆ ಸಂಪೂರ್ಣ ವಿಶ್ವದ ಎಲ್ಲ ಸಂಪ್ರದಾಯಗಳು ಭಾರತದಲ್ಲಿವೆ. ಇದಕ್ಕೆ ನಮ್ಮ ದೇಶ ಮತ್ತು ದೇಶದ 125 ಕೋಟಿ ಜನರು ಹೆಮ್ಮೆಪಡುತ್ತೇವೆ. ನಮ್ಮದು ಎಂಥ ದೇಶವೆಂದರೆ, ಈಶ್ವರನಲ್ಲಿ ನಂಬಿಕೆ ಇಟ್ಟವರು, ಈಶ್ವರನನ್ನು ಅಲ್ಲಗಳೆಯುವವರು, ಮೂರ್ತಿ ಪೂಜೆ ಮಾಡುವವರು, ಮೂರ್ತಿ ಪೂಜೆ ವಿರೋಧಿಸುವವರು, ಎಲ್ಲ ಬಗೆಯ ವಿಚಾರಧಾರೆ, ಎಲ್ಲ ಬಗೆಯ ಪೂಜಾ ಪದ್ಧತಿಗಳು, ಎಲ್ಲ ಬಗೆಯ ಪರಂಪರೆಗಳು ಇಲ್ಲಿದ್ದು ನಾವು ಒಗ್ಗಟ್ಟಿನಿಂದ ಜೀವಿಸುವ ಕಲೆಯನ್ನು ಸಾಧಿಸಿದ್ದೇವೆ. ಅದೂ ಅಲ್ಲದೇ ಧರ್ಮವೇ ಆಗಲಿ, ಸಂಪ್ರದಾಯವೇ ಆಗಲಿ, ವಿಚಾರಧಾರೆಗಳಾಗಲಿ, ಪರಂಪರೆಯಾಗಲಿ ನಮಗೆ ಶಾಂತಿ, ಏಕತೆ ಮತ್ತು ಸದ್ಭಾವನೆಯ ಸಂದೇಶವನ್ನೇ ನೀಡುತ್ತವೆ. ರಂಜಾನ್, ಈ ಪವಿತ್ರ ತಿಂಗಳು ಶಾಂತಿ, ಏಕತೆ ಮತ್ತು ಸದ್ಭಾವನೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಖಂಡಿತ ಸಹಾಯಕರವಾಗಿರುತ್ತದೆ. ನಾನು ಮತ್ತೊಮ್ಮೆ ಎಲ್ಲರಿಗೂ ಶುಭಾಶಯ ತಿಳಿಸುತ್ತೇನೆ. ಕಳೆದ ಬಾರಿ ಮನದಾಳದ ಮಾತಿನಲ್ಲಿ ನಾನು ಒಂದು ಶಬ್ದವನ್ನು ಬಳಸಿದ್ದೆ, ಅದರಲ್ಲೂ ಯುವಜನತೆಗೆ ಏನಾದರೂ ಹೊಸತನ್ನು ಮಾಡಿ, ಕಂಫರ್ಟ್ ಝೋನ್‌ನಿಂದ ಹೊರಬನ್ನಿ, ಹೊಸ ಅನುಭವಗಳನ್ನು ಪಡೆಯಿರಿ ಎಂದು ಹೇಳಿದ್ದೆ. ಅಲ್ಲದೇ ಜೀವನವನ್ನು ಈ ರೀತಿ ಜೀವಿಸಲು, ಸ್ವಲ್ಪ ರಿಸ್ಕ್ ತೆಗೆದುಕೊಳ್ಳಲು, ಸವಾಲುಗಳಿಗೆ ಎದೆಯೊಡ್ಡಲು ಇದೇ ಸಮಯವಲ್ಲವೇ. ಬಹಳಷ್ಟು ಜನರು ನನಗೆ ಪ್ರತಿಕ್ರಿಯಿಸಿದ್ದಾರೆಂದು ನನಗೆ ಹರ್ಷವೆನಿಸುತ್ತದೆ. ವ್ಯಕ್ತಿಗತವಾಗಿ ತಮ್ಮ ಮಾತುಗಳನ್ನು ನನಗೆ ಹೇಳಲು ಎಲ್ಲರೂ ಉತ್ಸಾಹ ತೋರಿದ್ದಾರೆ. ನಾನು ಎಲ್ಲ ವಿಷಯಗಳನ್ನು ಓದಲಾಗಲಿಲ್ಲ, ಎಲ್ಲರ ಸಂದೇಶಗಳನ್ನು ಕೇಳಲೂ ಆಗಲಿಲ್ಲ, ಅಷ್ಟೊಂದು ಪ್ರತಿಕ್ರಿಯೆಗಳು ಬಂದಿದ್ದವು. ಆದರೆ ನಾನು ಮೇಲ್ನೋಟಕ್ಕೆ ನೋಡಿದರೂ – ಯಾರೋ ಸಂಗೀತ ಕಲಿಯುವ ಪ್ರಯತ್ನ ಮಾಡಿದ್ದಾರೆ, ಇನ್ನಾರೋ ಹೊಸ ವಾದ್ಯದ ಮೇಲೆ ಕೈಯಾಡಿಸುತ್ತಿದ್ದಾರೆ, ಕೆಲವರು ಯು ಟ್ಯೂಬ್ ಬಳಸಿ ಹೊಸ ವಿಷಯಗಳನ್ನು ಕಲಿಯುವ ಪ್ರಯತ್ನದಲ್ಲಿದ್ದಾರೆ. ಹೊಸ ಭಾಷೆಯನ್ನು ಕಲಿಯುವ ಪ್ರಯತ್ನ ಮಾಡುತ್ತಿದ್ದಾರೆ. ಕೆಲವರು ಅಡುಗೆ ಮಾಡುವುದನ್ನು ಕಲಿಯುತ್ತಿದ್ದಾರೆ. ಕೆಲವರು ನೃತ್ಯ, ಕೆಲವರು ನಾಟಕ ಕಲಿಯುತ್ತಿದ್ದಾರೆ. ಕೆಲವರಂತೂ ತಾವು ಕವಿತೆ ಬರೆಯಲು ಆರಂಭಿಸಿರುವುದಾಗಿ ಬರೆದಿದ್ದಾರೆ. ಪ್ರಕೃತಿಯನ್ನುಅರಿಯಲು,ಅದನ್ನುಜೀವಿಸಲು, ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ನನಗೆ ತುಂಬಾ ಸಂತೋಷವಾಗುತ್ತಿದೆ ಮತ್ತು ಒಂದು ಫೋನ್ ಕರೆಯನ್ನು ನಿಮಗೂ ಕೇಳಿಸಬಯಸುತ್ತೇನೆ. 'ದೀಕ್ಷಾ ಕಾತ್ಯಾಲ ಮಾತಾಡ್ತಾ ಇದ್ದೀನಿ. ನನಗೆ ಓದುವ ಅಭ್ಯಾಸ ಹೆಚ್ಚು ಕಮ್ಮಿ ಬಿಟ್ಟೇ ಹೋಗಿತ್ತು. ಆದ್ದರಿಂದ ಈ ಬಾರಿ ರಜೆಯಲ್ಲಿ ನಾನು ಓದುವ ಕುರಿತು ನಿರ್ಧರಿಸಿದೆ. ನಾನು ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಓದಲು ಆರಂಭಿಸಿದ ಮೇಲೆ ಭಾರತಕ್ಕೆ

* ಕೃಪೆ; ಆಕಾಶವಾಣಿ, ಬೆಂಗಳೂರು



ಸಾತಂತ್ರ್ಯ ತಂದುಕೊಡಲು ಎಷ್ಟೆಲ್ಲ ಹೋರಾಟ ಮಾಡಬೇಕಾಯಿತು, ಎಷ್ಟು ಬಲಿದಾನ ನೀಡಬೇಕಾಯಿತು, ಎಷ್ಟೊಂದು ಜನ ಸ್ವಾತಂತ್ರ್ಯ ಸೇನಾನಿಗಳು ಜೈಲಿನಲ್ಲಿ ವರ್ಷಗಳನ್ನೇ ಕಳೆದರು, ಎಂಬುದು ನನಗೆ ಅನುಭವವಾಯಿತು. ತುಂಬಾ ಚಿಕ್ಕ ವಯಸ್ಸಿನಲ್ಲೇ ಸಾಕಷ್ಟು ಸಾಧಿಸಿದ ಭಗತ್ ಸಿಂಗ್ ರಿಂದ ನಾನು ಪ್ರೇರಿತಳಾಗಿದ್ದೇನೆ. ಆದ್ದರಿಂದ ಈ ವಿಷಯ ಕುರಿತು ನೀವು ಇಂದಿನ ಪೀಳಿಗೆಯ ಜನತೆಗೆ ಸಂದೇಶವನ್ನು ನೀಡಿ ಎಂದು ಕೋರುತ್ತೇನೆ.'

ನಮ್ಮ ಇತಿಹಾಸವನ್ನು, ನಮ್ಮ ಸ್ವತಂತ್ರ ಸೇನಾನಿಗಳನ್ನು, ಈ ದೇಶಕ್ಕಾಗಿ ಬಲಿದಾನ ನೀಡಿದ ಜನರನ್ನು, ಅವರ ವಿಷಯಗಳನ್ನು ಅರಿಯುವ ಬಗ್ಗೆ ನಮ್ಮ ಯುವಪೀಳಿಗೆ ಆಸಕ್ತಿವಹಿಸುತ್ತಿದೆ ಎಂದು ನನಗೆ ಆನಂದವೆನಿಸುತ್ತಿದೆ. ಲೆಕ್ಕವಿಲ್ಲದಷ್ಟು ಮಹಾಪುರುಷರು ಜೈಲಿನಲ್ಲೇ ತಮ್ಮ ಯೌವನ ಕಳೆದರು. ಎಷ್ಟೋ ಯುವಕರು ನೇಣುಗಂಬವನ್ನೇರಿದರು, ಏನೆಲ್ಲ ಅನುಭವಿಸಿದರು. ಆದ್ದರಿಂದಲೇ ಅಲ್ಲವೇ ನಾವು ಸ್ವತಂತ್ರ ಭಾರತದಲ್ಲಿ ಉಸಿರಾಡುತ್ತಿದ್ದೇವೆ. ಸ್ವತಂತ್ರ ಹೋರಾಟದಲ್ಲಿ ಯಾವ ಮಹನೀಯರು ಜೈಲಿನಲ್ಲಿ ಸಮಯ ಕಳೆದರೋ ಅವರು ಬರವಣಿಗೆ ಮತ್ತು ಅಧ್ಯಯನದ ಬಹು ದೊಡ್ಡ ಕೆಲಸವನ್ನೇ ಮಾಡಿದ್ದಾರೆ ಮತ್ತು ಅವರ ಲೇಖನಿ ಕೂಡಾ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬಲವನ್ನಿತ್ತಿದೆ.

ಬಹಳ ವರ್ಷಗಳ ಹಿಂದೆ ನಾನು ಅಂಡಮಾನ್ ನಿಕೋಬಾರ್‌ಗೆ ಹೋಗಿದ್ದೆ. ಸೆಲ್ಯುಲಾರ್ ಜೈಲು ನೋಡಲು ಹೋಗಿದ್ದೆ. ಇಂದು ವೀರ ಸಾವರ್ಕರ್ ಅವರ ಜನ್ಮ ಜಯಂತಿ ಇದೆ. ಸಾವರ್ಕರ್ ಅವರು ಜೈಲಿನಲ್ಲಿ 'ಮಾಝಿ ಜನ್ಮಠೆ' ಎಂಬ ಪುಸ್ತಕ ಬರೆದಿದ್ದರು. ಕವಿತೆಗಳನ್ನು ಬರೆಯುತ್ತಿದ್ದರು, ಗೋಡೆ ಮೇಲೆ ಬರೆಯುತ್ತಿದ್ದರು. ಒಂದು ಪುಟ್ಟ ಕೋಣೆಯಲ್ಲಿ ಅವರನ್ನು ಬಂಧಿಯಾಗಿರಿಸಲಾಗಿತ್ತು. ಸ್ವತಂತ್ರ ಪ್ರೇಮಿಗಳು ಎಷ್ಟೆಲ್ಲ ಯಾತನೆ ಸಹಿಸಿರಬೇಕು. ನಾನು ಸಾವರ್ಕರ್ ಅವರ 'ಮಾಝಿ ಜನ್ಮಠೆ' ಪುಸ್ತಕ ಓದಿದಾಗ ನನಗೆ ಸೆಲ್ಯುಲಾರ್ ಜೈಲು ನೋಡಬೇಕೆಂಬ ಪ್ರೇರಣೆ ದೊರೆಯಿತು. ಅಲ್ಲಿ ಲೈಟ್ ಆಂಡ್ ಸೌಂಡ್ ಶೋ ಕಾರ್ಯಕ್ರಮವೂ ನಡೆಯುತ್ತದೆ. ಅದು ಬಹಳ ಪ್ರೇರಣಾದಾಯಕವಾಗಿದೆ. ಭಾರತದ ಯಾವುದೇ ರಾಜ್ಯ ಮತ್ತು ಯಾವುದೇ ಭಾಷೆಯವರಾಗಿರಲಿ ಸ್ವಾತಂತ್ರ್ಯಕ್ಕಾಗಿ ಕಾಲಾ ಪಾನಿ ಶಿಕ್ಷೆ ಅನುಭವಿಸುತ್ತಾ ಅಂಡಮಾನ್‌ನ ಈ ಸೆಲ್ಯುಲಾರ್ ಜೈಲಿನಲ್ಲಿ ತನ್ನ ಜೀವನವನ್ನು ವ್ಯಯಿಸದೇ ಇರುವವರೇ ಇಲ್ಲ.. ಎಲ್ಲ ಭಾಷಿಕರು, ಎಲ್ಲ ಪ್ರಾಂತ್ಯದವರು, ಎಲ್ಲ ವಯೋಮಾನದವರು ಎಷ್ಟೆಲ್ಲ ಯಾತನೆಯನ್ನು ಸಹಿಸಿದ್ದರು.

ಇಂದು ವೀರ ಸಾವರ್ಕರ್ ಅವರ ಜನ್ಮ ಜಯಂತಿಯಿದೆ. ನಾನು ದೇಶದ ಯುವಜನತೆಗೆ ಖಂಡಿತ ಹೇಳಬಯಸುತ್ತೇನೆ, ನಮಗೆ ದೊರೆತ ಸ್ವಾತಂತ್ರ್ಯಕ್ಕಾಗಿ ಜನರು ಎಷ್ಟು ಯಾತನೆ ಸಹಿಸಿದ್ದರು, ಎಷ್ಟು ಕಷ್ಟಗಳನ್ನು ಅನುಭವಿಸಿದ್ದರು, ಕಾಲಾ ಪಾನಿ ಅಂದರೇನು ಎಂಬುದು ಸೆಲ್ಯುಲಾರ್ ಜೈಲಿಗೆ ಹೋಗಿ ನೋಡಿದರೆ ತಿಳಿಯುತ್ತದೆ. ನೀವು ಎಂದಾದರೂ ಅವಕಾಶ ಸಿಕ್ಕರೆ ನಮ್ಮ ಸ್ವಾತಂತ್ರ್ಯದ ತೀರ್ಥ ಕ್ಷೇತ್ರದಂತಿರುವ ಈ ಸ್ಥಳಕ್ಕೆ ಹೋಗಿ ಬನ್ನಿ.

ನನ್ನ ಪ್ರಿಯ ದೇಶವಾಸಿಗಳೇ ಜೂನ್ 5, ತಿಂಗಳ ಮೊದಲ ಸೋಮವಾರ. ಎಲ್ಲವೂ ಸಾಮಾನ್ಯವಾದದ್ದೇ, ಆದರೆ ಜೂನ್ 5 ವಿಶೇಷ ಮಹತ್ವ ಪಡೆದಿದೆ. ಏಕೆಂದರೆ ಅಂದು ವಿಶ್ವ ಪರಿಸರ ದಿನವೆಂದು ಆಚರಿಸಲಾಗುತ್ತದೆ. 'ಜನರಿಗೆ ನಿಸರ್ಗದೊಂದಿಗೆ ಸಂಪರ್ಕ ಕಲ್ಪಿಸುವುದು' ಎಂಬುದು ಈ ವರ್ಷದ ವಿಶ್ವಸಂಸ್ಥೆಯ ಘೋಷವಾಕ್ಯವಾಗಿದೆ. ಸುಲಭ ಶಬ್ದಗಳಲ್ಲಿ ಹೇಳಬೇಕಾದರೆ ಬ್ಯಾಕ್ ಟು ಬೇಸಿಕ್ಸ್ ಅಂದರೆ ನಿಸರ್ಗದೊಂದಿಗೆ ಸಂಪರ್ಕ ಅಂದರೆ ಏನರ್ಥ – ನನ್ನ ಪ್ರಕಾರ ನಮ್ಮೊಂದಿಗೆ ಸಂಪರ್ಕ ಹೊಂದುವುದು. ನಿಸರ್ಗದೊಂದಿಗೆ ಸಂಪರ್ಕ ಅಂದರೆ ಉತ್ತಮ ಗ್ರಹ ಪೋಷಣೆ ಎಂದು. ಈ ಮಾತನ್ನು ಮಹಾತ್ಮಾ ಗಾಂಧೀ ಅವರಿಗಿಂತ ಉತ್ತಮ ರೀತಿಯಲ್ಲಿ ಯಾರು ಹೇಳಬಲ್ಲರು? ಮಹಾತ್ಮಾ ಗಾಂಧೀಜಿ ಎಷ್ಟೋ ಸಾರಿ ಹೇಳುತ್ತಿದ್ದರು. ಅಂದರೆ ನಾವು ಯಾವ ಜಗತ್ತನ್ನು ನೋಡುವುದಿಲ್ಲವೋ ಅದರ ಬಗ್ಗೆಯೂ ಕಾಳಜಿವಹಿಸುವುದು, ಅದನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ. ಪ್ರಕೃತಿಯಲ್ಲಿ ಒಂದು ಶಕ್ತಿಯಿದೆ. ತುಂಬಾ ದಣಿವಾಗಿ ಬಂದಾಗ ಒಂದು ಗ್ಲಾಸ್ ನೀರನ್ನು ಮುಖಕ್ಕೆ ಎರಚಿಕೊಂಡರೆ ಎಂಥ ತಾಜಾತನ ಸಿಗುತ್ತದೆ ಎಂದು ನಿಮಗೂ ಅದರ ಅನುಭವವಾಗಿರಬಹುದು. ತುಂಬಾ ದಣಿದು ಬಂದಾಗ ಕೋಣೆಯ ಕಿಟಕಿಗಳನ್ನು ತೆರೆದು, ತಾಜಾ ಗಾಳಿಯನ್ನು ಉಸಿರಾಡಿದಾಗ ಒಂದು ಹೊಸ ಚೈತನ್ಯ ಮೂಡುತ್ತದೆ. ಯಾವ ಪಂಚ ಮಹಾಭೂತಗಳಿಂದ ಶರೀರ ನಿರ್ಮಿತವಾಗಿದೆಯೋ ಅವುಗಳೊಂದಿಗೆ ಸಂಪರ್ಕವೇರ್ಪಟ್ಟಾಗ ತನ್ನಷ್ಟಕ್ಕೇ ದೇಹದಲ್ಲಿ ಒಂದು ಬಗೆಯ ಚೈತನ್ಯ ಮೂಡುತ್ತದೆ. ಒಂದು ಹೊಸ ಶಕ್ತಿ ಪ್ರಕಟವಾಗುತ್ತದೆ. ಇದನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಆದರೆ ನಾವು ಅದನ್ನು ಗ್ರಹಿಸುವುದಿಲ್ಲ. ಅದನ್ನು ನಾವು ಒಂದು ಸೂತ್ರದಲ್ಲಿ ಜೋಡಿಸುವುದಿಲ್ಲ. ಇನ್ನು ಮುಂದೆ ನಿಮಗೆ ಯಾವಾಗ ಪ್ರಾಕೃತಿಕ ಸ್ಥಿತಿಯೊಂದಿಗೆ ಸಂಪರ್ಕ ಬರುತ್ತದೆಯೋ ಆಗ ನಿಮ್ಮಲ್ಲಿ ಒಂದು ಹೊಸ ಚೈತನ್ಯ ಪುಟಿಯುತ್ತದೆ. ಹಾಗಾಗಿ ಜೂನ್ 5 ರಂದು ಪ್ರಕೃತಿಯೊಂದಿಗೆ ಸಂಪರ್ಕದ ಜಾಗತಿಕ ಅಭಿಯಾನವನ್ನು ನಮ್ಮ ಸ್ವಂತದ ಅಭಿಯಾನವನ್ನಾಗಿಸಿಕೊಳ್ಳಬೇಕು. ನಮ್ಮ ಪೂರ್ವಜರು ಮಾಡಿದ ಪ್ರಕೃತಿಯ ರಕ್ಷಣೆಯಿಂದ ನಮಗೆ ಲಾಭವಾಗುತ್ತಿದೆ. ನಾವು ರಕ್ಷಿಸಿದರೆ ನಮ್ಮ ಮುಂಬರುವ ಪೀಳಿಗೆಗೆ ಅದರ ಲಾಭ ಸಿಗುತ್ತದೆ. ವೇದಗಳಲ್ಲಿ ಪೃಥ್ವಿ ಮತ್ತು ಪರಿಸರವನ್ನು ಶಕ್ತಿಯ ಮೂಲವೆಂದು ಹೇಳಲಾಗಿದೆ. ನಮ್ಮ ವೇದಗಳಲ್ಲಿ ಇದರ ವರ್ಣನೆಯೂ ಲಭ್ಯ. ಅಥರ್ವ ವೇದವಂತೂ ಸಂಪೂರ್ಣವಾಗಿ ಪರಿಸರದ ಮಾರ್ಗಸೂಚಿ ಗ್ರಂಥವಾಗಿದೆ ಮತ್ತು ಸಾವಿರಾರು ವರ್ಷಗಳಿಗೆ ಮೊದಲೇ ಬರೆಯಲಾಗಿದೆ.

ಈ ಮಧ್ಯೆ ನನಗೆ ರಾಜ್ಯಗಳಿಂದ ಸುದ್ದಿ ಬರುತ್ತಿರುತ್ತವೆ. ಹೆಚ್ಚು ಕಡಿಮೆ ಎಲ್ಲ ರಾಜ್ಯಗಳಲ್ಲೂ ಮಳೆಗಾಲ ಆರಂಭವಾಗುತ್ತಿದ್ದಂತೆ ಗಿಡ ನೆಡುವ ಬಹು ದೊಡ್ಡ ಆಂದೋಲನವೇ ಆರಂಭವಾಗುತ್ತದೆ. ಕೋಟಿಗಟ್ಟಲೆ ಸಸಿಗಳನ್ನು ನೆಡಲಾಗುತ್ತದೆ. ಶಾಲೆಯ ಮಕ್ಕಳನ್ನೂ ಇದಕ್ಕಾಗಿ ಒಗ್ಗೂಡಿಸಲಾಗುತ್ತದೆ. ಸಮಾಜ ಸೇವಾ ಸಂಘಟನೆಗಳು, ಎನ್‌ಜಿಓಗಳು ಒಗ್ಗೂಡುತ್ತವೆ,

ಸರ್ಕಾರ ಸ್ವತಃ ಮುಂದಡಿಯಿಡುತ್ತಿದೆ. ನಾವು ಕೂಡ ಈ ಮಳೆಗಾಲದಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕೆ ನಮ್ಮ ಕೈ ಜೋಡಿಸೋಣ, ಪ್ರೋತ್ಸಾಹಿಸೋಣ.

ನನ್ನ ಪ್ರಿಯ ದೇಶಬಾಂಧವರೇ, ಜೂನ್ 21 – ಈಗ ವಿಶ್ವಕ್ಕೆ ಅತ್ಯಂತ ಚಿರಪರಿಚಿತ ದಿನವಾಗಿದೆ. ವಿಶ್ವ ಯೋಗ ದಿನವೆಂದು ಸಂಪೂರ್ಣ ವಿಶ್ವವೇ ಆಚರಿಸುತ್ತಿದೆ. ಬಹಳ ಕಡಿಮೆ ಸಮಯದಲ್ಲಿ ಜೂನ್ 21 ವಿಶ್ವ ಯೋಗ ದಿನವಾಗಿ ವಿಶ್ವದ ಮೂಲೆ ಮೂಲೆಗೂ ಹಬ್ಬಿದೆ. ಜನರನ್ನು ಒಗ್ಗೂಡಿಸುತ್ತಿದೆ. ಒಂದೆಡೆ ವಿಶ್ವದಲ್ಲಿ ವಿಭಿದ್ರಕಾರಿ ಶಕ್ತಿಗಳು ತಮ್ಮ ವಿಕೃತ ಮುಖ ತೋರುತ್ತಿರುವಂಥ ಈ ಸಮಯದಲ್ಲಿ ವಿಶ್ವಕ್ಕೆ ಭಾರತ ಒಂದು ಅದ್ಭುತ ಕೊಡುಗೆ ನೀಡಿದೆ. ಯೋಗದ ಮೂಲಕ ವಿಶ್ವವನ್ನು ಒಂದೇ ಸೂತ್ರದಲ್ಲಿ ನಾವು ಜೋಡಿಸಿದ್ದೇವೆ. ಹೇಗೆ ಯೋಗ, ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮವನ್ನು ಜೋಡಿಸುತ್ತದೆಯೋ ಹಾಗೆಯೇ ಯೋಗ ವಿಶ್ವವನ್ನು ಒಗ್ಗೂಡಿಸುತ್ತಿದೆ. ಇಂದಿನ ಜೀವನಶೈಲಿಯಿಂದಾಗಿ, ಧಾವಂತದಿಂದಾಗಿ, ಹೆಚ್ಚುತ್ತಿರುವ ಜವಾಬ್ದಾರಿಗಳಿಂದಾಗಿ ಒತ್ತಡರಹಿತ ಜೀವನ ಕಠಿಣವಾಗಿದೆ. ಚಿಕ್ಕ ಚಿಕ್ಕ ವಯಸ್ಸಿನಲ್ಲೇ ಕಂಡ ಕಂಡ ಔಷಧಿಗಳನ್ನು ಸೇವಿಸುತ್ತಾ ದಿನ ದೂಡುತ್ತಿರುವಂತಹ ಸ್ಥಿತಿಗೆ ಯುವಜನತೆ ತಲುಪಿರುವುದನ್ನು ನಾವು ನೋಡುತ್ತಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಒತ್ತಡಮುಕ್ತ ಜೀವನ ಸಾಗಿಸಲು ಯೋಗ ದೊಡ್ಡ ಪಾತ್ರ ವಹಿಸುತ್ತಿದೆ. ಯೋಗ, ಆರೋಗ್ಯ ಮತ್ತು ಸದೃಢತೆ ಎರಡನ್ನೂ ಖಚಿತಪಡಿಸುತ್ತದೆ. ಯೋಗ ಎಂಬುದು ಕೇವಲ ವ್ಯಾಯಾಮವಲ್ಲ. ದೈಹಿಕವಾಗಿ, ಮಾನಸಿಕವಾಗಿ, ವಿಚಾರಗಳ ಮೂಲಕ, ಆಚಾರಗಳ ಮೂಲಕ ಸ್ವಸ್ಥತೆಯ ಒಂದು ಆಂತರಿಕ ಯಾತ್ರೆ ಹೇಗೆ ಸಾಗುತ್ತದೆ ಎಂಬುದನ್ನು ಅನುಭವಿಸುವುದಾಗಿದೆ. ಇದು ಯೋಗದಿಂದ ಮಾತ್ರ ಸಾಧ್ಯ. ಇತ್ತೀಚೆಗೆ 2 ದಿನಗಳ ಹಿಂದೆಯಷ್ಟೇ ನಾನು ಯೋಗ ದಿನದ ಕುರಿತು ವಿಶ್ವದ ಎಲ್ಲ ಸರ್ಕಾರಗಳಿಗೆ, ಎಲ್ಲ ನಾಯಕರಿಗೆ ಪತ್ರ ಬರೆದಿದ್ದೇನೆ.

ಕಳೆದ ವರ್ಷ ನಾನು ಯೋಗಕ್ಕೆ ಸಂಬಂಧಿಸಿದ ಕೆಲ ಸ್ಪರ್ಧೆಗಳನ್ನು ಘೋಷಿಸಿದ್ದೆ, ಕೆಲವು ಬಹುಮಾನಗಳನ್ನು ಘೋಷಿಸಿದ್ದೆ. ನಿಧಾನವಾಗಿ ಈ ದಿಕ್ಕಿನಲ್ಲಿ ಕೆಲಸ ಮುಂದುವರೆಯುವುದು. ನನಗೆ ಒಂದು ಸಲಹೆ ಬಂದಿದೆ ಮತ್ತು ಈ ಮೌಲ್ಯಯುಕ್ತ



ಸಲಹೆ ನೀಡಿದವರಿಗೆ ಅಭಿನಂದಿಸುತ್ತೇನೆ. ತುಂಬಾ ಆಸಕ್ತಿಕರ ಸಲಹೆ ನೀಡಿದ್ದಾರೆ. ಅವರು ಹೀಗೆ ಹೇಳಿದ್ದಾರೆ, "ಇದು 3 ನೇ ಅಂತಾರಾಷ್ಟ್ರೀಯ ಯೋಗ ದಿನವಾಗಿದೆ. ನೀವು ಒಂದೇ ಕುಟುಂಬ 3 ತಲೆಮಾರುಗಳು ಈ ಅಂತಾರಾಷ್ಟ್ರೀಯ ಯೋಗ ದಿನದಂದು ಒಟ್ಟಿಗೇ ಯೋಗ ಮಾಡಲಿ ಎಂದು ಮನವಿ ಮಾಡಿ," ಎಂದಿದ್ದಾರೆ. ಅಜ್ಜಿ – ತಾತ ಆಗಿರಲಿ, ಅಮ್ಮ–ಅಪ್ಪ ಆಗಿರಲಿ, ಮಗನೇ ಆಗಲಿ ಮಗಳೇ ಆಗಿರಲಿ 3 ತಲೆಮಾರುಗಳು ಒಟ್ಟಿಗೇ ಯೋಗ ಮಾಡಲಿ ಮತ್ತು ತಮ್ಮ ಛಾಯಾಚಿತ್ರವನ್ನು ಅಪ್‌ಲೋಡ್ ಮಾಡಲಿ. ನಿನ್ನೆ ಇಂದು ನಾಳೆ ಎಂಥ ಅದ್ಭುತ ಸಂಯೋಗವೆಂದರೆ ಯೋಗಕ್ಕೆ ಹೊಸ ಆಯಾಮವೇ ದೊರೆಯುವುದು. ಈ ಸಲಹೆಗಾಗಿ ಧನ್ಯವಾದಗಳು. ನನಗೂ ಅನ್ನಿಸುತ್ತಿದೆ, ಸೆಲ್ಫಿ ವಿತ್ ಡಾಟರ್ ಅಭಿಯಾನದಲ್ಲಿ ಬಹಳ ರೋಚಕ ಅನುಭವವಾಗಿತ್ತು. ಈ 3 ತಲೆಮಾರುಗಳು ಒಟ್ಟಿಗೇ ಯೋಗ ಮಾಡುವ ಫೋಟೊ ಕೂಡ ದೇಶ ಮತ್ತು ವಿಶ್ವದಲ್ಲಿ ಕೌತುಕವನ್ನು ಹುಟ್ಟುಹಾಕುತ್ತದೆ. ನೀವು ಕೂಡ ನರೇಂದ್ರ ಮೋದಿ ಆಪ್‌ಗೆ, ಮೈ ಗೌ ಗೆ ಎಲ್ಲೆಲ್ಲಿ 3 ತಲೆಮಾರುಗಳು ಒಟ್ಟಿಗೇ ಯೋಗ ಮಾಡುತ್ತಿವೆಯೋ ಆ ಫೋಟೊಗಳನ್ನು ಕಳುಹಿಸಿ. ನಿನ್ನೆ, ಇಂದು ಮತ್ತು ನಾಳೆಯ ಫೋಟೊ ಇದಾಗಲಿದೆ. ಇದು ಸುವರ್ಣಮಯ ನಾಳೆಗಳನ್ನು ಖಚಿತಪಡಿಸುತ್ತದೆ. ನಾನು ನಿಮ್ಮೆಲ್ಲರನ್ನೂ ಆಮಂತ್ರಿಸುತ್ತೇನೆ. ಅಂತಾರಾಷ್ಟ್ರೀಯ ಯೋಗ ದಿವಸಕ್ಕೆ ಇನ್ನೂ 3 ವಾರಗಳು ಬಾಕಿ ಇವೆ. ಇಂದೇ ಅಭ್ಯಾಸದಲ್ಲಿ ತೊಡಗಿಕೊಳ್ಳಿ. ನಾನು ಜೂನ್ 1 ರಿಂದ ಪ್ರತಿದಿನ ಟ್ವಿಟರ್‌ನಲ್ಲಿ ಯೋಗಕ್ಕೆ ಸಂಬಂಧಿಸಿದ ಏನಾದರೂ ವಿಷಯ ಪೋಸ್ಟ್ ಮಾಡುತ್ತಿರುತ್ತೇನೆ ಮತ್ತು ನಿರಂತರವಾಗಿ ಜೂನ್ 21 ರವರೆಗೆ ಮಾಡುತ್ತಲೇ ಇರುತ್ತೇನೆ. ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ನೀವೂ 3 ವಾರ ಯೋಗವನ್ನು ಪ್ರಚಾರ ಮಾಡಿ. ಪ್ರಸಾರ ಮಾಡಿ, ಜನರನ್ನು ಒಗ್ಗೂಡಿಸಿ, ಒಂದು ರೀತಿ ಇದು ಪ್ರಿವೆಂಟಿವ್ ಹೆಲ್ತ್ ಕೇರ್ ಆಂದೋಲನವಾಗಿದೆ. ಇದರಲ್ಲಿ ಭಾಗವಹಿಸಲು ಎಲ್ಲರನ್ನೂ ಆಮಂತ್ರಿಸುತ್ತಿದ್ದೇನೆ.

ನೀವು ನನಗೆ ಪ್ರಧಾನ ಸೇವಕನ ರೂಪದಲ್ಲಿ ಕಾರ್ಯನಿರ್ವಹಿಸಲು ಜವಾಬ್ದಾರಿ ಕೊಟ್ಟ ನಂತರ ಕೆಂಪು ಕೋಟೆ ಮೇಲಿಂದ ನಾನು ಆಗಸ್ಟ್ 15 ರಂದು ಮೊದಲ ಬಾರಿಗೆ ಮಾತಾಡುವ ಅವಕಾಶ ಸಿಕ್ಕಿತ್ತು. ಸ್ವಚ್ಛತೆ ಕುರಿತು ನಾನು ಮಾತಾಡಿದ್ದೆ. ಅಂದಿನಿಂದ ಇಲ್ಲಿವರೆಗೆ ನಾನು ಭಾರತದ ಮೂಲೆ ಮೂಲೆಗೆ ಪ್ರವಾಸ ಮಾಡುತ್ತಿದ್ದೇನೆ. ಕೆಲವರು ಮೋದಿ ಏನು ಮಾಡುತ್ತಾರೆ? ಮೋದಿ ಎಲ್ಲಿಗೆ ಹೋಗುತ್ತಾರೆ? ಮೋದಿಯವರು ಏನೇನು ಮಾಡಿದರು ಎಂಬುದರ ಬಗ್ಗೆ ಸರಿಯಾದ ಮಾಹಿತಿ ಇಡುತ್ತಾರೆ ಎಂಬುದನ್ನು ಗಮನಿಸಿದ್ದೇನೆ. ಏಕೆಂದರೆ ನನಗೆ ಒಂದು ಆಸಕ್ತಿಕರವಾದ ಫೋನ್ ಕಾಲ್ ಬಂತು. ನಾನೂ ಕೂಡಾ ಈ ನಿಟ್ಟಿನಲ್ಲಿ ಯೋಚಿಸಿರಲಿಕ್ಕಿಲ್ಲ. ಅವರು ಈ ವಿಷಯದ ಮೇಲೆ ಬೆಳಕು ಚೆಲ್ಲಿದ್ದಕ್ಕೆ ನಾನು ಆಭಾರಿಯಾಗಿದ್ದೇನೆ. ಈ ಫೋನ್ ಕಾಲ್ ನಿಂದ ನಿಮಗೂ ತಿಳಿಯುತ್ತದೆ.

'ನಮಸ್ಕಾರ ಮೋದಿ ಅವರೇ, ನಾನು ನೈನಾ ಮುಂಬೈಯಿಂದ ಮಾತಾಡುತ್ತಿರುವೆ. ಮೋದಿ ಅವರೇ ನೀವು ಎಲ್ಲೆಲ್ಲಿ ಹೋಗುವಿರೋ ಅಲ್ಲೆಲ್ಲ ಜನರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ ಎಂಬುದನ್ನು ನಾನು ಟಿ ವಿ ಯಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸಿದ್ದೇನೆ. ಮುಂಬೈ ಯಾಗಿರಲಿ ಇಲ್ಲವೆ ಸೂರತ್ ಆಗಿರಲಿ ನಿಮ್ಮ ಆಗಮನದಿಂದ ಜನರು ಸಾಮೂಹಿಕವಾಗಿ ಸ್ವಚ್ಛತೆಯನ್ನು ಒಂದು ಆಂದೋಲನದ ರೂಪದಲ್ಲಿ ತಮ್ಮದಾಗಿಸಿಕೊಂಡಿದ್ದಾರೆ. ದೊಡ್ಡವರ ಜೊತೆಗೆ ಮಕ್ಕಳಲ್ಲೂ ಸ್ವಚ್ಛತೆ ಬಗ್ಗೆ ಅರಿವು ಮೂಡಿದೆ. ಎಷ್ಟೋ ಸಾರಿ ದೊಡ್ಡವರು ರಸ್ತೆ ಮೇಲೆ ಕಸ ಹಾಕುತ್ತಿರುವಾಗ ಮಕ್ಕಳು ಆಕ್ಷೇಪಿಸುವುದನ್ನು ಕಂಡಿದ್ದೇವೆ. ಕಾಶಿ ಘಟ್ಟದಲ್ಲಿ ನೀವು ಸ್ವಚ್ಛತೆಯ ಆರಂಭಕ್ಕೆ ಏನು ಮುನ್ನುಡಿ ಬರೆದಿದ್ದಿರೋ ಅದೇ ಈಗ ನಿಮ್ಮ ಪ್ರೇರಣೆಯಿಂದಾಗಿ ಅಭಿಯಾನದ ರೂಪ ಪಡೆದಿದೆ.

ನಿಮ್ಮ ಮಾತು ನಿಜ. ನಾನು ಎಲ್ಲೆಲ್ಲಿ ಹೋಗುತ್ತೇನೆಯೋ ಅಲ್ಲೆಲ್ಲಾ ಸರ್ಕಾರಿ ವರ್ಗದವರು ಸ್ವಚ್ಛತೆ ಕೈಗೊಳ್ಳುತ್ತಾರೆ, ಜೊತೆಗೆ ಈ ಮಧ್ಯೆ ಸಮಾಜದಲ್ಲೂ ಸ್ವಚ್ಛತೆಯ ಒಂದು ಉತ್ಸವ ನಿರ್ಮಾಣಗೊಳ್ಳುತ್ತದೆ. ನಾನು ಹೋಗುವ 5 ದಿನಗಳಿಗೂ ಮೊದಲು, 7 ದಿನಗಳಿಗೂ ಮೊದಲು, 10 ದಿನಗಳಿಗೆ ಮುಂಚೆ ಹೆಚ್ಚಿನ ಪ್ರಮಾಣದಲ್ಲಿ ಸ್ವಚ್ಛತೆ ಕಾರ್ಯಕ್ರಮಗಳು ನಡೆಯುತ್ತವೆ. ಮಾಧ್ಯಮ ಕೂಡಾ ಅದಕ್ಕೆ ವಿಶೇಷ ಪ್ರಾಧಾನ್ಯತೆಯನ್ನು ನೀಡುತ್ತದೆ. ಇತ್ತೀಚೆಗೆ ಕೆಲ ದಿನಗಳ ಹಿಂದೆ ನಾನು ಗುಜರಾತ್‌ನ ಕಚ್‌ಗೆ ಹೋಗಿದ್ದೆ. ಅಲ್ಲಿ ತುಂಬಾ ದೊಡ್ಡ ಸ್ವಚ್ಛತಾ ಅಭಿಯಾನ ನಡೆಯಿತು. ನಾನು ಇದನ್ನು ಸಮಗ್ರವಾಗಿ ಗಮನಿಸಿರಲಿಲ್ಲ. ನನಗೆ ಒಬ್ಬರು ಸಲಹೆ ನೀಡಿದ್ದಾರೆ. ಅದೊಂಥರ ತುಂಬಾ ತಮಾಷೆಯ ಸಲಹೆಯಾಗಿದೆ. ನನಗೆ ಗೊತ್ತಿಲ್ಲ, ನಾನು ಅದನ್ನು ಮಾಡಬಲ್ಲೆನೋ ಇಲ್ಲವೋ ಗೊತ್ತಿಲ್ಲ. 'ಮೋದಿ ಅವರೇ ನೀವು ಪ್ರವಾಸ ಕೈಗೊಳ್ಳುವಾಗ ಯಾರೇ ನಿಮ್ಮನ್ನು ಆಹ್ವಾನಿಸಿದರೂ ಅವರಿಗೆ ನೀವು ನನ್ನನ್ನು ಆಹ್ವಾನಿಸುವುದಾದರೆ ಸ್ವಚ್ಛತೆಯ ಮಟ್ಟ ಹೇಗಿರುತ್ತದೆ? ನನಗೆ ನೀವು ಎಷ್ಟು ಟನ್ ಕಸ ಕೊಡುಗೆಯಾಗಿ ಕೊಡುತ್ತೀರಿ, ಅದನ್ನಾಧರಿಸಿ ನಾನು ನನ್ನ ಪ್ರವಾಸ ನಿರ್ಧರಿಸುವೆ ಎಂದು ಹೇಳಿ ಎಂದಿದ್ದಾರೆ. ಉಪಾಯ ತುಂಬಾ ಚೆನ್ನಾಗಿದೆ ಆದರೆ ಈ ಬಗ್ಗೆ ನಾನು ಯೋಚಿಸಬೇಕು. ಆಂದೋಲನ ಹುಟ್ಟುಹಾಕಬೇಕು ಎಂಬ ಮಾತು ಸೂಕ್ತವಾಗಿದೆ. ಕೊಡುಗೆ, ಉಡುಗೊರೆ ಕೊಡುವ ಬದಲಾಗಿ ನಾವು ಇಷ್ಟು ಟನ್ ಕಸವನ್ನು ಸ್ವಚ್ಛ ಮಾಡಿದರೆ ಅದೇ ದೊಡ್ಡ ಉಡುಗೊರೆ ಅಲ್ವೇ. ಎಷ್ಟೊಂದು ಜನರನ್ನು ಅನಾರೋಗ್ಯದಿಂದ ರಕ್ಷಿಸಬಹುದು. ಇದು ಎಷ್ಟು ದೊಡ್ಡ ಮಾನವತೆಯ ಕೆಲಸವಾಗುತ್ತದೆ. ಈ ಕಸ ಕಡ್ಡಿಯನ್ನು ನಾವು ವೇಸ್ಟ್ ಎಂದುಕೊಳ್ಳಲೇಬಾರದು. ಅದು ವೆಲ್ತ್ ಆಗಿದೆ ಮತ್ತು ಒಂದು ಸಂಪನ್ಮೂಲವಾಗಿದೆ. ಇದನ್ನು ಕೇವಲ ಕಸದ ರೂಪದಲ್ಲಿ ನೋಡಬೇಡಿ. ಈ ಕಸ ಕಡ್ಡಿಯನ್ನು ನಾವು ವೆಲ್ತ್ ಎಂದು ಪರಿಗಣಿಸಲಾರಂಭಿಸಿದರೆ ವೇಸ್ಟ್ ಮ್ಯಾನೇಜ್‌ಮೆಂಟ್‌ನ ಎಷ್ಟೋ ಹೊಸ ಹೊಸ ಮಾರ್ಗಗಳು ನಮ್ಮ ಮುಂದೆ ತೆರೆದುಕೊಳ್ಳುತ್ತವೆ. ಸ್ಟಾರ್ಟ್ ಅಪ್‌ನೊಂದಿಗೆ ಕೈ ಜೋಡಿಸಿದ ಯುವ ಜನತೆ ಕೂಡಾ ಹೊಸ ಹೊಸ ಯೋಜನೆಗಳೊಂದಿಗೆ, ಹೊಸ ಸಾಧನಗಳೊಂದಿಗೆ ಮುಂದೆ ಬರುತ್ತಾರೆ.



ಭಾರತ ಸರ್ಕಾರ, ರಾಜ್ಯ ಸರ್ಕಾರದ ನೆರವಿನಿಂದ, ನಗರದ ಜನಪ್ರತಿನಿಧಿಗಳ ಸಹಾಯದಿಂದ ವೇಸ್ಟ್ ಮ್ಯಾನೇಜ್‌ಮೆಂಟ್‌ನ ಒಂದು ದೊಡ್ಡ ಮಹತ್ವ ಪೂರ್ಣ ಅಭಿಯಾನವನ್ನು ಆರಂಭಿಸಲು ನಿರ್ಧರಿಸಿದೆ. ಜೂನ್ 5, ವಿಶ್ವ ಪರಿಸರ ದಿನದಂದು ದೇಶದ ಸುಮಾರು 4 ಸಾವಿರ ನಗರಗಳಲ್ಲಿ ಹಸಿ ಕಸ ಹಾಗೂ ಒಣ ಕಸ ಸಂಗ್ರಹಿಸಲು ಆ ರೀತಿಯ ಸಾಧನಗಳು ಲಭ್ಯವಾಗಲಿವೆ. 2 ಬಗೆಯ ಕಸದ ಬುಟ್ಟಿಗಳು ಲಭ್ಯವಾಗಲಿವೆ. ಒಂದು ಹಸಿರು ಬಣ್ಣದ್ದು ಇನ್ನೊಂದು ನೀಲಿ ಬಣ್ಣದ್ದು. ಎರಡು ಪ್ರಕಾರದ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಒಂದು ಹಸಿ ಕಸ ಮತ್ತೊಂದು ಒಣ ಕಸ. ಕಸದ ಬುಟ್ಟಿಗಳನ್ನು ಇಡುತ್ತಿರುವ ನಾಲ್ಕು ಸಾವಿರ ನಗರಗಳಲ್ಲಿ ನಾವು ಶಿಸ್ತು ಪಾಲಿಸಿದರೆ? ಒಣ ಕಸವನ್ನು ನೀಲಿ ಬುಟ್ಟಿಯಲ್ಲಿ, ಹಸಿ ಕಸವನ್ನು ಹಸಿರು ಬುಟ್ಟಿಯಲ್ಲಿ ಹಾಕಿ. ಉದಾಹರಣೆಗೆ ಅಡುಗೆ ಮನೆಯ ತ್ಯಾಜ್ಯ, ಸೊಪ್ಪು ತರಕಾರಿ, ಉಳಿದ ಆಹಾರ, ಮೊಟ್ಟೆಯ ಸಿಪ್ಪೆ, ಮರಗಿಡಗಳ ಎಲೆಗಳು ಇವೆಲ್ಲ ಹಸಿ ಕಸವಾಗಿವೆ ಮತ್ತು ಇವನ್ನು ಹಸಿರು ಬುಟ್ಟಿಯಲ್ಲಿ ಹಾಕಿ. ಇವೆಲ್ಲವೂ ಹೊಲಗದ್ದೆಗಳಲ್ಲಿ ಉಪಯುಕ್ತವಾಗುತ್ತವೆ. ಗದ್ದೆಯ ಬಣ್ಣ ಹಸಿರು ಎಂದು ನೆನಪಿಟ್ಟರೆ ಸಾಕು ಹಸಿರು ಬುಟ್ಟಿಯಲ್ಲಿ ಯಾವ ಕಸ ಹಾಕಬೇಕು ಎಂಬುದು ನಿಮಗೆ ನೆನಪಿನಲ್ಲಿ ಉಳಿಯುತ್ತದೆ. ಇನ್ನೊಂದು ಬಗೆಯ ಕಸ ಅಂದರೆ ರದ್ದಿ ಕಾಗದ, ರಟ್ಟು, ಲೋಹ, ಗಾಜು, ಬಟ್ಟೆ, ಪ್ಲಾಸ್ಟಿಕ್, ಪಾಲಿಥಿನ್, ಮುರಿದ ಡಬ್ಬಿಗಳು, ರಬ್ಬರ್, ಲೋಹಗಳು, ಎಷ್ಟೋ ವಸ್ತುಗಳಿರಬಹುದು ಇವೆಲ್ಲ ಒಣ ಕಸಗಳಾಗಿವೆ. ಇವನ್ನು ಮೆಶೀನ್‌ನಲ್ಲಿ ಹಾಕಿ ರಿಸೈಕಲ್ ಮಾಡಬೇಕಾಗುತ್ತದೆ. ಯಾವುದು ಮರುಬಳಕೆ ಮಾಡಲಾಗದೋ ಅವನ್ನು ನೀಲಿ ಬುಟ್ಟಿಯಲ್ಲಿ ಹಾಕಬೇಕಾಗುತ್ತದೆ. ನಾವು ಒಂದು ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುತ್ತೇವೆಂಬ ವಿಶ್ವಾಸ ನನಗಿದೆ. ಸ್ವಚ್ಛತೆ ಕುರಿತು ಪ್ರತಿ ಬಾರಿಯೂ ನಮಗೆ ಹೊಸ ಹೆಜ್ಜೆ ಇಡುತ್ತಾ ಸಾಗಬೇಕಿದೆ. ಆಗ ಮಾತ್ರ ನಾವು ಗಾಂಧೀಜಿಯವರ ಸ್ವಚ್ಛತೆಯ ಕನಸನ್ನು ನನಸುಗೊಳಿಸಬಹುದು. ಇಂದು ನಾನು ಹೆಮ್ಮೆಯಿಂದ ಒಂದು ವಿಷಯ ಪ್ರಸ್ತಾಪಿಸಬಯಸುವೆ. ಒಬ್ಬ ವ್ಯಕ್ತಿಯೇ ನಿರ್ಧರಿಸಿದರೂ ಸಹ ಎಷ್ಟು ದೊಡ್ಡ ಜನಾಂದೋಲನ ಹುಟ್ಟು ಹಾಕಬಹುದು. ಸ್ವಚ್ಛತೆಯ ಕೆಲಸವೂ ಹೀಗೇ ಇದೆ. ಕೆಲ ದಿನಗಳ ಹಿಂದೆ ನಿಮಗೆ ಒಂದು ಸುದ್ದಿ ಕೇಳಿಬಂದಿರಬಹುದು. ಮುಂಬೈಯಲ್ಲೇ ಕೊಳಕು ಎಂದು ಪರಿಗಣಿಸಲಾದ ವರ್ಸೊವ ಬೀಚ್ ಇಂದು ಒಂದು ಸ್ವಚ್ಛ ಸುಂದರ ವರ್ಸೊವ ಬೀಚ್ ಆಗಿ ಪರಿವರ್ತನೆಗೊಂಡಿದೆ. ಇದು ಒಮ್ಮಿಂದೊಮ್ಮೆಲೇ ಆಗಿಲ್ಲ. ಸುಮಾರು 80–90 ವಾರಗಳವರೆಗೆ ಇಲ್ಲಿಯ ನಾಗರಿಕರು ಸತತವಾಗಿ ಶ್ರಮಿಸಿ ವರ್ಸೊವ ಬೀಚ್‌ನ ರೂಪವನ್ನೇ ಬದಲಿಸಿದ್ದಾರೆ. ಸಾವಿರಾರು ಟನ್ ಕಸವನ್ನು ಹೊರತೆಗೆದ ನಂತರ ವರ್ಸೊವ ಬೀಚ್ ಸ್ವಚ್ಛ ಮತ್ತು ಸುಂದರವಾಯಿತು. ಇದರ ಜವಾಬ್ದಾರಿಯನ್ನು ವರ್ಸೊ ಪ್ರದೇಶದ ಸ್ವಯಂ ಸೇವಕರು ಹೊತ್ತುಕೊಂಡಿದ್ದರು. ಶ್ರೀಯುತ ಅಫರೋಜ್ ಶಾ ಎಂಬ ಸಜ್ಜನ 2015 ರ ಅಕ್ಟೋಬರ್‌ನಲ್ಲಿ ತನುಮನದಿಂದ ಈ ಕಾರ್ಯದಲ್ಲಿ ತೊಡಗಿಸಿಕೊಂಡರು. ನಿಧಾನವಾಗಿ ಈ ಸಮರ ಬೆಳೆಯುತ್ತಾ ಸಾಗಿ ಜನಾಂದೋಲನವಾಗಿ ಪರಿವರ್ತನೆಗೊಂಡಿತು.

ಈ ಕೆಲಸಕ್ಕಾಗಿ ಶ್ರೀಯುತ ಅಫರೋಜ್ ಶಾ ಅವರಿಗೆ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದಡಿ ಬಹುದೊಡ್ಡ ಪ್ರಶಸ್ತಿ ನೀಡಲಾಗಿದೆ. ಈ ಮೂಲಕ ಚಾಂಪಿಯನ್ಸ್ ಆಫ್‌ದ ಅರ್ಥ ಪುರಸ್ಕಾರ ಪಡೆದ ಮೊದಲ ಭಾರತೀಯರಾಗಿದ್ದಾರೆ. ನಾನು ಶ್ರೀಯುತ ಅಫರೋಜ್ ಶಾ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಆಂದೋಲನಕ್ಕೆ ಅಭಿನಂದಿಸುತ್ತೇನೆ. ಹೇಗೆ ಅವರು ಎಲ್ಲ ಪ್ರದೇಶಗಳ ಜನರನ್ನು ಒಗ್ಗೂಡಿಸಿದರು ಮತ್ತು ಇದನ್ನು ಜನಾಂದೋಲನವಾಗಿ ಪರಿವರ್ತಿಸಿದರು, ಎಂಬುದು ಪ್ರೇರಣಾದಾಯಕ ಉದಾಹರಣೆಯಾಗಿದೆ.

ನನ್ನ ಸೋದರ, ಸೋದರಿಯರೇ, ನಾನಿಂದು ಮತ್ತೊಂದು ಸಂತೋಷವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ಸ್ವಚ್ಛ ಭಾರತದ ಅಭಿಯಾನದ ಸಂದರ್ಭದಲ್ಲಿ ಜಮ್ಮು–ಕಾಶ್ಮೀರದ ರಿಯಾಸಿ ಬ್ಲಾಕ್‌ಅನ್ನು ಬಯಲು ಶೌಚದಿಂದ ಮುಕ್ತವಾಗಿದೆಯೆಂದು

ನನಗೆ ತಿಳಿಸಲಾಗಿದೆ. ನಾನು ರಿಯಾಸಿ ಬ್ಲಾಕ್‌ನ ಎಲ್ಲ ನಾಗರಿಕರಿಗೂ, ಅಲ್ಲಿನ ಆಡಳಿತ ವರ್ಗಕ್ಕೂ, ಜಮ್ಮು-ಕಾಶ್ಮೀರ ಒಂದು ಉತ್ತಮ ಉದಾಹರಣೆ ನೀಡಿದೆ. ಇದಕ್ಕಾಗಿ ನಾನು ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇನೆ.

ಹಾಗೆಯೇ, ಈ ಪೂರ್ಣ ಚಳವಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ನೇತೃತ್ವ ವಹಿಸಿದ್ದು, ಜಮ್ಮು-ಕಾಶ್ಮೀರದ ಈ ಪ್ರಾಂತ್ಯದ ಮಹಿಳೆಯರು. ಅವರು ಈ ಕುರಿತು ಅರಿವು ಹೆಚ್ಚಿಸಲು, ಸ್ವತಃ ಜ್ಯೋತಿ ಯಾತ್ರೆಗಳನ್ನು ಕೈ ಗೊಂಡಿದ್ದಾರೆ. ಮನೆ-ಮನೆ, ಬೀದಿ-ಬೀದಿಗೂ ಹೋಗಿ ಜನರಿಗೆ ಸ್ಫೂರ್ತಿ ತುಂಬಿದ್ದಾರೆ. ಆ ತಾಯಂದಿರಿಗೆ ಮತ್ತು ಸಹೋದರಿಯರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಜಮ್ಮು-ಕಾಶ್ಮೀರದ ನೆಲದ ಮೇಲೆ, ಒಂದು ಬ್ಲಾಕನ್ನು ಬಯಲು ಬಹಿರ್ದೆಸೆ ಮುಕ್ತ ಮಾಡಿದ್ದಾರೆ, ಈ ರೀತಿಯ ಉತ್ತಮ ಆರಂಭಕ್ಕಾಗಿ, ಅಲ್ಲಿನ ಎಲ್ಲ ಆಡಳಿತಗಾರರನ್ನು ನಾನು ಅಭಿನಂದಿಸುತ್ತೇನೆ.

ನನ್ನ ಪ್ರಿಯ ದೇಶವಾಸಿಗಳೇ, ಕಳೆದ ಹದಿನೈದು ದಿನಗಳು, ಒಂದು ತಿಂಗಳಿನಿಂದ ಎಡೆಬಿಡದೆ, ದಿನ ಪತ್ರಿಕೆಗಳಲ್ಲಿ, ಟಿವಿ ಚಾನೆಲ್‌ಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಪ್ರಸ್ತುತ ಸರ್ಕಾರದ 3 ವರ್ಷಗಳ ಕುರಿತು ಅವಲೋಕನ ನಡೆದಿದೆ. 3 ವರ್ಷಗಳ ಹಿಂದೆ ನೀವು ನನಗೆ ಪ್ರಧಾನ ಸೇವಕನ ಹೊಣೆಗಾರಿಕೆಯನ್ನು ನೀಡಿದ್ದಿರಿ. ಸಾಕಷ್ಟು ಸಮೀಕ್ಷೆಗಳು ನಡೆದಿವೆ, ಸಾಕಷ್ಟು ಅಭಿಪ್ರಾಯಗಳೂ ಬಂದಿವೆ. ನಾನು ಈ ಎಲ್ಲ ಪ್ರಕ್ರಿಯೆಗಳನ್ನು ಒಂದು ಆರೋಗ್ಯಪೂರ್ಣ ಸಂಕೇತದ ರೂಪದಲ್ಲಿ ನೋಡುತ್ತೇನೆ. ಪ್ರತಿಯೊಂದು ಪರೀಕ್ಷೆಯಲ್ಲೂ, ಈ 3 ವರ್ಷದ ಕಾರ್ಯಾಲಯವನ್ನು ಪರೀಕ್ಷಿಸಲಾಗಿದೆ. ಸಮಾಜದ ಪ್ರತಿಯೊಂದು ವಿಭಾಗವನ್ನೂ ಜನರು ವಿಶ್ಲೇಷಣೆ ಮಾಡಿದ್ದಾರೆ. ಮತ್ತು ಗಣತಂತ್ರದಲ್ಲಿ ಒಂದು ಉತ್ತಮ ಪ್ರತಿಕ್ರಿಯೆ ಬಂದಿದೆ. ಗಣತಂತ್ರದಲ್ಲಿ ಸರ್ಕಾರಗಳಿಗೆ ಉತ್ತರಿಸಬೇಕಾದ ದಾಯಿತ್ವ ಇರಬೇಕೆಂದು ನನ್ನ ಸ್ಪಷ್ಟ ನಂಬಿಕೆಯಾಗಿದೆ. ಜನತಾ-ಜನಾರ್ದನನಿಗೆ ನಮ್ಮ ಕೆಲಸದ ಲೆಕ್ಕಾಚಾರ ಒಪ್ಪಿಸಬೇಕು. ತಮ್ಮ ಸಮಯವನ್ನು ಮೀಸಲಿಟ್ಟು, ನಮ್ಮ ಕೆಲಸಗಳ ಬಗ್ಗೆ ಆಳವಾದ ವಿಶ್ಲೇಷಣೆ ಮಾಡಿದವರೆಲ್ಲರಿಗೂ ನನ್ನ ಧನ್ಯವಾದಗಳು, ಕೆಲವು ಪ್ರಶಂಸೆಗಳು ಬಂದವು, ಕೆಲ ಸಮರ್ಥನೆಗಳು



ಬಂದವು, ಹಲವಾರು ನ್ಯೂನತೆಗಳನ್ನು ಹೊರತೆಗೆಯಲಾಯಿತು, ನಾನು ಈ ಎಲ್ಲ ವಿಚಾರಗಳೂ ಬಹಳ ಮಹತ್ವ ವಾದವೆಂದು ನಂಬುತ್ತೇನೆ. ಕ್ಲಿಷ್ಟವಾದ ಮತ್ತು ಮುಖ್ಯವಾದ ಪ್ರತಿಕ್ರಿಯೆ ನೀಡಿದಂಥ ಜನರೆಲ್ಲರಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದ್ದಂತಹ ದೋಷಗಳು, ಕೊರತೆಗಳನ್ನು ತೆರೆದಿಟ್ಟಾಗ, ಅವುಗಳಿಂದಲೂ ಸುಧಾರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಅದು ಒಳ್ಳೆಯದಾಗಿರಲಿ, ಕಡಿಮೆ ಒಳ್ಳೆಯದಾಗಿರಲಿ, ಕೆಟ್ಟದ್ದಾಗಿರಲಿ, ಏನೇ ಆಗಿರಲಿ, ಅದರಿಂದಲೇ ಕಲಿಯಬೇಕು ಮತ್ತು ಅದರ ಆಸರೆಯಿಂದಲೇ ಮುಂದುವರೆಯಬೇಕು ರಚನಾತ್ಮಕ ಟೀಕೆ ಗಣತಂತ್ರಕ್ಕೆ ಶಕ್ತಿ ನೀಡುತ್ತದೆ. ಒಂದು ಜಾಗರೂಕ ರಾಷ್ಟ್ರಕ್ಕಾಗಿ, ಒಂದು ಚೈತನ್ಯ ಪೂರ್ಣ ದೇಶಕ್ಕಾಗಿ, ಈ ಮಂಥನ ಬಹಳ ಅಗತ್ಯವಾಗಿರುತ್ತದೆ.

ನನ್ನ ಪ್ರಿಯ ದೇಶಬಾಂಧವರೆ, ನಾನೂ ನಿಮ್ಮಂತೆ ಒಬ್ಬ ಸಾಮಾನ್ಯ ನಾಗರಿಕ ಮತ್ತು ಒಬ್ಬ ಸಾಮಾನ್ಯ ನಾಗರಿಕನಾಗಿರುವುದರಿಂದ ಒಳ್ಳೇದು ಮತ್ತು ಕೆಟ್ಟದ್ದರ ಪ್ರಭಾವ ನನ್ನ ಮನಸ್ಸಿನ ಮೇಲೆಯೂ ಬೀರುತ್ತದೆ. 'ಮನದಾಳದ ಮಾತು', ಇದನ್ನು ಕೆಲವರು ಸಂವಾದದ ರೂಪದಲ್ಲಿ ನೋಡಿದರೆ ಇನ್ನು ಕೆಲವರು ರಾಜಕೀಯ ದೃಷ್ಟಿಯಿಂದ ನೋಡಿ ಈ ಕುರಿತು ಟಿಪ್ಪಣಿಗಳನ್ನು ಬರೆಯುತ್ತಾರೆ. ಆದರೆ ಇಷ್ಟೊಂದು ಸುದೀರ್ಘ ಅನುಭವದಿಂದ ನನಗೆ ಅನ್ನಿಸಿದೆ, ನಾನು ಮನದಾಳದ ಮಾತು ಆರಂಭಿಸಿದಾಗ ನಾನೂ ಇದರ ಕುರಿತು ಆಲೋಚಿಸಿರಲಿಲ್ಲ. ಮನದಾಳದ ಮಾತು ಕಾರ್ಯಕ್ರಮ ನನ್ನನ್ನು ಹಿಂದೂಸ್ತಾನದ ಪ್ರತಿ ಕುಟುಂಬದ ಒಬ್ಬ ಸದಸ್ಯನನ್ನಾಗಿಸಿದೆ. ನಾನು ಒಂದು ಕುಟುಂಬದವರೊಂದಿಗೆ ಅವರ ಮನೆಯಲ್ಲೇ ಕುಳಿತು ಮಾತನಾಡುವಂತೆ ಭಾಸವಾಗುತ್ತದೆ. ಹೀಗೆ ಇಂಥ ವಿಚಾರಗಳನ್ನು ಬರೆದು ಕಳಿಸಿದ ಸಾವಿರಾರು ಕುಟುಂಬಗಳಿವೆ. ನಾನು ಹೇಳಿದಂತೆ ಒಬ್ಬ ಸಾಮಾನ್ಯ ನಾಗರಿಕನಂತೆ ನನ್ನ ಮನಸ್ಸಿನ ಮೇಲೂ ಪ್ರಭಾವ ಬೀರುತ್ತಿದೆ. 2 ದಿನಗಳ ಹಿಂದೆ ರಾಷ್ಟ್ರಪತಿ ಭವನದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳು, ಸನ್ಮಾನ್ಯ ಉಪ ರಾಷ್ಟ್ರಪತಿಗಳು, ಸನ್ಮಾನ್ಯ ಸ್ಪೀಕರ್ ಅವರು ಕೂಡ ಮನದಾಳದ ಮಾತುಗಳನ್ನಾಡಿದರು ಮತ್ತು ಒಂದು ವಿಶ್ಲೇಷಣಾತ್ಮಕ ಪುಸ್ತಕದ ಕಾರ್ಯಕ್ರಮ ನಡೆಸಿದರು. ಒಬ್ಬ ವ್ಯಕ್ತಿಯ ರೂಪದಲ್ಲಿ, ಸಾಮಾನ್ಯ ನಾಗರಿಕನ ರೂಪದಲ್ಲಿ ಒಂದು ಘಟನೆ ನನ್ನಲ್ಲಿ ಉತ್ಸಾಹವನ್ನು ಹುರಿದುಂಬಿಸುತ್ತದೆ. ಇಂತಹ ಉಚ್ಚ ಪದವಿಯಲ್ಲಿರುವ ರಾಷ್ಟ್ರಪತಿಗಳು, ಉಪ ರಾಷ್ಟ್ರಪತಿಗಳು, ಸ್ಪೀಕರ್ ಅವರು ತಮ್ಮ ಅಮೂಲ್ಯ ಸಮಯ ನೀಡಿ ಮನದಾಳದ ಮಾತಿಗೆ ಪ್ರಾಮುಖ್ಯತೆ ನೀಡಿದ್ದಕ್ಕಾಗಿ ನಾನು ಚಿರಋಣಿಯಾಗಿದ್ದೇನೆ. ಒಂದು ರೀತಿ ನನ್ನಲ್ಲಿ ನಾನೇ ಮನದಾಳದ ಮಾತಿಗೆ ಒಂದು ಹೊಸ ಆಯಾಮವನ್ನು ನೀಡಿದ್ದೇನೆ. ನನ್ನ ಕೆಲ ಮಿತ್ರರು, ಈ ಮನದಾಳದ ಮಾತು ಪುಸ್ತಕ ಕುರಿತು ಕೆಲಸ ಮಾಡುತ್ತಿದ್ದಾಗ ನನ್ನ ಜೊತೆಗೂ ಚರ್ಚೆ ಮಾಡಿದ್ದರು. ಕೆಲ ಸಮಯದ ಹಿಂದೆ ಈ ವಿಷಯ ಚರ್ಚೆಗೆ ಬಂದಾಗ ನಾನು ಚಕಿತನಾದೆ. ಅಬುದಾಬಿಯಲ್ಲಿರುವ ಅಕ್ಬರ್ ಸಾಹಬ್ ಎಂದು ಗುರುತಿಸಲ್ಪಡುವ ಒಬ್ಬ ಕಲಾವಿದರು ಒಂದು ಪ್ರಸ್ತಾವನೆಯನ್ನಿಟ್ಟರು. ಮನದಾಳದ ಮಾತಿನಲ್ಲಿ ಚರ್ಚಿಸಲಾದ ವಿಷಯಗಳ ಕುರಿತು ಅವರ ಕಲೆಯ ಮುಖಾಂತರ ಅವುಗಳ ರೇಖಾ ಚಿತ್ರ ತಯಾರಿಸಿಕೊಡಲು ಬಯಸಿದ್ದಾರೆಂದು ಮತ್ತು ಒಂದು ಪುಡಿಗಾಸೂ ಪಡೆಯದೇ, ಅಕ್ಬರ್ ಸಾಹಬ್‌ರು ಮನದಾಳದ ಮಾತಿಗೆ ಕಲೆಯ ರೂಪವನ್ನು ನೀಡಿದರು. ನಾನು ಅಕ್ಬರ್ ಸಾಹಬ್‌ರಿಗೆ ಕೃತಜ್ಞನಾಗಿದ್ದೇನೆ.

ನನ್ನ ಪ್ರಿಯ ದೇಶಬಾಂಧವರೆ, ನಾವು ಮುಂದಿನ ಬಾರಿ ಭೇಟಿಯಾಗುವ ಹೊತ್ತಿಗೆ, ದೇಶದ ಮೂಲೆ ಮೂಲೆಯಲ್ಲೂ ಮಳೆಯಾಗಿರಬಹುದು, ವಾತಾವರಣ ಬದಲಾಗಿರಬಹುದು, ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿರಬಹುದು, ಹೊಸ ರೀತಿಯಲ್ಲಿ ಕಲಿಕಾ ಜೀವನದ ಪುನರಾರಂಭ ಆಗಿರಬಹುದು ಮತ್ತು ಮಳೆಯಾಗುತ್ತಿದ್ದಂತೆ ಏನೋ ಒಂದು ಹೊಸ ಆಹ್ಲಾದ, ಹೊಸ ಪರಿಮಳ, ಹೊಸ ಸುಗಂಧ... ಬನ್ನಿ ನಾವೆಲ್ಲರೂ ಒಗ್ಗೂಡಿ ಈ ಪರಿಸರದಲ್ಲಿ, ಪ್ರಕೃತಿಯನ್ನು ಪ್ರೀತಿಸುತ್ತಾ ಮುಂದುವರೆಯೋಣ. ನಿಮ್ಮೆಲ್ಲರಿಗೂ ನನ್ನ ಶುಭ ಹಾರೈಕೆಗಳು. ಧನ್ಯವಾದಗಳು. ❑

## ಪೋಷಣೆ ಹಣ ಹೂಡಿಕೆ

ನವೋದ್ಯಮಗಳಲ್ಲಿ ಲಾಭ ನಿರೀಕ್ಷೆ ಇಲ್ಲದೇ ಶ್ರೀಮಂತ ಉದಾರಿಗಳು ಮಾಡುವ ಬಂಡವಾಳ ಹೂಡಿಕೆಯನ್ನು ಸ್ಥೂಲವಾಗಿ ಏಂಜೆಲ್ ಪೋಷಣೆ ಹಣ ಹೂಡಿಕೆ ಎಂದು ಕರೆಯಲಾಗುತ್ತದೆ.

'ಏಂಜೆಲ್' ರಂಗ ವೇದಿಕೆಯಿಂದ ಬಂದ ಪದವಾಗಿದ್ದು ಕಲಾಸಕ್ತ, ಉದಾರಿ ಶ್ರೀಮಂತರು, ನಶಿಸುತ್ತಿದ್ದ ರಂಗಕಲೆ ಉಳಿಸುವ ದೃಷ್ಟಿಯಿಂದ ಕಲಾಕಾರರ ಪೋಷಣೆ ಮೂಲಕ ರಂಗವೇದಿಕೆ ಮುಂದುವರೆಸಲು ಅವಕಾಶ ಕಲ್ಪಿಸಿದ್ದರು. ಪ್ರಸ್ತುತ ಪೋಷಣೆ ಬಂಡವಾಳ ಹೂಡಿಕೆದಾರ ಶ್ರೀಮಂತರು ತಮ್ಮದೇ ಆದ ಜಾಲ ಹೊಂದಿದ್ದು, ಇವು ಪ್ರಾದೇಶಿಕ, ಕೈಗಾರಿಕೆ ಅಥವಾ ಶೈಕ್ಷಣಿಕ ಹಿನ್ನೆಲೆ ಆಧರಿಸಿವೆ.

## ನಿಮಗಿದು ತಿಳಿದಿದೆಯೇ?

ಜಾಗತಿಕವಾಗಿ ನವೋದ್ಯಮಗಳ ಆರಂಭದ ಪಟ್ಟಿಯಲ್ಲಿ ಭಾರತ ಮೊದಲ ಮೂರು ದೇಶಗಳ ಸ್ಥಾನದಲ್ಲಿದೆ. ಮದ್ರಾಸ್‌ನ ಐಐಟಿ, 2015ನ್ನು ಮೂಲ ವರ್ಷವನ್ನಾಗಿ ಇರಿಸಿಕೊಂಡು 2005–15ರ ಅವಧಿಗಾಗಿ ರೂಪಿಸಿರುವ ಸ್ಟಾರ್ಟ್ ಅಪ್‌ಗಳಲ್ಲಿ ವೆಂಚರ್ ಕ್ಯಾಪಿಟಲ್ ಹೂಡಿಕೆ ವರದಿಯಲ್ಲಿ ಈ ಹೂಡಿಕೆ ಸುಮಾರು 1117 ಶತಕೋಟಿ ರೂ. ಗಳೆಂದು ಅಂದಾಜು ಮಾಡಲಾಗಿದೆ. ಅನೇಕ ವಹಿವಾಟುಗಳನ್ನು ಈ ವರದಿ ಪರಿಗಣಿಸಿಲ್ಲ ಎಂಬುದು ಗಮನಿಸಬೇಕಾದ ಅಂಶ. ಈ ಅವಧಿಯಲ್ಲಿ ವಾರ್ಷಿಕ ಬಂಡವಾಳ ಹೂಡಿಕೆ ಬೆಳವಣಿಗೆ ದರ ಶೇ. 42 ರಷ್ಟಿದೆ. 2005–15ರ ಅವಧಿಯಲ್ಲಿ 10,000 ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳು ಪೋಷಣೆ ನಿಧಿ ಪಡೆದಿವೆ. ಈ ಅವಧಿಯಲ್ಲಿ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. 16 ರಷ್ಟಿದೆ. ಪ್ರತಿ ಕ್ಷೇತ್ರದಲ್ಲೂ ವಿದೇಶಿ ಸ್ಟಾರ್ಟ್ ಅಪ್‌ಗಳಿಗೆ ಪ್ರತಿಯಾಗಿ ಭಾರತದ ನವೋದ್ಯಮ ಆರಂಭವಾಗಿದೆ. ಇದಲ್ಲದೇ ಅನೇಕ ವಿದೇಶಿ ಕಂಪನಿಗಳು ಭಾರತದಲ್ಲೂ ಸ್ಟಾರ್ಟ್ ಅಪ್ ಆರಂಭಿಸಿವೆ. ❑

### ಭಾರತ – ಹೊರಹೊಮ್ಮುತ್ತಿರುವ ಶಕ್ತಿಕೇಂದ್ರ

| | |
|---|---|
| ಡಬ್ಲ್ಯು.ಇ.ಎಫ್.ನ ಜಾಗತಿಕ ಸ್ಪರ್ಧಾತ್ಮಕತೆ ಸೂಚ್ಯಂಕ | 39ನೇ ಶ್ರೇಯಾಂಕ ↑ 16 ಸ್ಥಾನ ಏರಿಕೆ |
| ಡಬ್ಲ್ಯು.ಇ.ಎಫ್.ನ ಜಾಗತಿಕ ಪ್ರಯಾಣ ಮತ್ತು ಪ್ರವಾಸೋದ್ಯಮದ ಸ್ಪರ್ಧಾತ್ಮಕತೆ ಪಟ್ಟಿ | 40ನೇ ಶ್ರೇಯಾಂಕ ↑ 12 ಸ್ಥಾನ ಏರಿಕೆ |
| ಜಾಗತಿಕ ಆವಿಷ್ಕಾರ ಸೂಚ್ಯಂಕ 2016 | 66ನೇ ಶ್ರೇಯಾಂಕ ↑ 15 ಸ್ಥಾನ ಏರಿಕೆ |
| ಡಬ್ಲ್ಯು.ಇ.ಎಫ್.ನ ಜಾಗತಿಕ ಲಿಂಗ ಅಂತರ ಸೂಚ್ಯಂಕ | 87ನೇ ಶ್ರೇಯಾಂಕ ↑ 21 ಸ್ಥಾನ ಏರಿಕೆ |
| ವಿಶ್ವಬ್ಯಾಂಕ್‌ನ ಸಾಗಣೆ ನಿರ್ವಹಣೆಯ ಸೂಚ್ಯಂಕ | 35ನೇ ಶ್ರೇಯಾಂಕ ↑ 19 ಸ್ಥಾನ ಏರಿಕೆ |
| ಪಾರದರ್ಶಕ ಅಂತಾರಾಷ್ಟ್ರೀಯದ ಭ್ರಷ್ಟಾಚಾರಗ್ರಹಿಕೆ ಸೂಚ್ಯಂಕ 2016 | ಶ್ರೇಯಾಂಕದ ಉತ್ತಮೀಕರಣ |
| ಎಫ್.ಡಿ.ಐ. ವಿಶ್ವಾಸ ಸೂಚ್ಯಂಕ | 8ನೇ ಶ್ರೇಯಾಂಕ ↑ |

### ಆರ್ಥಿಕತೆಯ ಸುವರ್ಣ ಸೂಚಕಗಳು

- ಹಿಂದೆಂದಿಗಿಂತ ಹೆಚ್ಚು ಎಫ್.ಡಿ.ಐ.
- ವಿತ್ತೀಯ ಕೊರತೆ ನಿಯಂತ್ರಣದಲ್ಲಿ
- 2014ರಲ್ಲಿ ಶೇ.4ರಲ್ಲಿದ್ದ ಸಿ.ಎ.ಡಿ. 2016–17ರ ಏಪ್ರಿಲ್ ನಿಂದ ಡಿಸೆಂಬರ್ ಅವಧಿಯಲ್ಲಿ ಶೇ.0.7ಕ್ಕೆ ಇಳಿಕೆ, ವಿದೇಶೀ ವಿನಿಮಯ ಮೀಸಲಿಗೆ ದಾಖಲೆ ಮಟ್ಟದ ಕೊಡುಗೆ
- ಕಡಿಮೆ ಹಣದುಬ್ಬರ – 2014ರಲ್ಲಿ ಶೇ.11ರಷ್ಟು ಹೆಚ್ಚಾಗಿದ್ದದ್ದು ಶೇ.4ರ ಆಸುಪಾಸಿಗೆ
- ಅತಿ ಹೆಚ್ಚು ಜಿಡಿಪಿ ವೃದ್ಧಿ ದರ (ಶೇ.7.0)
- ರೂಪಾಯಿ ವಿನಿಮಯ ದರ ನಿಯಂತ್ರಣದಲ್ಲಿ



**ಭಾರತ – ವಿಶ್ವದ ಅತ್ಯಂತ ಆಕರ್ಷಕ ಹೂಡಿಕೆಯ ತಾಣ**

**ಸ್ಟ್ಯಾಂಡ್ ಅಪ್ ಇಂಡಿಯಾ, ನವೋದ್ಯಮ, ಮುದ್ರಾ ಇತ್ಯಾದಿ ನಾವಿನ್ಯಪೂರ್ಣ ಯೋಜನೆಗಳ ಮೂಲಕ ಉದ್ಯಮಶೀಲತೆಗೆ ಪ್ರೋತ್ಸಾಹ**

**ಮೇಕ್ ಇನ್ ಇಂಡಿಯಾ – ಜಾಗತಿಕವಾಗಿ ಮೆಚ್ಚುಗೆಗೆ ಪಾತ್ರವಾದ ಬ್ರ್ಯಾಂಡ್**



# ವಾರ್ತಾ ವಿಶೇಷ

ಭಾರತ ಮತ್ತು ಸ್ಪೇನ್ ರಾಷ್ಟ್ರಗಳು ಏಳು ಒಪ್ಪಂದಕ್ಕೆ ಸಹಿ ಹಾಕಿವೆ. ಸೈಬರ್ ಭದ್ರತೆ, ನವೀಕರಿಸಬಹುದಾದ ಇಂಧನ, ನಾಗರಿಕ ವಿಮಾನಯಾನದ ವಿಭಾಗದಲ್ಲಿ ತಾಂತ್ರಿಕ ಸಹಕಾರ, ಅಂಗಾಗ ಕಸಿ ವಲಯದಲ್ಲಿ ಸಹಕಾರ ಮತ್ತು ಶಿಕ್ಷೆಗೊಳಗಾಗಿರುವ ಅಪರಾಧಿಗಳ ಹಸ್ತಾಂತರ ಅಂಶಗಳೂ ಒಡಂಬಡಿಕೆಯಲ್ಲಿ ಸೇರಿವೆ.

* * *

ದೇಶದ ಮೂಲಸೌಕರ್ಯ ರಂಗದ ಪ್ರಮುಖ 8 ಉದ್ದಿಮೆಗಳು ಏಪ್ರಿಲ್ ತಿಂಗಳಲ್ಲಿ ದಾಖಲಿಸಿರುವ ಬೆಳವಣಿಗೆ ದರ 2.5ಕ್ಕೆ ಕುಸಿದಿದೆ. ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಸಂಸ್ಕರಿತ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ರಂಗಗಳನ್ನು ಮೂಲಸೌಕರ್ಯ ವಲಯಗಳೆಂದು ಗುರಿತಿಸಲಾಗಿದ್ದು, ಕಳೆದ ವರ್ಷದ ಏಪ್ರಿಲ್‌ನಲ್ಲಿ ಈ 8 ಉದ್ಯಮಗಳು ಶೇಕಡ 8.7 ರ ಪ್ರಗತಿ ದಾಖಲಿಸಿದ್ದವು.

* * *



**ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2016ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕರ್ನಾಟಕದ ಕುಮಾರಿ ನಂದಿನಿ ಕೆ. ಆರ್. ಪ್ರಥಮ ಸ್ಥಾನ ಗಳಿಸಿದ್ದಾರೆ. ಮೂಲತಃ ಕೋಲಾರ ಜಿಲ್ಲೆಯವರಾದ ಕುಮಾರಿ ನಂದಿನಿ, ಸಿವಿಲ್ ಇಂಜಿನಿಯರ್ ಪದವೀಧರರಾಗಿದ್ದಾರೆ. ಹಿಂದಿನ ಪ್ರಯತ್ನದಲ್ಲಿ ಐಆರ್‌ಎಸ್‌ಗೆ ಆಯ್ಕೆಯಾಗಿದ್ದು ಪ್ರಸ್ತುತ ತರಬೇತಿಯಲ್ಲಿದ್ದಾರೆ.**

* * *

2016–17ನೇ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ದರ ಶೇಕಡ 7.1ರಷ್ಟು ಬೆಳವಣಿಗೆಯಾಗಿದೆ. ಅಧಿಕೃತ ಅಂದಾಜಿನಂತೆ ಒಟ್ಟು ಆಂತರಿಕ ಉತ್ಪನ್ನ ದರ ಏರಿಕೆಯಾಗಿದೆ. ಕೃಷಿ ವಲಯದಲ್ಲಿ ಶೇಕಡ 4.9ರಷ್ಟು ಪ್ರಗತಿಯಾಗಿದೆ. 2015–16ನೇ ಸಾಲಿಗೆ ಹೋಲಿಸಿದರೆ ಈ ಪ್ರಗತಿ ಶೇಕಡ 0.7ರಷ್ಟು ಹೆಚ್ಚಾಗಿದೆ.

2016–17ನೇ ಸಾಲಿನ 4ನೇ ತ್ರೈಮಾಸಿಕದಲ್ಲಿ ಜಿಡಿಪಿ ಶೇಕಡ 6.1ರಷ್ಟು ಪ್ರಗತಿ ಕಂಡಿದೆ ಎಂದು ಕೇಂದ್ರ ಸಾಂಖ್ಯಿಕ ಇಲಾಖೆ ಬಿಡುಗಡೆ ಮಾಡಿರುವ ಅಂಕಿ ಅಂಶಗಳಿಂದ ತಿಳಿದುಬಂದಿದೆ. 4ನೇ ತ್ರೈಮಾಸಿಕದಲ್ಲಿ ಕೃಷಿ, ಅರಣ್ಯ ಮತ್ತು ಮೀನುಗಾರಿಕೆ ವಲಯಗಳು ಶೇಕಡ 5.2, ಗಣಿಗಾರಿಕೆ ಶೇಕಡ 6.4 ಮತ್ತು ಉತ್ಪಾದನಾ ವಲಯ ಶೇಕಡ 5.3ರಷ್ಟು ಬೆಳವಣಿಗೆ ಸಾಧಿಸಿದೆ. ಆದರೆ ಕಟ್ಟಡ ನಿರ್ಮಾಣ ವಲಯದ ಪ್ರಗತಿ ಶೇಕಡ 3.7ಕ್ಕೆ ಕುಸಿದಿದೆ.

* * *


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.____________________________________________ date ________________

Name (in block letters) : ________________________________________________

Subscriber's profile : Student / Academician / Institution / Others

Address : ________________________________________________

________________________________________________

PIN : ________________________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number

**To Subscribe Online**

*Log on to*

**http://publicationsdivision.nic.in/,**

*in collaboration with* **bharatkosh.gov.in**